ಡಾ. ಭೀಮರಾವ್ ಗಸ್ತಿಯವರ 'ವಾಲ್ಮೀಕಿ' ಆತ್ಮಕಥನ ವಿಶ್ಲೇಷಣೆ

(ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಸಂಪ್ರಬಂಧ)

ಸಂಶೋಧಕರು

ಹನುಮಂತಪ್ಪ ಜಿ.

ನೊಂದಣಿ ಸಂಖ್ಯೆ : ಕೆ.ಯು.ಕೆ.ಎಸ್/೦೦೫೮೯

ಮಾರ್ಗದರ್ಶಕರು

ಡಾ. ರಹಮತ್ ತರೀಕೆರೆ

ಪ್ರಾಧ್ಯಾಪಕರು

ಭಾಷಾ ನಿಕಾಯ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

೨೦೧೩

1021

ಡಾ. ಭೀಮರಾವ್ ಗಸ್ತಿಯವರ 'ವಾಲ್ಮೀಕಿ' ಆತ್ಮಕಥನ ವಿಶ್ಲೇಷಣೆ

(ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಸಂಪ್ರಬಂಧ)

ಸಂಶೋಧಕ

ಹನುಮಂತಪ್ಪ ಜಿ.

ಮಾರ್ಗದರ್ಶಕರು

ಡಾ. ರಹಮತ್ ತರೀಕೆರೆ

ಪ್ರಾಧ್ಯಾಪಕರು

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ -೫೮೩ ೨೭೬

೨೦೧೩

ಘೋಷಣಾ ಪತ್ರ

ಡಾ. ಭೀಮರಾವ್ ಗಸ್ತಿಯವರ 'ವಾಲ್ಮೀಕಿ' ಆತ್ಮಕಥನದ ವಿಶ್ಲೇಷಣೆ ಎಂಬ ಸಂಪ್ರಬಂಧವನ್ನು **ಡಾ. ರಹಮತ್ ತರೀಕೆರೆ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸುತ್ತಿದ್ದೇನೆ. ಈ ಸಂಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ. ಇದರ ಯಾವುದೇ ಭಾಗ ಎಲ್ಲಿಯೂ ಪ್ರಕಟವಾಗಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಹನುಮಂತಪ್ಪ. ಜಿ

ಹನುಮಂತಪ್ಪ. ಜಿ.
ಸಂಶೋಧನಾ ವಿದ್ಯಾರ್ಥಿ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ : ವಿದ್ಯಾರಣ್ಯ

ದಿನಾಂಕ : 31/7/2013

ಮಾರ್ಗದರ್ಶಕರ ಪ್ರಮಾಣಪತ್ರ

ಡಾ. ಭೀಮರಾವ್ ಗಸ್ತಿಯವರ 'ವಾಲ್ಮೀಕಿ' ಆತ್ಮಕಥನದ ವಿಶ್ಲೇಷಣೆ ಎಂಬ ಸಂಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಗಾಗಿ **ಹನುಮಂತಪ್ಪ. ಜಿ.** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ ಪ್ರಸ್ತುತ ಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಇಲ್ಲವೆ ಪ್ರಕಟಣೆಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಡಾ. ರಹಮತ್ ತರೀಕೆರೆ
ಮಾರ್ಗದರ್ಶಕರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ : ವಿದ್ಯಾರಣ್ಯ

ದಿನಾಂಕ : 31/7/13

ಪರಿವಿಡಿ

ಅಧ್ಯಾಯ – ಒಂದು

ಅಧ್ಯಯನದ ಉದ್ದೇಶ, ಮಹತ್ವ, ವ್ಯಾಪ್ತಿ ಹಾಗೂ ವಿಧಾನ

ಅಧ್ಯಾಯ - ೧

ಅಧ್ಯಯನದ ಉದ್ದೇಶ, ಮಹತ್ವ, ವ್ಯಾಪ್ತಿ ಹಾಗೂ ವಿಧಾನ

ಪ್ರಸ್ತಾವನೆ: ಪಾಶ್ಚಾತ್ಯ ಸಾಹಿತ್ಯ ಪ್ರೇರಣೆ ಮತ್ತು ಪ್ರಭಾವದಿಂದ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಕೆಲವು ಗುರುತರವಾದ ಪಲ್ಲಟಗಳು ಸಂಭವಿಸಿದವು. ಅವುಗಳಲ್ಲಿ ಮುಖ್ಯವಾದುದು ಕಾದಂಬರಿ, ಸಣ್ಣಕಥೆ, ಕಾವ್ಯ, ವಿಮರ್ಶೆ, ಪ್ರಬಂಧ ಮತ್ತು ಜೀವನ ಚರಿತ್ರೆ ಹೀಗೆ ಹಲವಾರು ಪ್ರಕಾರಗಳು ಹುಟ್ಟಿ ಬೆಳೆದಿದ್ದು. ಹೀಗೆ ಬೆಳೆದ ಪ್ರಕಾರಗಳಲ್ಲಿ ಆತ್ಮಕಥೆ ಪ್ರಕಾರವೂ ಒಂದು. ವ್ಯಕ್ತಿ ತನ್ನ ಬದುಕಿನಲ್ಲಾದ ನೋವು-ನಲಿವು, ಆಸರಿಕೆ-ಬೇಸರಿಕೆ, ಒಳಿತು-ಕೆಡಕು, ಸಿಹಿ-ಕಹಿ ಘಟನೆಗಳನ್ನು ಲಿಖಿತರೂಪದಲ್ಲಿ ನಿರೂಪಿಸುವಿಕೆಯೇ ಆತ್ಮಕಥೆ. ಸಾಮಾನ್ಯ ವ್ಯಕ್ತಿಯಿಂದ ಹಿಡಿದು ಕೀರ್ತಿಪಡೆದ ಗಣ್ಯವ್ಯಕ್ತಿಯವರೆಗೆ ತಮ್ಮ ತಮ್ಮ ಜೀವನದ ಅನುಭವಗಳನ್ನು ದಾಖಲಿಸಿಕೊಳ್ಳುವ ಒತ್ತಾಸೆ ಏರ್ಪಡುತ್ತದೆ. ವ್ಯಕ್ತಿಯ ಬಾಳಿನ ಕತೆಯು ಆತ್ಮಕಥೆ ಮತ್ತು ಜೀವನ ಚರಿತ್ರೆ ಎರಡರಲ್ಲೂ ಕಾಣಿಸಿಕೊಳ್ಳುತ್ತದೆ. ಆದರೆ ವ್ಯಕ್ತಿ ತನ್ನ ಜೀವನ ವಿಚಾರಗಳನ್ನು ತಾನೇ ಬರೆದುಕೊಂಡಲ್ಲಿ ಆತ್ಮಕಥೆ ಎನಿಸಿಕೊಳ್ಳುತ್ತದೆ. ಆ ವ್ಯಕ್ತಿಯ ಬಗ್ಗೆ ಇತರರು ತಿಳಿದು ಬರೆದಾಗ ಅದು ಜೀವನ ಚರಿತ್ರೆಯಾಗುತ್ತದೆ. ವ್ಯಕ್ತಿ ತನ್ನ ಬಾಳಿನ ಬಗ್ಗೆ ತಾನೇ ಬರೆದುಕೊಂಡಾಗ ಅದು ಪಡೆದುಕೊಳ್ಳುವ ಸ್ವರೂಪಕ್ಕೂ ಇತರರು ಬರೆದಾಗ ಪಡೆದುಕೊಳ್ಳುವ ಸ್ವರೂಪಕ್ಕೂ ತಾತ್ವಿಕವಾಗಿ ವ್ಯತ್ಯಾಸವಾಗುತ್ತದೆ. ಆತ್ಮಕಥೆಯಲ್ಲಿ ಬರುವ ಮಾಹಿತಿ ಹಾಗೂ ಅನುಭವಗಳಿಗೆ ಅದನ್ನು ಬರೆದವರೇ ಹೊಣೆಗಾರಿಕೆಯನ್ನು ಹೊರಬೇಕಾಗುತ್ತದೆ.

ಸಾಹಿತ್ಯದಲ್ಲಿ ಜೀವನ ಚರಿತ್ರೆ ಹಾಗೂ ಆತ್ಮಕಥೆಗಳ ನಡುವಿನ ವ್ಯತ್ಯಾಸ ಈಗಾಗಲೇ ಸ್ಪಷ್ಟವಾಗಿದೆ. ಆದರೆ ಕೆಲ ವಿದ್ವಾಂಸರು ಆತ್ಮಕಥೆ ಹಾಗೂ ಆತ್ಮಚರಿತ್ರೆಗಳ ನಡುವೆ ಸೂಕ್ಷ್ಮವಾದ ವ್ಯತ್ಯಾಸ ಹುಡುಕುವುದುಂಟು. ಅವರ ಪ್ರಕಾರ ವ್ಯಕ್ತಿಯೊಬ್ಬರು ತಮ್ಮ ಬದುಕಿನ ಕಥೆಯನ್ನು ತಾವೇ ಬರೆದುಕೊಂಡಾಗ ಆತ್ಮಕಥೆಯಾಗುತ್ತದೆ. ಸಮಾಜದ ಮಧ್ಯೆ ಬದುಕುವ ವ್ಯಕ್ತಿಗಳು ತಮ್ಮ ಬದುಕಿನ ಕಥೆಯೊಂದಿಗೆ ತಮ್ಮ

ಕಾಲದ ಸಂಸ್ಕೃತಿ ಸಾಮಾಜಿಕ ಸ್ಥಿತಿಗತಿ, ತಮ್ಮ ಸುತ್ತಲಿನ ಪರಿಸರ, ಇತಿಹಾಸ, ವರ್ಗ ಸಂಘರ್ಷ, ಶೋಷಣೆ ಮುಂತಾದ ಹಲವಾರು ವಿಷಯಗಳನ್ನು ಆತ್ಮಕಥೆಯಲ್ಲಿ ಹೇಳಿರುವುದರಿಂದ ಅದು ಆತ್ಮಚರಿತ್ರೆ ಆಗುತ್ತದೆ ಎಂದು ಹೇಳುವವರು ಇದ್ದಾರೆ.

ವಿಶಾಲಾರ್ಥದಲ್ಲಿ ನೋಡಿದಾಗ ಯಾವುದೇ ಸ್ವಂತದ ವಿಷಯವೂ ಕೂಡ ಆತ್ಮಕಥೆಯಾಗುತ್ತದೆ. ಇದಕ್ಕೆ ಹತ್ತಿರದ ಮಾದರಿಗಳಾದ ವೈಯಕ್ತಿಕ ಪ್ರಬಂಧಗಳು, ದಿನಚರಿಗಳು, ಪ್ರವಾಸದ ಅನುಭವಗಳು ಇವೆಲ್ಲ ಸ್ವಂತದ ವಿಷಯವನ್ನೇ ಒಳಗೊಂಡಿರುತ್ತವೆ. ಇವುಗಳಲ್ಲಿ ವ್ಯಕ್ತಿಗಳ ಸಂಪೂರ್ಣ ಜೀವನಚರಿತ್ರೆ ಇರದೇ ಇದ್ದರೂ ಕೂಡ ಅವರ ಬದುಕಿಗೆ ಸಂಬಂಧಿಸಿದ ಮಹತ್ವದ ಘಟನೆಗಳ ದಾಖಲಾತಿ ಇರುತ್ತದೆ.

ಸಾಮಾನ್ಯವಾಗಿ ಅರ್ಥಪೂರ್ಣವಾದ ಆತ್ಮಕಥೆಯ ವ್ಯಕ್ತಿಯೊಬ್ಬರ ಚರಿತ್ರೆಯಾಗಿರುವಂತೆ ಅವರು ಜೀವಿಸುತ್ತಿರುವ ಸಮಾಜದ ಮತ್ತು ಪರಿಸರದ ಚರಿತ್ರೆಯೂ ಆಗಿರುತ್ತದೆ. ಕಥಾನಾಯಕರು ತಮ್ಮ ಸುತ್ತಮುತ್ತಲಿನ ಜೀವನವನ್ನು ತಾವು ಕಂಡಂತೆ ಮತ್ತು ಅನುಭವಿಸಿದಂತೆ ದಾಖಲಿಸುತ್ತಾರೆ. ತಮ್ಮ ಅನುಭವದ ಜೊತೆಗೆ ತಮ್ಮ ಚಿಂತನೆಗಳನ್ನು ಸಹ ದಾಖಲಿಸಿರುತ್ತಾರೆ. ಈ ಕಾರಣಕ್ಕೆ ಆತ್ಮಚರಿತ್ರೆಯು ಕಟ್ಟುಕತೆಯಲ್ಲ. ಅದರಲ್ಲಿ ಅಭಿವ್ಯಕ್ತವಾಗುವ ಅನುಭವಗಳು ಗಾಢವೂ ವೈಶಿಷ್ಟ್ಯವೂ ಪ್ರಾಮಾಣಿಕವೂ ಆಗಿದ್ದರೆ, ಓದುಗರ ಮೇಲೆ ಪರಿಣಾಮ ಬೀರಬಲ್ಲವು. ಈ ಕಾರಣದಿಂದಾಗಿ ಸಾರ್ವಜನಿಕ ಜೀವನದಲ್ಲಿ ಕೆಲಸ ಮಾಡಿದ ಅಧಿಕಾರಿಗಳು ಹಾಗೂ ರಾಜಕಾರಣಿಗಳು, ಸಾಹಿತಿಗಳು, ಸಂಗೀತಗಾರರು, ಸಿನಿಮಾ ಮತ್ತು ರಂಗಭೂಮಿಯ ನಟ ನಟಿ, ಸಾಮಾಜಿಕ ಕಾರ್ಯಕರ್ತರು, ಹೋರಾಟಗಾರರು, ಬರೆದ ಆತ್ಮಕಥೆಗಳು ಓದುಗರ ಆಲೋಚನ ಕ್ರಮವನ್ನು ಬದಲಾಯಿಸುವಷ್ಟು ಪರಿಣಾಮಕಾರಿಯಾಗಿವೆ. ಹೀಗೆ ಪರಿಣಾಮ ಬೀರುವ ಶಕ್ತಿ ಗಣ್ಯರೆನಿಸಿರುವ ವ್ಯಕ್ತಿಗಳ ಆತ್ಮಕಥೆಗಳಲ್ಲಿ ಮಾತ್ರ ಇರಬೇಕಿಲ್ಲ. ಸಾಮಾನ್ಯವಾಗಿ ಬದುಕಿದವರು ಬರೆಯುವ ಆತ್ಮಕಥೆಗಳಲ್ಲಿಯೂ ಸಹ ಇರಬಲ್ಲದು. ಅನೇಕ ಸಲ ಈ ಸಾಮಾನ್ಯರ ಬದುಕಿನಲ್ಲಿ ಮಹತ್ವದ ಘಟನೆಗಳು ಜರುಗಿರುತ್ತವೆ. ಅಲ್ಲಿ ಉದಾತ್ತವಾದ ಮೌಲ್ಯಗಳು ಅಡಗಿರುತ್ತವೆ. ಆದರೆ ಸಾಮಾನ್ಯರು ಈ ಆತ್ಮಕಥೆಗಳನ್ನು ಸಾಮಾನ್ಯವಾಗಿ ಬರೆಯುವುದಿಲ್ಲವಾಗಿ ನಮಗೆ ಅವು ಬರೆಹದಲ್ಲಿ ಕಾಣಸಿಗುವುದಿಲ್ಲ. ಪ್ರತಿಭಾವಂತ ಆತ್ಮಚರಿತ್ರೆಕಾರರು ತಮ್ಮ ಜೀವನದ ಅನುಭವವನ್ನು ಹೇಳುವ ನೆಪದಲ್ಲಿ ತಮ್ಮ ಪರಿಸರದ ಅನುಭವಗಳನ್ನೂ ದಾಖಲಿಸುವ ಮೂಲಕ ಒಂದು ಕಾಲದ ಚರಿತ್ರೆಯನ್ನು ಕಟ್ಟಿಕೊಡುವ ಕೆಲಸವನ್ನು ಮಾಡುತ್ತಿರುತ್ತಾರೆ. ಇದಕ್ಕೆ ಮೈಸೂರು ಸಂಸ್ಥಾನದಲ್ಲಿ ದೊಡ್ಡ ಅಧಿಕಾರಿಯಾಗಿದ್ದ ನವರತ್ನ ರಾಮರಾವ್ ಅವರ 'ಕೆಲವು ನೆನಪುಗಳು' ಒಳ್ಳೆಯ ನಿದರ್ಶನವಾಗಿದೆ.

ಭಾರತೀಯ ಸಾಹಿತ್ಯದ ಮಟ್ಟಿಗೆ ಹೇಳುವುದಾದರೆ "೧೬ನೇ ಶತಮಾನದಲ್ಲಿ ಬನಾರಸಿದಾಸ್ ಎಂಬ ಜೈನ ವ್ಯಾಪಾರಿಯು ಬರೆದ 'ಅರ್ಧಕಥಾನಕ' ಎಂಬ ಆತ್ಮಕಥೆಯೇ ಮೊಟ್ಟಮೊದಲನೆಯದು ಎಂದು ಸಾಹಿತ್ಯ ಚರಿತ್ರಕಾರರು ಹೇಳುವರು. ಮೊಗಲ್ ಚಕ್ರವರ್ತಿ ಬಾಬರ್ ಬರೆದ 'ಬಾಬರ್‌ನಾಮಾ'

ಕೂಡ ಅವನ ಅನುಭವಗಳ ಕಥನವಾಗಿದೆ. ಆದರೂ ಭಾರತೀಯ ಭಾಷೆಗಳಲ್ಲಿ ಆತ್ಮಕಥೆಗಳು ತುಂಬಾ ಕಡಿಮೆ. ಅವು ೧೯–೨೦ನೇ ಶತಮಾನಗಳಲ್ಲಿ ಪಾಶ್ಚಾತ್ಯ ಸಾಹಿತ್ಯದ ಪ್ರಭಾವ ಪ್ರೇರಣೆಯಿಂದ ಹುಲುಸಾಗಿ ಬೆಳೆಯತೊಡಗಿದವು. "ಪಾಶ್ಚಿಮಾತ್ಯರಲ್ಲಿ ಆತ್ಮಕಥೆಗಳು ಬಹಳ ಮುಖ್ಯ ಸ್ಥಾನ ಪಡೆದುಕೊಂಡಿವೆ. ಇಂಗ್ಲಿಷ್‌ನಲ್ಲಿ ವಿದ್ವಾಂಸ ಜಾನ್ಸನ್‌ನ ಆತ್ಮಚರಿತ್ರೆಯು ಅತ್ಯುತ್ತಮ ಚರಿತ್ರೆ ಎಂದು ಹೆಸರಾಗಿದೆ. ರಶಿಯನ್ ಲೇಖಕರಾದ ಟಾಲ್‌ಸ್ಟಾಯ್, ಮಾಕ್ಸಿಂ ಗೋರ್ಕಿ ಲೇಖಕರ ಆತ್ಮಕಥೆಗಳು ಜನಪ್ರಿಯವಾಗಿವೆ."[೨]

ಭಾರತೀಯರ ಆತ್ಮಕಥೆಗಳಲ್ಲಿ ಬದುಕಿನ ಸಾಧನೆಗಳನ್ನು ಬಿಂಬಿಸುವ ಪ್ರವೃತ್ತಿ ಹೆಚ್ಚು. ತಮ್ಮ ಜೀವನದ ದೋಷಗಳನ್ನು ಬಹಿರಂಗಗೊಳಿಸಬಾರದು ಎಂಬ ಮಡಿವಂತಿಕೆಯ ಮನೋಭಾವ ಜಾಸ್ತಿ. ಆದರೆ ಪಾಶ್ಚಿಮಾತ್ಯರಲ್ಲಿ ಈ ಮನೋಭಾವ ಕಡಿಮೆ, ಇದಕ್ಕೆ ಕಾರಣ "ಕ್ರೈಸ್ತಮತೀಯರಲ್ಲಿ ಇರುವ ಪಾಪ ನಿವೇದನೆಯ ಆಚರಣೆ. ತಾವು ಮಾಡಿದ ತಪ್ಪನ್ನು ಚರ್ಚಿನಲ್ಲಿ ಪಾದ್ರಿಯ ಎದುರಿಗೆ ಏಕಾಂತದಲ್ಲಿ ಹೇಳಿಕೊಳ್ಳುವ ಕನ್‌ಫೆಶನ್ ಎಂಬ ಪದ್ಧತಿ ಅವರಲ್ಲಿದೆ. ಇದರಿಂದಾಗಿ ಅನೇಕರು ಪ್ರಾಯಶ್ಚಿತ್ತ ಎನ್ನುವ ರೀತಿಯಲ್ಲಿ ತಮ್ಮ ಆತ್ಮಕಥೆಯನ್ನು ಬರೆದಿರುವುದುಂಟು. ಇದಕ್ಕೆ ಟಾಲ್‌ಸ್ಟಾಯ್ ಅವರು ಬರೆದ 'ಕನ್‌ಫೆಶನ್' (ತಪ್ಪೊಪ್ಪಿಗೆ) ಎಂಬ ಆತ್ಮಕಥೆಯು ಸಾಕ್ಷಿಯಾಗಿದೆ. ಈ ಆತ್ಮಕಥೆಯ ಪರಿಣಾಮ ಮಹಾತ್ಮಗಾಂಧಿಯವರ ಮೇಲಾಯಿತು, ಭಾರತೀಯ ಸಾಹಿತ್ಯದಲ್ಲಿ ಪರಿತಾಪದ ದನಿಯಲ್ಲಿ ಬರೆದ ಆತ್ಮಕಥೆಗಳಲ್ಲಿ ಗಾಂಧೀಜಿಯವರ 'ನನ್ನ ಸತ್ಯಾನ್ವೇಷಣೆ' ಸಹ ಒಂದು. ಇದರ ಆರಂಭದಲ್ಲಿ ಗಾಂಧೀಜಿ ಆತ್ಮಕಥೆಯನ್ನು ಕುರಿತು ನಿಜವಾದ ಆತ್ಮಕಥೆ ಬರೆಯುವ ಪ್ರಯತ್ನ ನನ್ನ ಉದ್ದೇಶವಲ್ಲ ಸತ್ಯವನ್ನು ಕುರಿತು ನಾನು ನಡೆಸಿದ ಹಲವಾರು ಪ್ರಯೋಗಗಳ ಹೊರತಾಗಿ ನನ್ನ ಬಾಳುವೆಯಲ್ಲಿ ಬೇರಾವುದೂ ಇಲ್ಲ."[೩]

ಭಾರತದಲ್ಲಿ ೧೯ನೇ ಶತಮಾನದಲ್ಲಿ ಆರಂಭವಾದ ಆತ್ಮಕಥೆಗಳು ಮರಾಠಿ, ತೆಲುಗು, ತಮಿಳು, ಪಂಜಾಬಿ, ಹಿಂದಿ, ಗುಜರಾತಿ, ಕನ್ನಡ ಮುಂತಾದ ಭಾಷೆಗಳಲ್ಲಿ ಕಾಣಿಸಿಕೊಳ್ಳತೊಡಗಿದವು. ಕನ್ನಡದಲ್ಲಿ ನವೋದಯ ಲೇಖಕರಾದ ಕುವೆಂಪು, ಕಾರಂತ, ಮಾಸ್ತಿ ಅವರು ತಮ್ಮ ಆತ್ಮಕಥೆಗಳನ್ನು ಬರೆದರು. ನಂತರ ಪ್ರಗತಿಶೀಲ, ನವ್ಯದಲಿತ–ಬಂಡಾಯ ಪಂಥಗಳಲ್ಲಿ ಆತ್ಮಕಥೆಗಳು ಹೆಚ್ಚು ವೈವಿಧ್ಯಮಯವಾಗಿ ಕಾಣಿಸಿಕೊಳ್ಳತೊಡಗಿದವು. ದಲಿತರು ಸಮಾಜದ ಕೆಳವರ್ಗದ ಜನರು ಆತ್ಮಕಥೆಗಳು ಬರೆಯಲಾರಂಭಿಸಿದಾಗ ಹೊಸದೊಂದು ಆಯಾಮವೇ ಈ ಪ್ರಕಾರಕ್ಕೆ ಬಂದಿತು. ಎಂ. ಲಕ್ಷ್ಮಣ, ಸಿದ್ದಲಿಂಗಯ್ಯ, ಅರವಿಂದ ಮಾಲಗತ್ತಿ, ತುಂಬಾಡಿ ರಾಮಯ್ಯ, ಎ.ಎಂ. ಮದರಿ, ದು. ಸರಸ್ವತಿ ಇವರಲ್ಲಿ ಪ್ರಮುಖರು. ಮರಾಠಿ ಭಾಷೆಯಲ್ಲಿ ಬಂದಿರುವ ಆತ್ಮಕತೆಗಳಿಗೆ ಹೋಲಿಸಿದರೆ ಕನ್ನಡದಲ್ಲಿ ಆತ್ಮಕಥೆಗಳು ಹೆಚ್ಚಾಗಿ ಬೆಳೆದಿಲ್ಲವೆಂದು ಕೆಲವು ಭಾವಿಸುತ್ತಾರೆ. ಕನ್ನಡದಲ್ಲಿ ಪ್ರಕಟವಾಗಿರುವ ಆತ್ಮಕಥೆಗಳಲ್ಲಿ ಅರ್ಧದಷ್ಟು ಆತ್ಮಕಥೆಗಳು ಬೇರೆ ಬೇರೆ ಭಾಷೆಗಳಿಂದ ಕನ್ನಡಕ್ಕೆ ಅನುವಾದಗೊಂಡು ಬಂದಿವೆ. ಇವು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿವೆ ಹಾಗೂ ಕನ್ನಡ ಲೇಖಕರಿಗೆ ಆತ್ಮಕತೆ ಬರೆಯಲು ೨ ಪರೋಕ್ಷವಾಗಿ ಪ್ರೇರಣೆ ನೀಡಿವೆ. ಗಾಂಧಿಜಿಯವರ

ಆತ್ಮಕತೆಯು ಕಡಿದಾಳ್ ಮಂಜಪ್ಪ, ಎಚ್.ಎನ್.ನರಸಿಂಹಯ್ಯ, ಕೋಚೆ ಮುಂತಾದ ರಾಷ್ಟ್ರೀಯ ಹೋರಾಟಗಾರರಿಗೆ ಆತ್ಮಕತೆ ಬರೆಯಲು ಪರೋಕ್ಷವಾಗಿ ಪ್ರೇರೇಪಣೆ ನೀಡಿವೆ.

ಯಾವುದೇ ಭಾಷೆಯಲ್ಲಿ ಆತ್ಮಕಥೆಗಳು ಬಹುಮುಖ್ಯವಾದ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ದಾಖಲೆಗಳು. ಯಾಕೆಂದರೆ ಒಂದು ನಾಡಿನ ಸಂಸ್ಕೃತಿ ಮತ್ತು ಚರಿತ್ರೆಯ ಕೆಲವು ವಿಶಿಷ್ಟ ಸಂಗತಿಗಳನ್ನು ಅವುಗಳ ಮೂಲಕ ತಿಳಿಯಬಹುದು. ಪ್ರತಿ ಸಮುದಾಯಕ್ಕೂ ಅದರದ್ದೇ ಆದ ಅನುಭವಲೋಕವಿರುತ್ತದೆ. ಈ ನಿಟ್ಟಿನಲ್ಲಿ ಎ.ಎಂ. ಮದರಿಯವರ 'ಗೊಂದಲಿಗ್ಯಾ', ಲಕ್ಷ್ಮಣ ಗಾಯಕವಾಡರ 'ಉಚಾಲ್ಯಾ' ಸಾರಾ ಅಬೂಬಕರ್ ಅವರ 'ಮುಸ್ಲಿಂ ಹುಡುಗಿ ಶಾಲೆ ಕಲಿತಿದ್ದು', ಬರೆಹವು ಪರಿಣಾಮಕಾರಿಯಾಗಿದೆ.

ಕನ್ನಡ ಸಾಹಿತ್ಯದಲ್ಲಿ ಸೃಜನಶೀಲವಾಗಿ ಬೆಳೆಯಲಾರಂಭಿಸಿದ ಆತ್ಮಕಥೆಗಳಲ್ಲಿ ಸಮಾಜದ ಕೆಳ ಸಮುದಾಯದ ಜನರು ಬರೆದ ಆತ್ಮಕಥೆಗಳು ವಿಶಿಷ್ಟವಾಗಿವೆ. ಸಿದ್ದಲಿಂಗಯ್ಯನವರ 'ಊರು-ಕೇರಿ', ದಕ್ಷಿಣ ಕರ್ನಾಟಕದ ದಲಿತ ಸಮುದಾಯದ ನೋವು-ನಲಿವಿನೊಂದಿಗೆ ವಿಶಿಷ್ಟ ಜಗತ್ತನ್ನು ಕಟ್ಟಿಕೊಡುತ್ತದೆ; ಅರವಿಂದ ಮಾಲಗತ್ತಿಯವರ 'ಗೌರ್ಮೆಂಟ್ ಬ್ರಾಹ್ಮಣ' ಉತ್ತರ ಕರ್ನಾಟಕದ ದಲಿತ ಸಮಾಜದ ಅಪಮಾನ ಮತ್ತು ಸಂಕಟಗಳ ಮುಖವನ್ನು ಅನಾವರಣಗೊಳಿಸುತ್ತದೆ. ಎ.ಎಂ. ಮದರಿಯವರ 'ಗೊಂದಲಿಗ್ಯಾ' ಅಲೆಮಾರಿ ಸಮುದಾಯದ ಇಡೀ ಚಿತ್ರಣವನ್ನೇ ಕಣ್ಣಮುಂದೆ ತಂದುನಿಲ್ಲಿಸುತ್ತದೆ. ಲಕ್ಷ್ಮಣ ಗಾಯಕವಾಡರ 'ಉಚಲ್ಯಾ' ಗಂಟುಕಳ್ಳರೆಂದು ಸಮಾಜದಿಂದ ಹೀಯಾಳಿಸಲ್ಪಟ್ಟಿರುವ ಸಮುದಾಯದ ಜೀವನಕ್ರಮವನ್ನು ತಿಳಿಸುವುದು. ಇದರಂತೆ ಬೆಳಗಾವಿಯ ಭೀಮರಾವ್ ಗಸ್ತಿಯವರ '**ವಾಲ್ಮೀಕಿ**' ಎಂಬ ಹೆಸರಿನಲ್ಲಿರುವ ಪ್ರಸ್ತು ಆತ್ಮಕಥನವು, ಬೇಡ ಸಮುದಾಯದ ವ್ಯಕ್ತಿಯೊಬ್ಬರ ಸಾರ್ವಜನಿಕ ಕ್ಷೇತ್ರದ ಜೀವನಾನುಭವಗಳನ್ನು ಹಾಗೂ ಬೇಡ ಸಮುದಾಯದ ತಲ್ಲಣಗಳನ್ನು ವಿವರಿಸುತ್ತದೆ. ಹೀಗೆ ಆತ್ಮಕಥೆಗಳು ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟ ಪ್ರಕಾರವಾಗಿ ಬೆಳೆದಿವೆ ಮಾತ್ರವಲ್ಲ, ಕರ್ನಾಟಕದ ಬೇರೆ ಬೇರೆ ಸಮುದಾಯಗಳನ್ನು ಅರ್ಥಮಾಡಿಕೊಳ್ಳುವುದಕ್ಕೂ ಪ್ರಮುಖ ಆಕರಗಳಾಗಿವೆ.

ಮನುಷ್ಯರು ಸಮುದಾಯಜೀವಿಗಳು. ಆದರೆ ತಮ್ಮ ವ್ಯಕ್ತಿವಿಶಿಷ್ಟತೆಯ ಕಾರಣದಿಂದ ಸಮುದಾಯದ ಜತೆ ಸಂಘರ್ಷವನ್ನೂ ಅವರು ಮಾಡುವರು. ಪ್ರತಿಯೊಬ್ಬ ವ್ಯಕ್ತಿಗೂ ತನ್ನದೇ ಆದ ಅನುಭವಗಳು ಇರುತ್ತವೆ. ಬಾಳಿನಲ್ಲಿ ನಾನಾ ಕಷ್ಟಪರಂಪರೆಯಲ್ಲಿ ಸಿಲುಕಿ, ಅನೇಕ ಸವಾಲುಗಳನ್ನು ಎದುರಿಸಿ ಕೆಲವರು ಯಶಸ್ಸಿನ ಶಿಖರ ಏರುತ್ತಾರೆ. ದೊಡ್ಡ ಸಾಧನೆ ಮಾಡುತ್ತಾರೆ. ಅಂತಹವರು ತಮ್ಮ ಅನುಭವಗಳನ್ನು ಆಪ್ತರ ಮುಂದೆ ಅಭಿವ್ಯಕ್ತಿಸಬಹುದು. ಒಂದೊಮ್ಮೆ ಯಾರೊಂದಿಗೆಯೂ ತಮ್ಮ ಅನುಭವ ಹಂಚಿಕೊಳ್ಳದೆ ಹೋದರೆ ಸಾಯುವ ತನಕ ಅವರಲ್ಲಿಯೇ ಅವು ಉಳಿದು ಕೊನೆಗೊಮ್ಮೆ ಅಳಿದುಹೋಗಬಹುದು. ಆದರೆ ಅವನ್ನು ಅವರು ಬರೆಹರೂಪದಲ್ಲಿ ದಾಖಲಿಸಿದಾಗ ಅವರ ಜೀವನ ವೃತ್ತಾಂತವಾಗಿ ಉಳಿದುಕೊಳ್ಳುತ್ತವೆ. ಆತ್ಮಕತೆಗಳನ್ನು ಓದುವ ಅನೇಕರು ತಮ್ಮ ಜೀವನವನ್ನು ರೂಪಿಸಿಕೊಳ್ಳಲು ಇವು

ನೆರವಾಗುತ್ತವೆ.

ಸಾಮಾನ್ಯವಾಗಿ ಸಾರ್ವಜನಿಕ ಬದುಕಿನಲ್ಲಿ ಮಹತ್ವದ ಸ್ಥಾನವನ್ನು ಪಡೆದವರು ಆತ್ಮಕಥೆಯನ್ನು ಬರೆಯುವುದುಂಟು. ಜೀವನದಲ್ಲಿ ದೊಡ್ಡ ಸಾಧನೆ ಮಾಡಿದ ವ್ಯಕ್ತಿಗಳ ಬದುಕು ಹೇಗಿರುತ್ತದೆ ಎಂಬ ಕುತೂಹಲವೂ ಓದುಗರಲ್ಲಿ ಸಾಮಾನ್ಯವಾಗಿ ಇರುತ್ತದೆ. ಈ ಕಾರಣಕ್ಕಾಗಿಯೇ ಗಾಂಧೀಜಿ, ಟಾಲ್‌ಸ್ಟಾಯ್, ಮುಂತಾದವರ ಆತ್ಮಕಥೆಗಳು ಜನಪ್ರಿಯವೂ ಆಗಿವೆ. ಮಹತ್ವದ ಸಂಗತಿಯೆಂದರೆ, ಆತ್ಮಕತೆಗಳು ಅದನ್ನು ಬರೆದವರ ಬದುಕನ್ನಷ್ಟೇ ಅಲ್ಲದೆ, ಅವು ಹುಟ್ಟಿದ ಸಮುದಾಯಗಳ ಸಾಮಾಜಿಕ ಬದುಕನ್ನು, ಅವರ ಕಾಲಘಟ್ಟದ ಸಾಮಾಜಿಕ ಬದುಕಿನ ವಿವರಗಳನ್ನೂ ಒಳಗೊಂಡಿರುತ್ತವೆ. ಈ ಕಾರಣಕ್ಕಾಗಿ ಆತ್ಮಕತೆಗಳನ್ನು ಸಮುದಾಯಗಳ ಪರೋಕ್ಷ ಚರಿತ್ರೆಯೆಂದೂ ಕರೆಯಬಹುದು.

ಸಮಾಜದಲ್ಲಿರುವ ಬೇರೆ ಬೇರೆ ಸಮುದಾಯಗಳ ಈ ಪರೋಕ್ಷ ಚರಿತ್ರೆಯು ಕಥೆ, ಕಾದಂಬರಿ ಮುಂತಾದ ಪ್ರಕಾರಗಳಲ್ಲಿ ಕಲಾತ್ಮಕವಾಗಿ ಪ್ರಕಟವಾಗುವುದುಂಟು. ನಿದರ್ಶನಕ್ಕಾಗಿ ಬೆಳಗಾವಿ ಸೀಮೆಯ ದಿಗಂಬರ ಜೈನರ ಜೀವನವಿವರಗಳು ಮಿರ್ಜಿ ಅಣ್ಣಾರಾಯರ 'ನಿಸರ್ಗ' ಕಾದಂಬರಿಯಲ್ಲಿ ಬರುವುದು. ಆದರೆ ಆತ್ಮಕಥೆಗಳು ವ್ಯಕ್ತಿಯ ವೈಯಕ್ತಿಕ ಅನುಭವಗಳ ಮೂಲಕ ಸಮುದಾಯದ ಕಥೆಯನ್ನು ನಿರೂಪಿಸಲು ಯತ್ನಿಸುತ್ತವೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನವು ಸಮಾಜದ ಅಲಕ್ಷಿತ ಹಾಗೂ ಸಾಮಾಜಿಕವಾಗಿ ಹಿಂದುಳಿದಿರುವ ಸಮುದಾಯಗಳಲ್ಲಿ ಒಂದಾಗಿರುವ ಬೇಡ ಸಮುದಾಯದ ವ್ಯಕ್ತಿಯ ಆತ್ಮಕಥನವನ್ನು ಕುರಿತಾಗಿದೆ. ವ್ಯಕ್ತಿಯು ಆಧುನಿಕ ವಿದ್ಯಾಭ್ಯಾಸ ಪಡೆದು ಸಾಮಾಜಿಕ ಕಾರ್ಯಕರ್ತನಾಗಿ ತನ್ನ ಸಮುದಾಯ ಸಂಘಟನೆಗಾಗಿ ಕೆಲಸ ಮಾಡುತ್ತ ಪಟ್ಟ ಪಾಡನ್ನು ಮಾಡಿದ ಸಾಧನೆಯನ್ನು ಕಂಡ ಸೋಲನ್ನು ಕುರಿತು ಇದರಲ್ಲಿ ಅಪೂರ್ವವಾದ ದಾಖಲೆಗಳಿವೆ.

ಅಧ್ಯಯನದ ಉದ್ದೇಶ ಮತ್ತು ಮಹತ್ವ

೧. ೨೦ನೇ ಶತಮಾನದಲ್ಲಿ ಅಲಕ್ಷಿತ ಸಮುದಾಯದ ವ್ಯಕ್ತಿಯೊಬ್ಬರು ಅಕ್ಷರಜ್ಞಾನ ಪಡೆದು ಸ್ಥಾಪಿತ ವ್ಯವಸ್ಥೆಯೊಂದಿಗೆ ಮಾಡುವ ಸಂಘರ್ಷದ ಸ್ವರೂಪ ಹಾಗೂ ಆ ವ್ಯಕ್ತಿಯನ್ನು ವ್ಯವಸ್ಥೆಯು ಕಂಡ ಬಗೆ ಯಾವುದು ಎಂಬುದನ್ನು ತಿಳಿಯುವುದು ಈ ಅಧ್ಯಯನದ ಉದ್ದೇಶವಾಗಿದೆ. ಹಿಂದುಳಿದ ಸಮುದಾಯದ ವ್ಯಕ್ತಿಯೊಬ್ಬ ಆಧುನಿಕ ಶಿಕ್ಷಣ ಪಡೆಯುವಾಗ ಅನುಭವಿಸುವ ತಾರತಮ್ಯ, ಅಪಮಾನಗಳು ಘೋರವಾಗಿದ್ದು, ಅವುಗಳ ಸ್ವರೂಪವನ್ನು ಇಲ್ಲಿ ಅಧ್ಯಯನ ಮಾಡಲಾಗುವುದು.

೨. ಭಾರತದಲ್ಲಿ ಯಾವುದೇ ಅಲಕ್ಷಿತ ಸಮುದಾಯದ ಅಕ್ಷರಸ್ಥ ವ್ಯಕ್ತಿಗಳು ತನ್ನ ಸಮುದಾಯದ ಏಳಿಗೆಯ ಕನಸನ್ನು ಕಾಣುತ್ತ ಸಂಘಟನೆ ಮಾಡಲು ಆರಂಭಿಸಿದಾಗ, ಪಡೆಯುವ ಅನುಭವಗಳು

ವಿಶಿಷ್ಟವಾಗಿರುತ್ತವೆ. ಅವು ಹೊರಗಿನ ಸಮಾಜದ ಜತೆಗೂ ಸಂಘರ್ಷಕ್ಕಿಳಿಯಬೇಕಾಗುತ್ತದೆ. ಜತೆಗೆ ಬದಲಾವಣೆಯನ್ನು ಅರ್ಥಮಾಡಿಕೊಳ್ಳದ ತಮ್ಮ ಸಮುದಾಯದ ಜನರೊಂದಿಗೂ ಸಂಘರ್ಷ ಎದುರಿಸಬೇಕಾಗುತ್ತದೆ. ಈ ಎರಡು ಬಗೆಯ ಸಂಘರ್ಷಕ್ಕಿಳಿದು ವ್ಯಕ್ತಿಯೊಬ್ಬರು ಸಾಧನೆ ಮಾಡಿದ್ದನ್ನು ತಿಳಿಯುವುದು ಈ ಅಧ್ಯಯನದ ಇನ್ನೊಂದು ಉದ್ದೇಶವಾಗಿದೆ.

೩. ಕನ್ನಡ ಸಾಹಿತ್ಯದಲ್ಲಿ ಕಥೆ ಕಾದಂಬರಿಗಳನ್ನು ಆಕರವಾಗಿಟ್ಟುಕೊಂಡು ಹೆಚ್ಚು ಅಧ್ಯಯನಗಳು ನಡೆದಿವೆ. ಆದರೆ ಆತ್ಮಕತೆಗಳನ್ನು ಇಟ್ಟುಕೊಂಡು ಹೆಚ್ಚು ಅಧ್ಯಯನಗಳು ನಡೆದಿಲ್ಲ. ಈ ಹಿನ್ನೆಲೆಯಲ್ಲಿ ಇದೊಂದು ಅಲಕ್ಷಿತ ಪ್ರಕಾರವಾಗಿದೆ. ಆತ್ಮಕತೆಗಳನ್ನು ಇಟ್ಟುಕೊಂಡು ಅಧ್ಯಯನಗಳು ನಡೆದಿದ್ದರೂ, ಸಾಮಾಜಿಕ ಕಾರ್ಯಕರ್ತನೊಬ್ಬನ ಆತ್ಮಕಥೆ ಇಟ್ಟುಕೊಂಡು ಹೆಚ್ಚು ಅಧ್ಯಯನ ನಡೆದಿಲ್ಲ. ಸಾಮಾಜಿಕ ಕಾರ್ಯಕರ್ತನ ಅಭಿವ್ಯಕ್ತಿಯನ್ನು ಇಟ್ಟುಕೊಂಡು ಅಧ್ಯಯನ ಮಾಡುವುದು ಹೊಸ ನೋಟಗಳಿಗೆ ಕಾರಣವಾಗುವುದು ಎಂದು ಭಾವಿಸಲಾಗಿದೆ.

೪. ಅನಕ್ಷರಸ್ಥರೇ ಹೆಚ್ಚಿರುವ ಸಮುದಾಯದಿಂದ ಬಂದ ಅಕ್ಷರಸ್ಥನೊಬ್ಬ ತನ್ನ ಸಮುದಾಯದ ಸಂಘಟನೆಯಲ್ಲಿ ತೊಡಗಿದಾಗ, ರೂಪುಗೊಳ್ಳುವ ಸಮುದಾಯ ರಾಜಕಾರಣದ ವಿನ್ಯಾಸಗಳು ವಿಶಿಷ್ಟವಾಗಿರುತ್ತವೆ. ಅವನ್ನು ಅರಿಯುವುದು ಇಲ್ಲಿನ ಉದ್ದೇಶಗಳಲ್ಲಿ ಒಂದಾಗಿದೆ.

೫. ಪ್ರಾದೇಶಿಕವಾಗಿ ಉತ್ತರ ಕರ್ನಾಟಕಕ್ಕೆ ಸೇರಿದ ವ್ಯಕ್ತಿಯೊಬ್ಬರ ಆತ್ಮಕಥೆಯು ಹೇಗೆ ಆ ಭಾಗದ ವಿಶಿಷ್ಟ ಸಾಮಾಜಿಕ ರಾಜಕೀಯ ಸಂಗತಿಗಳನ್ನು ಒಳಗೊಳ್ಳುತ್ತದೆ ಎಂಬುದನ್ನು ಗುರುತಿಸುವುದು ಕೂಡ ಈ ಅಧ್ಯಯನದ ಉದ್ದೇಶಗಳಲ್ಲಿ ಒಂದಾಗಿದೆ.

ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಅಧ್ಯಯನಕ್ಕಾಗಿ ಉತ್ತರ ಕರ್ನಾಟಕದ ಅದರಲ್ಲೂ ಬೆಳಗಾವಿ ಸೀಮೆಗೆ ಸೇರಿದ ಬೇಡರ ಸಮುದಾಯದ ಹಿನ್ನೆಲೆಯಿಂದ ಬಂದ ಭೀಮರಾವ್ ಗಸ್ತಿಯವರ 'ವಾಲ್ಮೀಕಿ' ಆತ್ಮಕಥೆ ಅಧ್ಯಯನಕ್ಕಾಗಿ ಆರಿಸಿಕೊಳ್ಳಲಾಗಿದೆ. ಮೂಲತಃ ಇದು ಮರಾಠಿಯಲ್ಲಿ ರಚಿತವಾಗಿದ್ದು, ಕನ್ನಡಕ್ಕೆ ಅನುವಾದಗೊಂಡಿದೆ. ಈ ಆತ್ಮಕತೆಯನ್ನು ಮುಖ್ಯವಾಗಿ ಇಟ್ಟುಕೊಂಡು ಅಧ್ಯಯನ ಮಾಡಲಾಗಿದೆ.

ಅಧ್ಯಯನದ ವಿಧಾನ

೧. ಪ್ರಸ್ತುತ ಅಧ್ಯಯನದಲ್ಲಿ 'ವಾಲ್ಮೀಕಿ' ಆತ್ಮಕಥೆಯ ವಿಶಿಷ್ಟತೆ ಏನು ಎಂಬುದನ್ನು ಗುರುತಿಸುವುದಕ್ಕೆ ಪ್ರಯತ್ನಿಸಲಾಗಿದೆ.

೨. ಅಲಕ್ಷಿತ ಸಮುದಾಯದ ಅಕ್ಷರಸ್ಥ ವ್ಯಕ್ತಿಯ ದೃಷ್ಟಿಕೋನವನ್ನು ಪ್ರಮುಖವಾಗಿ ಇಟ್ಟುಕೊಂಡು, ಅದರ ಮೂಲಕ ಕಾಣುವ ಸಮುದಾಯದ ಚಿತ್ರಣಗಳನ್ನು ಇಲ್ಲಿ ಅಧ್ಯಯನ ಮಾಡಲಾಗಿದೆ.

೩. ಈ ಆತ್ಮಕಥೆಯನ್ನು ವಿಶ್ಲೇಷಿಸುವಾಗ ಕನ್ನಡಕ್ಕೆ ಅನುವಾದವಾಗಿ ಬಂದಿರುವ ಇತರೆ ಪ್ರಮುಖ ಆತ್ಮಕಥೆಗಳನ್ನು ಪ್ರಾಸಂಗಿಕವಾಗಿ ಪ್ರಸ್ತಾಪಿಸುತ್ತ ಚರ್ಚಿಸಲು ಯತ್ನಿಸಲಾಗಿದೆ.

೪. ಸಮಾಜಶಾಸ್ತ್ರೀಯ ನೆಲೆಯಲ್ಲಿ ಈ ಆತ್ಮಕತೆಯನ್ನು ನೋಡಲು ಯತ್ನಿಸಲಾಗಿದೆ. ಅಂದರೆ ಬೇಡರ ಜಾತಿಯ ಮೂಲಕ ಕರ್ನಾಟಕದ ಒಟ್ಟಾರೆ ಕೆಳಸ್ತರದ ಮತ್ತು ಹಿಂದುಳಿದ ಜಾತಿ ಸಮುದಾಯಗಳ ಹೋರಾಟ ಸಂಘರ್ಷ ಹಾಗೂ ಸಾಮಾಜಿಕ ಸಮಸ್ಯೆಗಳನ್ನು ಅರಿಯಲು ಯತ್ನಿಸಲಾಗಿದೆ.

೫. ವಾಲ್ಮೀಕಿ ಆತ್ಮಕಥನದ ಕಥನಕ್ರಮ, ನಿರೂಪಣ ಭಾಷೆ, ನಿರೂಪಣ ತಂತ್ರ, ನಿರೂಪಣ ವಿಧಾನಗಳ ವಿಶಿಷ್ಟತೆಯನ್ನು ಸ್ಥೂಲವಾಗಿ ಗಮನಿಸಲಾಗಿದೆ. ಈ ಆತ್ಮಕಥೆಯ ಭಾಷೆ ಮತ್ತು ನಿರೂಪಣ ವಿಧಾನಗಳು ಹೇಗೆ ವಿಶಿಷ್ಟ ಹಾಗೂ ಭಿನ್ನ ಎಂಬುದನ್ನು ಈ ಮೂಲಕ ನೋಡಲು ಯತ್ನಿಸಲಾಗಿದೆ.

೬. ಒಂದು ಸಮುದಾಯದ ಜೀವನ ವಿಧಾನವು ಪ್ರಾದೇಶಿಕವಾಗಿ ಹೇಗೆ ವಿಶಿಷ್ಟವಾಗಿರಬಹುದು ಎಂಬ ಕುತೂಹಲ ಇರಿಸಿಕೊಂಡು, ಮರಾಠಿ ಮನೆಮಾತಿನ ಬೆಳಗಾವಿ ಭಾಗದ ಬೇಡರ ಜೀವನದ ನೋವುನಲಿವುಗಳ ಸ್ವರೂಪವನ್ನು ಈ ಮೂಲಕ ವಿಶ್ಲೇಷಿಸಲು ಯತ್ನಿಸಲಾಗಿದೆ.

ಟಿಪ್ಪಣಿಗಳು

೧. ನಾಗರತ್ನ ಡಿ. ರಂಗಭೂಮಿ ಕಲಾವಿದರ ಆತ್ಮಚರಿತ್ರೆಗಳ ವಿಶ್ಲೇಷಣೆ (ಅಪ್ರಕಟಿತ), ಪು.೩

೨. ಅದೇ, ಪು.೩

೩. ಅದೇ, ಪು.೩–೪

ಅಧ್ಯಾಯ – ಎರಡು

ವಾಲ್ಮೀಕಿ ಜನಾಂಗದ ಚಾರಿತ್ರಿಕ ನೋಟ

ಅಧ್ಯಾಯ ೨

ವಾಲ್ಮೀಕಿ ಜನಾಂಗದ ಚಾರಿತ್ರಿಕ ನೋಟ

ಪೀಠಿಕೆ: ಮಾನವನ ಉಗಮದ ಆರಂಭ ಕಾಲದಲ್ಲಿ ಎಲ್ಲರೂ ಬೇಟೆಗಾರರೇ ಆಗಿದ್ದರು. ನಂತರ ಒಂದೊಂದು ಜನಸಮುದಾಯವೂ ವಿಕಾಸಗೊಂಡು ಶ್ರೇಣೀಕೃತವಾಗಿ ಬೆಳೆಯಲು ಆರಂಭಿಸಿತು. ಹೀಗೆ ಬೆಳೆದ ಜನಸಮುದಾಯಗಳಲ್ಲಿ ವಾಲ್ಮೀಕಿ ಜನಸಮುದಾಯವೂ ಒಂದು. ವಾಲ್ಮೀಕಿ ಸಮುದಾಯದ ಇತಿಹಾಸವು ದಾಖಲಾಗಿಲ್ಲವಾದ್ದರಿಂದ ತಮ್ಮ ಪ್ರಾಚೀನತೆಯನ್ನು ಮೌಖಿಕವಾಗಿ ವ್ಯಕ್ತಪಡಿಸುವುದುಂಟು. ಆದಿಯಿಂದಲೂ ಬೇಡರಲ್ಲಿ ಧೈರ್ಯ, ಸ್ಥೈರ್ಯ, ಶೌರ್ಯ, ಪರಾಕ್ರಮಗಳು ವಿಶೇಷ ಗುಣಗಳಾಗಿ ಬೆಳೆದುಬಂದಿವೆ. "ಮಾನವ ಜನಾಂಗಗಳಲ್ಲಿ ಬೇಡರು ಪ್ರೋಟೊ ಅಸ್ಟ್ರಲಾಯಿಡ್ ಜನಾಂಗಕ್ಕೆ ಸೇರಿದವರಾಗಿದ್ದು, ಭಾರತದಲ್ಲಿ ಇವರು ಮೂಲ ದ್ರಾವಿಡರಾಗಿದ್ದಾರೆ"[೧]

ಭಾರತ ಉಪಖಂಡದಲ್ಲಿ ಬೇಡ ಬುಡಕಟ್ಟು ಸಮುದಾಯ ಕುರಿತಂತೆ ಸಮಗ್ರವಾದ ಸಂಶೋಧನೆ ನಡೆದಿಲ್ಲ. ಸ್ವಾತಂತ್ರ್ಯೋತ್ತರ ನಂತರದಲ್ಲಿ ಈ ಜನಾಂಗದ ಸ್ಥಿತಿಗತಿಯ ಬಗ್ಗೆ ಬರೆವಣಿಗೆಗಳಿವೆ.

"ಬೇಡ ಎಂದರೆ ಬೇಟೆಗಾರ ಎಂದರ್ಥ. ಬೇಟೆಯನ್ನು ವೃತ್ತಿಯಾಗಿ ಉಳ್ಳ ಬಿಲ್ಲ ಜಾತಿಗೆ ಸೇರಿದವರು ಎಂದಾಗುತ್ತದೆ. ಬೇಟೆಯನ್ನು ತಮಿಳಿನಲ್ಲಿ ವೇಟ್ಟೈ ಎಂದು, ತೆಲುಗಿನಲ್ಲಿ ವೇಟ, ವ್ಯಾಟ(ಯಾಟ) ಎಂದು ಕರೆದಿದ್ದಾರೆ. ಬೇಟೆ ಯಾಡುವವರನ್ನು ಬೇಡರು ಎಂದು ಕರೆದಿರುವುದು ವೃತ್ತಿಯಿಂದಲೇ ಇರಬೇಕು. ಬೇಟೆಗೂ ಬೇಡರಿಗೂ ಅವಿನಾಭಾವ ಸಂಬಂಧವಿದೆ. ಬೇಡ ಪದವನ್ನು ವಿಭಿನ್ನವಾಗಿ ಅರ್ಥೈಸಲಾಗಿದೆ. ಇವರಿಗೆ ಪುಳಿಂದ, ಬಿಲ್ಲ, ಕಿರಾತ, ವ್ಯಾಧ, ವನಚರ, ಶಬರ, ವಾಲ್ಮೀಕಿ, ನಿಷಾದ, ತಳವಾರ, ನಾಯಕ, ಕಣ್ಣಪ್ಪನ ಮಕ್ಕಳು ಇತ್ಯಾದಿ ಪರ್ಯಾಯ ಹೆಸರುಗಳಿಂದ ಕರೆಯುತ್ತಾರೆ. ಸಂಸ್ಕೃತದ

ವ್ಯಾಧ ಕನ್ನಡದಲ್ಲಿ ಬ್ಯಾಡ, ಬೇಡ ಆಗಿರಬೇಕು. ಹೀಗೆ ಬೇಂದ್, ವೇದನ್, ಬೋಯ ಪರ್ಯಾಯ ಜಾತಿಪದಗಳು ಕಂಡುಬರುತ್ತವೆ"[೨] ಪ್ರಸ್ತುತ ಅಧ್ಯಯನಕ್ಕಾಗಿ ವಾಲ್ಮೀಕಿ ಸಮುದಾಯದ ಚಾರಿತ್ರಿಕ ನೋಟ ತಿಳಿಯಲು ೧. ಚರಿತ್ರೆಯ ಪೂರ್ವಘಟ್ಟ, ೨. ಚರಿತ್ರೆಯ ಘಟ್ಟ ೩. ವಸಾಹತುಶಾಹಿಘಟ್ಟ, ೪. ಆಧುನಿಕ ಭಾರತದ ಘಟ್ಟವಾಗಿ, ವಿಭಾಗಿಸಿಕೊಂಡು ವಾಲ್ಮೀಕಿ ಸಮುದಾಯದ ಬೆಳವಣಿಗೆಯನ್ನು ವಿಶ್ಲೇಷಿಸಲಾಗಿದೆ.

೧. **ಚರಿತ್ರೆಯ ಪೂರ್ವ ಘಟ್ಟ:** ಭಾರತ ದೇಶದ ಪ್ರಾಚೀನ ಬುಡಕಟ್ಟುಗಳಲ್ಲಿ ವಾಲ್ಮೀಕಿ ಬುಡಕಟ್ಟು ಸಮುದಾಯವೂ ಒಂದು. ಆರಂಭದಲ್ಲಿ ಬೇಡರು ಆಹಾರಸಂಗ್ರಹಣೆಗಾಗಿ ಬೇಟೆಯನ್ನು ವೃತ್ತಿಯಾಗಿಸಿಕೊಂಡರು. ಆಯುಧಗಳನ್ನು ಹಿಡಿದು ಕಾಡುಪ್ರಾಣಿಗಳನ್ನು ಬೇಟೆಯಾಡಿ ಕಾಡುಮೇಡುಗಳಲ್ಲಿ ವಾಸವಾಗಿದ್ದರು. ನಂತರ ಪಶುಪಾಲನೆ, ಕೃಷಿ, ಕುಲಕಸುಬು ಮುಂತಾದ ಘಟ್ಟಗಳಿಂದ ವಿಕಾಸಗೊಂಡರು. ಇದು ಶಿಲಾಯುಗದ ಕಾಲದಿಂದಲೂ ನಡೆದ ಪ್ರಕ್ರಿಯೆ. ವಾಲ್ಮೀಕಿ ಸಮುದಾಯದ ಇತಿಹಾಸ ಪರಂಪರೆ ಸಾಂಸ್ಕೃತಿಕವಾಗಿ ವಿಶಾಲವಾದುದು. ತ್ರೇತಾಯುಗದಲ್ಲಿ ಮಹಾಋಷಿ ವಾಲ್ಮೀಕಿ ಈ ಸಮುದಾಯದ ಪ್ರತಿನಧಿಯಾಗಿದ್ದಾನೆ. ಈತ 'ರಾಮಾಯಣ' ಮಹಾಕಾವ್ಯವನ್ನು ಬರೆದು, ಅದರಲ್ಲಿ ಸಹೋದರತೆ, ಏಕಪತ್ನಿತ್ವ, ಸ್ನೇಹ, ಶಿಕ್ಷಣ, ಸಮಾನತೆ, ಭಕ್ತಿ, ಧರ್ಮ, ತ್ಯಾಗ, ದಾನ, ಪಾತಿವ್ರತ್ಯ, ಪ್ರಜಾಕಲ್ಯಾಣ ಮುಂತಾದ ಮೌಲ್ಯಗಳ ಪ್ರತಿಪಾದನೆ ಮಾಡಿದ್ದಾನೆ. ಕ್ರಿ.ಪೂ. ೬೦೦ರ ಸುಮಾರಿಗೆ ಈ ಮಹಾಕಾವ್ಯ ರಚನೆಯಾಗಿದ್ದು, ಇದರಲ್ಲಿ ೨೪೦೦೦ (ಲಕ್ಷಕ್ಕೂ ಹೆಚ್ಚು) ಶ್ಲೋಕಗಳಿವೆ. ವಾಲ್ಮೀಕಿ ಲೌಕಿಕ ಮತ್ತು ಅಲೌಕಿಕದ ಬಗೆಗೆ ತಿಳಿಸುತ್ತಾ ಮಹಾಕವಿಯಾಗಿದ್ದು ಒಂದು ವಿಸ್ಮಯವೇ ಸರಿ. ಮಿಥುನದಲ್ಲಿರುವ ಕ್ರೌಂಚ ಪಕ್ಷಿಗಳಲ್ಲಿ ಒಂದನ್ನು ಕೊಂದಾಗ ಒಂಟಿ ಪಕ್ಷಿಯ ಅಳಲನ್ನು ನೋಡಿದ ವಾಲ್ಮೀಕಿಗೆ ಜ್ಞಾನೋದಯವಾಯಿತು. ಹೀಗೆ ಆತ ತಪಸ್ಸು ಮಾಡುವಾಗ ಹುತ್ತ (ವಾಲ್ಮೀಕಿ) ಬೆಳೆದಿದ್ದರಿಂದ ವಾಲ್ಮೀಕಿ ಎಂಬ ಹೆಸರು ಬಂದಿದೆ ಎಂಬ ಐತಿಹ್ಯಗಳಿವೆ. ವಾಲ್ಮಿಕಿ ಸಮುದಾಯಕ್ಕೆ ಸೇರಿದ ಶಬರಿಯು ಶ್ರೀ ರಾಮನ ದರ್ಶನಕ್ಕಾಗಿ ತನ್ನ ಜೀವನವನ್ನೇ ಮುಡುಪಿಡುತ್ತಾಳೆ.

'ಮಹಾಭಾರತ' ಮಹಾಕಾವ್ಯ ತಿಳಿಸುವಂತೆ ಪಾಂಡವರಲ್ಲಿ ಪ್ರತಿಯೊಬ್ಬರಿಗೂ ಒಂದೊಂದು ಬೇಡರಪಡೆ (ಬೆಂಗಾವಲು) ಇತ್ತು. ಅರ್ಜುನನಿಗೆ ಸರಿಸಾಟಿಯಾಗಿ ಬಿಲ್ವಿದ್ಯೆಯಲ್ಲಿ ಪರಿಣಿತನಾಗಿದ್ದ ಏಕಲವ್ಯನು ದ್ರೋಣಾಚಾರ್ಯರಿಗೆ ಕೈಬೆರಳನ್ನು ಕಾಣಿಕೆಯಾಗಿ ಕೊಟ್ಟನು. ಶಿವನ ಇಪ್ಪತ್ತೈದು ಲೀಲೆಗಳಲ್ಲಿ ಕಿರಾತಲೀಲೆ (ರೂಪ) ಒಂದಾಗಿದೆ. ಪಾಶುಪತಾಸ್ತ್ರ ಸಂದರ್ಭದಲ್ಲಿ 'ಕಿರಾತಾರ್ಜುನೀಯ' ಪ್ರಸಂಗಗಳಲ್ಲಿ ಬೇಡರನ್ನು ಚಿತ್ರಿಸಲಾಗಿದೆ. ತನ್ನ ಬೇಟೆಯ ವೃತ್ತಿ ಮೂಲಕ ಶಿವನಿಗೆ ಮೃಗದ ಮಾಂಸವನ್ನು ಎಡೆಹಾಕಿದ ಬೇಡರ ಕಣ್ಣಪ್ಪ, ಶಿವನಿಗೆ ತನ್ನೆರಡು ಕಣ್ಣುಗಳನ್ನು ದಾನಕೊಟ್ಟ ಕತೆಯು ಪ್ರಸಿದ್ಧವಾಗಿದೆ. ಅರವತ್ತುಮೂರು ಶೈವ ಪುರಾತನ ಪುರುಷರಲ್ಲಿ ಒಬ್ಬನಾದ ಈತ ಇಂದಿಗೂ ಬೇಡರಿಗೆ ಆರಾಧ್ಯ ದೈವನಾಗಿದ್ದಾನೆ. ವಾಲ್ಮೀಕಿ, ಶಬರಿ, ಏಕಲವ್ಯ, ಕಣ್ಣಪ್ಪನಂತಹ ಪಾತ್ರಗಳು ಈಗ ಬೇಡ ಸಮುದಾಯದ ಸಾಂಸ್ಕೃತಿಕ ಪ್ರತಿನಿಧಿಗಳಾಗಿದ್ದಾರೆ.

ವಾಲ್ಮೀಕಿ 'ರಾಮಾಯಣ'ದಲ್ಲಿ ಶೂದ್ರ ತಪಸ್ಸು ಮಾಡಿದರೆ ಶ್ರೀರಾಮನ ಹತ್ಯೆ ನಡೆಯುತ್ತದೆ. ಸ್ತ್ರೀ ಪ್ರತಿನಿಧಿಯಾದ ಸೀತೆಯ ಬಗೆಗಿನ ರಾಮನ ನಡತೆ, ವಾಲಿ–ಸುಗ್ರೀವರ ಸಹೋದರತೆಯನ್ನು ಅಗಲಿಸಿ ಪಾತಕತನಕ್ಕೊಳಪಡಿಸುವುದು, ಮಹಾಭಾರತದಲ್ಲಿ ಅರ್ಜುನನ ಬಿಲ್‌ವಿದ್ಯೆ ಮೀರಿಸಿದ ಏಕಲವ್ಯನ ಹೆಬ್ಬೆರಳನ್ನು ದ್ರೋಣಾಚಾರ್ಯರು ಕಿತ್ತುಕೊಳ್ಳುವುದು ಮುಂತಾದ ಪ್ರಸಂಗಗಳು ಚರಿತ್ರೆ ಪೂರ್ವಯುಗದಲ್ಲಿಯೇ ಈ ವಾಲ್ಮೀಕಿ ಸಮುದಾಯವನ್ನು ಉನ್ನತವರ್ಗ ಮತ್ತು ಪ್ರಭುತ್ವಗಳು ಶೋಷಣೆಗೆ ಒಳಪಡಿಸಿರುವುದನ್ನು ಸೂಚಿಸುತ್ತವೆ. ಆದರೂ ಬೇಡರು ತಮ್ಮ ಜೀವನಕ್ಕಾಗಿ ಬೇಟೆ, ಪಶುಸಂಗೋಪನೆ, ಕೃಷಿಯನ್ನು ವೃತ್ತಿಯಾಗಿರಿಸಿಕೊಂಡು ಬಂದರು.

೨. ಚರಿತ್ರೆಯ ಘಟ್ಟ: ವಾಲ್ಮೀಕಿ ಸಮುದಾಯದವರು ಆರಂಭಿಕ ಕಾಲಘಟ್ಟದಲ್ಲಿ ಬೇಟೆ ಕೃಷಿ, ಪಶುಸಂಗೋಪನೆ ಕಾರ್ಯಗಳ ಮೂಲಕ ಸಿಂಧೂ, ಗಂಗಾ, ಬ್ರಹ್ಮಪುತ್ರಾನದಿ ಬಯಲುಗಳಲ್ಲಿ ನೆಲೆಸಿ ವಿಕಾಸಹೊಂದಿದರು, ಬಳಿಕ ಇವರು ಓರಿಸ್ಸಾ, ಆಂಧ್ರಪ್ರದೇಶಗಳಿಂದ ಕರ್ನಾಟಕಕ್ಕೆ ವಲಸೆ ಬಂದವರೆಂದು ಹೇಳಲಾಗುತ್ತದೆ. ಹೀಗೆ ಬಂದು ನೆಲೆಯೂರಿ ನಿಂತು ಸಾಮಾಜಿಕ ಉಪಕಾರ್ಯಗಳ ಜೊತೆಗೆ ಶೌರ್ಯ ಪರಾಕ್ರಮಗಳಿಗೆ ಹೆಸರಾದಂತಹ ಅನೇಕ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು. ಕರ್ನಾಟಕದಲ್ಲಿ ಮೊಟ್ಟಮೊದಲು ಬೇಡರು ರಾಜ್ಯವನ್ನು ಸ್ಥಾಪಿಸಿದ್ದು ಕುಮ್ಮಟದುರ್ಗದಲ್ಲಿ. ಬೇಡರ ಉಲ್ಲೇಖವಿರುವ ಮೊದಲ ಶಾಸನವೆಂದರೆ ಗದ್ದೆಮನೆ (ಶಿವಮೊಗ್ಗ ಜಿ. ಸಾಗರ ತಾ.) ಶಾಸನ. "ಸ್ವಸ್ತಿಶ್ರೀ ಶೀಲ ಆದಿತ್ಯನ್ ದಿಶಾವನ್ ಭಾರ್ಗವನ್ ಅಗಳ್‌ಕಣ್ಣನ್ ಪೇರಾಳ್ಕೆವರೆ ಪೆಟ್ಟಣಿಸತ್ಯಾಂಕನ್ ಅಟ್ಟುಳ್ವಭಟನ್, ಬೆದರೆ ಮಹೇನ್ದ್ರ ಬೇಡರಾಯರ ಮಲಪ್ಪರ್ ಕಾಲೆಗದೊಳೆವಿರಿದು ಸ್ವರ್ಗ್ಗಾಲಯಕ್ಕೇರ್ದ್ದಿದಾನ್"[೩] ಎಂದು ಅದರಲ್ಲಿ ಬರೆಯಲಾಗಿದೆ. ಇಲ್ಲಿ ಬೇಡರಾಯ ಎಂದರೆ ಬೇಡರ ರಾಜರ ಉಲ್ಲೇಖವಿದೆ. "ಶೀಲ ಆದಿತ್ಯ ಕನೂಜಿನ ಪ್ರಸಿದ್ಧ ದೊರೆ ಹರ್ಷವರ್ಧನ ಅಥವಾ ಪಲ್ಲವ ಮಹೇಂದ್ರವರ್ಮನೆಂದು ಎನ್ನಲಾಗಿದೆ. ಕಾಳಗದಲ್ಲಿ (ಪಲ್ಲವ) ಮಹೇಂದ್ರನೊಡನೆ ಹೋರಾಡಿ ನಿಧನನಾಗಿರುವ ಬಗ್ಗೆ ತಿಳಿಯುತ್ತದೆ. ಗಂಗರ ಹಾಗೂ ಚಾಲುಕ್ಯರ ಕಾಲಕ್ಕೆ ಈ ಸಮುದಾಯದವರು ಸೈನಿಕರು, ತಳವಾರರು, ರಾಜರು ಆಗಿರಲು ಸಾಧ್ಯವಿದೆ. ಪೆಟ್ಟಣಿ ಸತ್ಯಾಂಕ ಅಥವಾ ಬೇಲಳೆಯ ಮೊಲನೆಂಬುವನು ಬೇಡರಾಯರ ಮತ್ತು ಮಲೆಪರ ಜತೆಗಿನ ಕಾಳಗದಲ್ಲಿ ಮಡಿದು ವೀರಸ್ವರ್ಗ ಪಡೆದನೆಂಬುದು, ಬೇಡರ ರಾಜ್ಯಗಳಿದ್ದುದು ಶಾಸನದ ಅಭಿಪ್ರಾಯ ಎಂದು ಎಂ.ಬಿ. ನೇಗಿನಹಾಳ ಅವರು ಹೇಳಿದ್ದಾರೆ"[೪] ಕುಮ್ಮಟದುರ್ಗದ ಮುಮ್ಮಡಿ ಸಿಂಗೆಯ ನಾಯಕ ವೀರ ಕಂಪಿಲರಾಯ ಮತ್ತು ಕುಮಾರರಾಮ ಈ ವಂಶದ ಅರಸರು, ಕುಮಾರರಾಮ ಮಹಾಪರಾಕ್ರಮಿ ಸ್ಫುರದ್ರೂಪಿ ಮುತ್ತಿನ ಚೆಂಡಾಡುವಾಗ ಇವನ ಚಿಕ್ಕಮ್ಮ ರತ್ನಾಜಿ ಇವನನ್ನು ಮೋಹಿಸಿ, ಒಲಿಯಲಿಲ್ಲದ ಕಾರಣ ಕಂಪಿಲನಗೆ ಚಾಡಿ ಹೇಳಿ ಇವನನ್ನು ಕೊಲ್ಲಿಸುವ ಪ್ರಯತ್ನ ನಡೆಯುತ್ತದೆ. ಚಿಕ್ಕಮ್ಮನ ಕುತಂತ್ರ, ಕಪಟತನದಿಂದ ಬೇಸತ್ತ ಕುಮಾರರಾಮ ತನ್ನ ಚಾರಿತ್ರ್ಯವನ್ನು ಕಾಪಾಡಿಕೊಂಡು ಪರನಾರಿ ಸೋದರನೆಂದು

ಸಾರಿಕೊಂಡು ಜನಮನ್ನಣೆ ಪಡೆದನು. ದೆಹಲಿಯ ಸುಲ್ತಾನರನ್ನು ಸೋಲಿಸಿ ದೆಹಲಿ ರಾಜಕುಮಾರಿಯಿಂದ ಪ್ರಶಂಸೆಗೊಳಗಾದನು. ಹಾಗೆಯೇ ವಿಜಯನಗರ ಸಾಮ್ರಾಜ್ಯದ ಸ್ಥಾಪಕರಾದ ಹರಿಹರ ಬುಕ್ಕರು ಕುಮಾರರಾಮನ ಭಾವನಾದ ಸಂಗಮನ ಮಕ್ಕಳು. "ವಿಜಯನಗರದ ತರುವಾಯ ಏಳಿಗೆಯಾದ ಪಾಳೆಯ ಪಟ್ಟಣಗಳ ಸಂಖ್ಯೆ ೨೨, ಇವುಗಳಲ್ಲಿ ಚಿತ್ರದುರ್ಗ, ಹರಪನಹಳ್ಳಿ, ತರೀಕೆರೆ, ಗುಡೇಕೋಟೆ, ಐಗೂರು, ಸುರಪುರ, ಮಂಜರಾಬಾದ್, ಬಾಣಾವಾರ, ಜರಿಮಲೆ, ರಾಯದುರ್ಗ, ರಾಯಚೂರು, ಬೆಳಗಾವಿ ಮೊದಲಾದವುಗಳು ಈ ಸಮುದಾಯದ ಆಳ್ವಿಕೆಗೆ ಒಳಪಟ್ಟವು"[೫] ಇಲ್ಲಿನ ಕೋಟೆ–ಕೊತ್ತಲು, ಅರಮನೆ, ಕೆರೆ–ಕಟ್ಟೆ ನಿರ್ಮಾಣಗಳು ಇಂದಿಗೂ ಕಣ್ಮನ ಸೆಳೆಯುತ್ತವೆ. ಚರಿತ್ರೆಯ ಕಾಲಘಟ್ಟ ಹಾಗೂ ವೇದಗಳ ಕಾಲದಿಂದಲೇ ಬಂದ ವರ್ಣಾಶ್ರಮ ಪದ್ಧತಿ, ಗುರುಕುಲ, ಮಠ ಮಾನ್ಯಗಳ ಶಿಕ್ಷಣದಿಂದ ವಂಚಿತರಾಗಿ ಇವರು ಸೈನಿಕ, ತಳವಾರ, ಬೆಂಗಾವಲುಪಡೆ, ಗೆರಿಲ್ಲಾ ಯುದ್ಧ ಪಡೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಕೃಷಿ, ಪಶುಸಂಗೋಪನೆ, ಜಾನುವಾರು ಸಾಕಾಣಿಕೆ ಮುಖಾಂತರ ಬೇಟೆಯಾಡಿ ಮಾಂಸ ಆಹಾರ ಪದ್ಧತಿಯನ್ನು ಮೈಗೂಡಿಸಿ ಕೊಂಡವರಾಗಿದ್ದರು. ಅಲ್ಲದೆ ಕೆಲವೊಬ್ಬರು ಗುಂಪುಗೂಡಿ ದರೋಡೆ, ಕಳ್ಳತನದಂತಹ ಕಾರ್ಯಚಟುವಟಿಕೆಗಳಲ್ಲಿ ಭಾಗಿಯಾದರು.

೩. ವಸಾಹತುಶಾಹಿಘಟ್ಟ: ಬೇಡ ಸಮುದಾಯವು ಅನೇಕ ಸಣ್ಣ ಸಣ್ಣ ಪಾಳೆಪಟ್ಟುಗಳಾಗಿ ಚದುರಿಹೋಗಿ ಬೇಡ ರಾಜರುಗಳೇ ಆಳ್ವಿಕೆ ನಡೆಸುತ್ತಿರುವ ಕಾಲದಲ್ಲಿಯೇ ಪಾಶ್ಚಾತ್ಯರ ಆಗಮನವಾಯಿತು. ೧೭ನೇ ಶತಮಾನದ ಅಂತ್ಯ ೧೮ನೇ ಶತಮಾನದ ಪ್ರಾರಂಭದ ಅವಧಿಯಲ್ಲಿ ಭಾರತದ ಅನೇಕ ಬುಡಕಟ್ಟು ಸಮುದಾಯಗಳು ಅನೇಕ ಸ್ಥಿತ್ಯಂತರಗಳಿಗೆ ಒಳಗಾದವು. ಭಾರತಕ್ಕೆ ಬ್ರಿಟಿಷರ ಆಗಮನವಾಗಿ ಅವರು ರಾಜಪ್ರಭುತ್ವದ ನೆಲೆಗಳನ್ನು ಕಸಿದುಕೊಳ್ಳುತ್ತಾ ಬಂದ ಸಂದರ್ಭದಲ್ಲಿ, ಪಾಳೆಗಾರರು ಬ್ರಿಟಿಷರನ್ನು ದಿಟ್ಟತನದಿಂದ ಎದುರಿಸಿದರು. ೧೮೦೩ರಲ್ಲಿ ಪಾಳೆಯಗಾರರ (ಬಳ್ಳಾರಿ) ದಂಗೆ, ೧೮೨೪ರಲ್ಲಿ ತರೀಕೆರೆ ಸರ್ಜಪ್ಪನಾಯಕನ ಹೋರಾಟ ಮತ್ತು ಸಾವು, ೧೮೫೭ರಲ್ಲಿ ಹಲಗಲಿಬೇಡರ ಬಂಡಾಯ, ೧೮೫೮ರ ಸುರಪುರದ ವೆಂಕಟಪ್ಪನಾಯಕನ ದಂಗೆ, ೧೯೨೭ರಲ್ಲಿ ವೀರಸಿಂಧೂರ ಲಕ್ಷಣನು ಬ್ರಿಟಿಷರ ವಿರುದ್ಧ ಹೋರಾಟ ಮಾಡಿ ಹುತಾತ್ಮನಾಗಿದ್ದು. ಇವು ಪ್ರಮುಖ ವಿಧ್ಯಮಾನಗಳು. ೧೯೪೭ರ ಸ್ವಾತಂತ್ರ್ಯ ಹೋರಾಟದಲ್ಲಿ ಸಹಸ್ರಾರು ಜನ ಹೋರಾಟಗಾರರು ಇವರೇ ಆಗಿದ್ದರು. ಬ್ರಿಟಿಷರ ಸಹಾಯಕ ಸೈನ್ಯಪದ್ಧತಿ, ದತ್ತುಮಕ್ಕಳಿಗೆ ಹಕ್ಕಿಲ್ಲ ಎನ್ನುವ ನೀತಿ, ತೆರಿಗೆ ವಸೂಲಾತಿಗಳು ಇವರಿಗೆ ಮಾರಕವಾದವು. ಬ್ರಿಟಿಷರ ಆಳ್ವಿಕೆಯಲ್ಲಿ ತಳವಾರ ನೀರಗಂಟಿ ಎಂಬ ಹುದ್ದೆಗಳಲ್ಲಿ ಇವರನ್ನು ನೇಮಿಸಲಾಗುತ್ತಿತ್ತು. ಆಡಳಿತದಲ್ಲಿ ಪಟೇಲ ಹಾಗೂ ಶಾನುಭೋಗರು ಹೇಳಿದ ಊರಿನ ಕೆಲಸಗಳನ್ನು ಮಾಡುವುದು ಇವರ ಜವಾಬ್ದಾರಿಯಾಗಿತ್ತು. ತೆರಿಗೆ ಕಂದಾಯಗಳನ್ನು ಜನರಿಂದ ಪಟೇಲ, ಶಾನುಭೋಗರಿಗೆ ಕಟ್ಟಿಸುವುದು, ಸರ್ಕಾರಕ್ಕೆ ಲೆಕ್ಕಪತ್ರ ಕಡತಗಳನ್ನು ಹೊತ್ತೊಯ್ದು ತೋರಿಸುವುದು, ಗ್ರಾಮಗಳ ಉಸ್ತುವಾರಿ ಮಾಡುವುದು, ಹಬ್ಬ, ಜಾತ್ರೆ,

ಆಚರಣೆಗಳು ಯಶಸ್ವಿಯಾಗುವಂತೆ ನೋಡಿಕೊಳ್ಳುವುದು ಇವರ ಕೆಲಸಗಳಾಗಿದ್ದವು. ನೀರಗಂಟಿಯು ಆಯಾ ಪ್ರದೇಶದ ಗ್ರಾಮವ್ಯಾಪ್ತಿಯ ಕೃಷಿ ಜಮೀನಗೆ ಕೆರೆ, ಕುಂಟೆ, ಕಾಲುವೆಗಳಿಂದ ನೀರುಣಿಸುವ ಉಸ್ತುವಾರಿಯನ್ನು ಪಾಲಿಸುತ್ತಿದ್ದನು. ಇಂದಿಗೂ ಗ್ರಾಮದ ತಳವಾರ ನೀರಗಂಟಿಗಳು ಹಳ್ಳಿಗಳಲ್ಲಿ ಆಯಾಗಾರರಲ್ಲಿ ಒಬ್ಬರಾಗಿದ್ದಾರೆ.

ಬೇಡರು ಮೂಲತಃ ಅರಣ್ಯವಾಸಿಗಳು, ಆದರೆ ಬ್ರಿಟಿಷರ ಆಳ್ವಿಕೆಯ ಹಿನ್ನೆಲೆಯಲ್ಲಿ ಅರಣ್ಯನಾಶದ ಕಾರ್ಯ ಆರಂಭವಾಯಿತು. ಒಂದುಕಡೆ ಗ್ರಾಮಸ್ಥರು ಸಾಗುವಳಿ ಭೂಮಿಯಾಗಿ ಅರಣ್ಯವನ್ನು ಕಡಿದು ಒತ್ತರಿಸುತ್ತ ಬಂದರೆ, ಭಾರತದಾದ್ಯಂತ ಪ್ರಮುಖ ಪಟ್ಟಣಗಳಿಗೆ ಸಂಪರ್ಕ ಕಲ್ಪಿಸಿಕೊಳ್ಳಲು ರೈಲು, ರಸ್ತೆ ಹಾಕುವ ಸಲುವಾಗಿ ಅರಣ್ಯಗಳು ನಾಶವಾಗತೊಡಗಿ ಬುಡಕಟ್ಟು ಸಮುದಾಯದವರು ನಗರ ಪಟ್ಟಣಗಳಿಗೆ ವಲಸೆ ಬಂದು ಜೀವಿಸತೊಡಗಿದರು. ಹಿಂದೆ ಇವರಲ್ಲಿದ್ದ ಬೇಟೆ, ವೃತ್ತಿ ಮಾಯವಾಗತೊಡಗಿರುವುದಲ್ಲದೆ ಇವರ ಆಚಾರ–ವಿಚಾರಗಳ ಮೇಲೆ ಬ್ರಿಟಿಷರ ಕಾನೂನುಗಳು ಪ್ರಭಾವ ಬೀರಿದವು. ಆದರೂ ದೇವದಾಸಿಪದ್ಧತಿ, ಮುತ್ತುಕಟ್ಟುವಿಕೆ ತಳವಾರಿಕೆಯಂತಹವು ಸಂಪ್ರದಾಯಗಳಾಗಿ ಉಳಿದುಕೊಂಡವು. ಬ್ರಿಟಿಷರ ಆಗಮನದಿಂದಾಗಿ ಅತ್ತ ಹೊಸ ನಾಗರಿಕತೆಗೂ ಹೊಂದಿಕೊಳ್ಳದೆ ಇತ್ತ ಪ್ರಾಚೀನ ಸಂಪ್ರದಾಯಗಳನ್ನು ಬಿಡದೆ ಹತ್ತಾರು ಅನಾನುಕೂಲಗಳ ನಡುವೆ ಆಯಾ ಹಟ್ಟಿ, ಗ್ರಾಮಗಳಲ್ಲಿಯೇ ಪ್ರಯಾಸದ ಜೀವನವನ್ನು ನಡೆಸಿದರು. ಉಪಜೀವನಕ್ಕಾಗಿ ಪಶುಸಂಗೋಪನೆ, ಕೃಷಿ, ಬೇಟೆ, ಜಾನುವಾರು ಸಾಕಾಣಿಕೆ ಮಾಡುತ್ತಾ ಹೆಚ್ಚಿನ ಜನರು ಅನಕ್ಷರಸ್ಥರಾಗಿ, ದುರ್ಬಲರಾಗಿಯೇ ಉಳಿದರು. ರಾಜಪ್ರಭುತ್ವದ ಆಳ್ವಿಕೆಯಿಂದಲೂ ಪ್ರಗತಿಕಾಣದ ಇವರು ಬ್ರಿಟಿಷರ ಆಳ್ವಿಕೆಯಲ್ಲಿ ಅನೇಕ ಸ್ಥಿತ್ಯಂತರಗಳನ್ನು ಕಂಡರು. ಇಂಗ್ಲಿಷ್ ಶಿಕ್ಷಣ ನೀತಿ ಇವರ ಮೇಲೆ ಯಾವುದೇ ಪ್ರಭಾವ ಬೀರಲಿಲ್ಲವಾಗಿ ಇವರು ಹುಟ್ಟಿವಾಸಿಗಳಾಗಿ, ಗ್ರಾಮಗಳಲ್ಲಿ ಪಟೇಲರು, ಶಾನುಭೋಗರೇಳಿದ ಕೆಲಸಗಳಲ್ಲೆ ತಮ್ಮ ಬದುಕನ್ನು ಕಂಡುಕೊಂಡರು. ಊರಲ್ಲಿ ವಾಸಿಸಿದವರು ಊರ ಬೇಡರಾಗಿ, ಕಾಡಿನಲ್ಲಿಯೇ ವಾಸಿಸದವರು ಮ್ಯಾಸಬೇಡರಾಗಿ ವಿಭಾಗಗೊಂಡು ಬೆಳವಣಿಗೆ ಹೊಂದಿದರು.

೪. ಆಧುನಿಕ ಭಾರತದ ಘಟ್ಟ: ಬ್ರಿಟಿಷರ ನಿರ್ಗಮನದ ನಂತರ ಭಾರತ ಸ್ವಾತಂತ್ರ್ಯವಾದ ಮೇಲೆ ವಾಲ್ಮೀಕಿ ಸಮುದಾಯದ ಜನರ ಬದುಕಿನಲ್ಲಿ ಅನೇಕ ಏರುಪೇರುಗಳು ಆದವು. ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯದ ನಂತರದಲ್ಲಿ ಆಯಾ ಪ್ರದೇಶ ಇಲ್ಲವೇ ಪ್ರಾಂತ್ಯದ ರಾಜನ ಸೈನ್ಯಕ್ಕೆ ಬೇಡರ ಪಡೆಗಳು ಅನಿವಾರ್ಯವಾದಂತೆಲ್ಲ, ಸ್ತ್ರೀಯರ ಸಾಮಾಜಿಕ ಬದುಕು ದುಸ್ತರವಾಯಿತು. ಹಲವು ಮಹಿಳೆಯರು ಅರಮನೆ ದಾಸಿಯರು, ಪರಿಚಾರಿಕೆಯರು, ಸೈನಿಕರ ಆವಶ್ಯಕತೆಗಳನ್ನು ಪೂರೈಸಬಲ್ಲ ಗಣಿಕೆಯರು ಆಗಬೇಕಾದ ಪರಿಸ್ಥಿತಿಯೊದಗಿತು. ಧಾರ್ಮಿಕ ರಿಯಾಯಿತಿ ಎಂಬಂತೆ ಲೇಸಿಪದ್ಧತಿ, ಮನೆಗೆ ಬಿಡುವ ಸಂಪ್ರದಾಯ, ಬಸವಿ ಪರಂಪರೆ, ದೇವದಾಸಿ, ಗೊರವಿ ಜೋಗಮ್ಮಗಳಂಥ ಸಂಪ್ರದಾಯಗಳು, ಕೆಲವು

ಪ್ರದೇಶಗಳ ಬೇಡ ಮಹಿಳೆಯರ ಮೇಲೆ ಪರಿಣಾಮ ಬೀರಿದವು. ಧಾರ್ಮಿಕವಾಗಿ ಪ್ರತಿಷ್ಠಿತ ವರ್ಗದಿಂದ ಸಾಮಾನ್ಯ ವಲಯದ ಪುರುಷರವರೆಗೂ ಈ ಪದ್ಧತಿಗೆ ಅನುಮೋದನೆ ಇದ್ದರೂ ಸಾಮಾಜಿಕವಾಗಿ ಈ ಸಂಪ್ರದಾಯಗಳಲ್ಲಿ ನಿರತರಾದ ಮಹಿಳಾ ವರ್ಗಕ್ಕೆ ಸಾಮಾಜಿಕ ಸ್ಥಾನಮಾನಗಳಿಂದ ಅಪಮಾನಕರ ಪರಿಸ್ಥಿತಿ ಬಂದೊದಗಿತು. ಹೈದರಾಬಾದ್ ಕರ್ನಾಟಕ ಹಾಗೂ ಉತ್ತರ ಕರ್ನಾಟಕದ ವ್ಯಾಪ್ತಿಯ ಕೆಳವರ್ಗದ ಸಮುದಾಯಗಳಲ್ಲಿ ಮಾತೃಪ್ರಧಾನ ವ್ಯವಸ್ಥೆ ನಿರಂತರಗೊಳ್ಳಲು ಸೈನಿಕ ಪದ್ಧತಿಯ ಪರಿಣಾಮಗಳಂತಹ ರಾಜಕೀಯ ಕಾರಣಗಳೇ ಮುಖ್ಯ ಪ್ರೇರಣೆಗಳಾಗಿವೆ.

ಅಲೆಮಾರಿಗಳಾಗಿ ಬೇಟೆಗಾರಿಕೆಯ ಹಂತದಲ್ಲಿ ಸಂಪೂರ್ಣವಾಗಿ ಕಾಡನ್ನೇ ಅವಲಂಬಿಸಿದ್ದ ಬೇಡರು ಮುಂದುವರಿದ ಆಧುನಿಕ ಕಾಲಘಟ್ಟದಲ್ಲಿ ಪಶುಪಾಲನೆಯನ್ನು ರೂಢಿಸಿಕೊಂಡರು. ನಾಡಿನ ಸಂಪರ್ಕವೇರ್ಪಡುತ್ತಾ ನಾಡಿನೊಂದಿಗೆ ಹೊಂದಿಕೊಂಡು, ಊರೂರುಗಳಲ್ಲಿ ಸೇರಿಕೊಂಡು ಕೆಲವು ಬೇಡರ ಗುಂಪುಗಳು ವ್ಯವಸಾಯ ರೂಢಿಸಿಕೊಂಡವು. ಭಾರತ ಸ್ವತಂತ್ರಗೊಂಡು ತನ್ನದೇ ಸಂವಿಧಾನವನ್ನು ರಚಿಸಿಕೊಂಡು ಆಡಳಿತವನ್ನು ರೂಪಿಸಿಕೊಂಡಿತು. ಆಗ ಸಾಮಾಜಿಕ ಸ್ಥಾನ–ಮಾನಗಳಿಗೆ ಅನುಗುಣವಾಗಿ ಸಮುದಾಯಗಳಿಗೆ ಸಮಾನತೆಯನ್ನು ಕಲ್ಪಿಸುವಲ್ಲಿ ಪರಿಶಿಷ್ಟಜಾತಿ–ಪಂಗಡ ಮತ್ತು ಹಿಂದುಳಿದ ವರ್ಗಗಳಿಗೆ ಮೀಸಲಾತಿ ಸೌಲಭ್ಯ ದೊರಕಿತು. ಇದರಲ್ಲಿ ಕರ್ನಾಟಕದ ಬೇಡ, ನಾಯಕ, ವಾಲ್ಮೀಕಿ ಸಮುದಾಯಗಳನ್ನು ಪರಿಶಿಷ್ಟವರ್ಗದ ಮೀಸಲಾತಿ ಪಟ್ಟಿಗೆ ಸೇರಿಸಲಾಯಿತು. ಇದರಿಂದ ಆಧುನಿಕ ಶಿಕ್ಷಣ ಹಾಗೂ ಕೆಲವು ಉದ್ಯೋಗಾವಕಾಶಗಳು ಅವರಿಗೆ ಲಭಿಸಿದವು. ಆದರೆ ಇನ್ನುಳಿದವರು ಕೂಲಿನಾಲಿ ಮಾಡಿ ಬದುಕನ್ನು ಸಾಗಿಸಲಾರಂಭಿಸಿದರು. ಆರ್ಥಿಕವಾಗಿ ವಾಲ್ಮೀಕಿ ಸಮುದಾಯ ತೀರ ಹಿಂದುಳಿದ ಬಡತನ, ದಾರಿದ್ರ್ಯ, ಅನಕ್ಷರತೆ, ನಿರುದ್ಯೋಗ, ಅನಾರೋಗ್ಯ ಮುಂತಾದ ಪಿಡುಗಿಗೆ ಬಲಿಯಾದವರ ಸಾಲಿನಲ್ಲಿ ಈ ಸಮುದಾಯದ ಕುಟುಂಬಗಳೂ ಸೇರಿವೆ. ಆದರೂ ಭಾರತದ ಪ್ರಜಾಪ್ರಭುತ್ವದಲ್ಲಿ ಸ್ಥಾನಪಡೆದು ಈ ಸಮುದಾಯದ ಏಳಿಗೆಗೆ "ದಿವಂಗತ ಎ.ಭೀಮಪ್ಪನಾಯಕ, ಹೊ.ಚಿ. ಬೋರಯ್ಯ, ದಿ.ಎಲ್.ಜಿ. ಹಾವನೂರು, ಪಟೇಲ್ ಪಾಪನಾಯಕ, ಎನ್.ಜಿ. ನಾಯಕ, ವೆಂಕಟಪ್ಪ ನಾಯಕ, ಶಂಕರಸಿಂಗ, ಚಂದ್ರಶೇಖರ ನಾಯಕ, ಎನ್.ಟಿ. ಬೊಮ್ಮಣ್ಣ, ಚಳ್ಳಕೆರೆ ತಿಪ್ಪೇಸ್ವಾಮಿ, ಎನ್.ವೈ. ಹನುಮಂತಪ್ಪ, ಶ್ರೀರಾಮುಲು, ಬಾಲಚಂದ್ರ ಜಾರಿಕಿಹೊಳಿ"[೬] ಮುಂತಾದವರು ನಾಯಕರಾಗಿ ಬೆಳೆದು ಕಾರ್ಯನಿರ್ವಹಿಸಿದರು. ಇವರೊಂದಿಗೆ ಬೆಳಗಾವಿಯ ಡಾ. ಭೀಮರಾವ್ ಗಸ್ತಿ ಅವರು ಸೇರುತ್ತಾರೆ. ಇವರು ವಾಲ್ಮೀಕಿ ಸಮುದಾಯದ ಸಂಘಟನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಹೀಗೆ ನಾವು ನಾಲ್ಕು ಘಟ್ಟಗಳಲ್ಲಿ ಅದರ ಬೆಳವಣಿಗೆಯನ್ನು ನೋಡಿದಾಗ ಅದು ಅನೇಕ ಸ್ಥಿತ್ಯಂತರಗಳ ಮೂಲಕ ಕಷ್ಟ–ನಷ್ಟಗಳ ರೂಪಹೊಂದಿ ಬೆಳವಣಿಗೆಯನ್ನು ಹೊಂದುತ್ತಾ ಇದೆ.

ಒಟ್ಟಾರೆಯಾಗಿ ಹೇಳುವುದಾದರೆ, ಸಮಾಜದ ಅಲಕ್ಷಿತ ಸಮುದಾಯ ಒಂದು ಏಳಿಗೆ ಹೊಂದಬೇಕಾದರೆ ಅದಕ್ಕೆ ತನ್ನದೇ ಆದ ಅನೇಕ ಒತ್ತಡ, ಉದ್ದೇಶಗಳು, ಬಿಕ್ಕಟ್ಟುಗಳನ್ನು ಅದು ನಿಭಾಯಿಸಿಕೊಳ್ಳಲೇಬೇಕಾಗುವುದು.

ಇದರ ನಿಭಾವಣೆಗಾಗಿ ಸಮರ್ಥನಾಯಕತ್ವದ ರೂಪಣೆಯು ಅವಶ್ಯಕತೆಯು ಆ ಸಮುದಾಯಕ್ಕೆ ಬೇಕಾಗಿರುತ್ತದೆ. ಒತ್ತಡ, ಉದ್ದೇಶ, ನಾಯಕತ್ವಗಳ ಈಡೇರಿಕೆಗೆ ಬೇಕಾದ ಸಮಯ, ಸಂದರ್ಭಗಳು ಪೂರಕವಾದಾಗ ಆ ಸಮುದಾಯ ಏಳಿಗೆಯ ಚಾರಿತ್ರಿಕ ಘಟನೆಗಳಿಗೆ ಕಾರಣವಾಗುತ್ತದೆ. ಇಂತಹ ಚಾರಿತ್ರಿಕ ಘಟನೆಗಳು ಸಮುದಾಯದ ಏಳಿಗೆಯಲ್ಲಿ ಎಲ್ಲಾ ಸನ್ನಿವೇಶದಲ್ಲೂ ಘಟಿಸಬೇಕಾದರೆ ಆ ಸಮುದಾಯಕ್ಕೆ ಮೇಲ್ಕಾಣಿಸಿದ ಸಂಗತಿಗಳ ಜೊತೆಗೆ ಶಿಕ್ಷಣ ಪಡೆಯುವ ಅನಿವಾರ್ಯತೆಯೂ ಇದೆ. ಶಿಕ್ಷಣ ಒಂದಿದ್ದು ಉಳಿದವುಗಳು ನಗಣ್ಯ ಎನಿಸಿಕೊಂಡರು. ಅವುಗಳನ್ನು ನಿಭಾಯಿಸಿಕೊಳ್ಳುವ ಶಕ್ತಿ ಸಮುದಾಯಕ್ಕೆ ಬರುತ್ತದೆ. ಆದರೆ ಸಮುದಾಯವೇ ಅನಕ್ಷರತೆಯಿಂದ ಕೂಡಿದ್ದಾಗ ಉಳಿದವುಗಳ ಶಕ್ತಿ ಕುಂದುತ್ತದೆ. ಸಮುದಾಯದ ಸ್ವಾವಲಂಬನೆ, ಆರ್ಥಿಕ, ಸಾಮಾಜಿಕ, ರಾಜಕೀಯ ಶಕ್ತಿಗೆ ಪ್ರಮುಖವಾಗಿ ಶಿಕ್ಷಣವೇ ಕಾರಣವಾಗಿರುವುದರಿಂದ ಶಿಕ್ಷಣ ಪಡೆಯುವುದು ಅನಿವಾರ್ಯವಾಗಿದೆ. ಭಾರತದ ತಳಸಮುದಾಯದ ಏಳಿಗೆಗೆ ಲೋಹಿಯ ಅವರು 'ಜಾತಿಯ ಬಲ, ಹಣಬಲದ ಜೊತೆಗೆ ಇಂಗ್ಲಿಷ್ ಶಿಕ್ಷಣ ಪಡೆದಾಗ' ಮಾತ್ರ ಪ್ರಬಲ ಶಕ್ತಿಯಾಗಿ ಬೆಳೆಯಲು ಸಾಧ್ಯ ಎಂಬ ಮಾತು ನಿಜ ಕೂಡ.

ವಾಲ್ಮೀಕಿ ಸಮುದಾಯವು ಭಾರತ ಸ್ವಾತಂತ್ರ್ಯಗೊಳ್ಳುವವರೆಗಿನ ಬೆಳವಣಿಗೆ ನೀರಸದಾಯಕವಾದುದಾದರೆ, ಸ್ವತಂತ್ರಗೊಂಡ ಮೇಲೆ ಆಧುನಿಕ ಶಿಕ್ಷಣಕ್ಕೆ ತನ್ನನ್ನು ಒಪ್ಪಿಸಿಕೊಳ್ಳುತ್ತಾ ಸಂವಿಧಾನಿಕ ಸೌಲಭ್ಯಗಳನ್ನು ಪಡೆಯುವುದರ ಮೂಲಕ ಸಂಘಟನೆ ಹೊಂದಿ ಪ್ರಬಲ ರಾಜಕೀಯ ಶಕ್ತಿಯಾಗಿ ಬೆಳವಣಿಗೆ ಹೊಂದಿದೆ. ಅನೇಕ ನಾಯಕರು ಸಮುದಾಯದ ಏಳಿಗೆಗಾಗಿ ಶ್ರಮಿಸಿದ್ದಾರೆ. ಪ್ರಸ್ತುತ ದಿನಗಳಲ್ಲಿ ಕೆಲವೇ ಬೆರಳೆಣಿಕೆಯ ನಾಯಕರುಗಳ ದಕ್ಷತೆಯ ಸಮುದಾಯ-ಸಂಘಟನೆಯಿಂದ ಪ್ರಬಲ ರಾಜಕೀಯ ಶಕ್ತಿಯಾಗಿ ಬೆಳೆಯುತ್ತಿದೆ.

ಟಿಪ್ಪಣಿಗಳು

೧. ಡಾ.ವಿರೂಪಾಕ್ಷಿ ಪೂಜಾರಹಳ್ಳಿ, ಬೇಟೆ ಮತ್ತು ಬೇಡರು, ಪುಟ.೧೧೯

೨. ಅದೇ " ಪುಟ.೧೧೯

೩. ಅದೇ " ಪುಟ.೧೧೫

೪. ಹರತಿಸಿರಿ, ಪು–ಸಂ–೩೨೮ ಮತ್ತ ನೋಡಿ ಇತಿಹಾಸ ದರ್ಶನ, ಸಂ, ೯, ಪುಟ.೪೬

೫. ಡಾ.ವಿರೂಪಾಕ್ಷಿ ಪೂಜಾರಹಳ್ಳಿ, ಬೇಟೆ ಮತ್ತು ಬೇಡರು, ಪುಟ.೧೨೨,೧೨೩

೬. ಅದೇ " ಪುಟ.೧೧೩

೭. ಅದೇ " ಪುಟ.೧೧೩

ಅಧ್ಯಾಯ – ಮೂರು

ಆಧುನಿಕ ಶಿಕ್ಷಣ ಮತ್ತು ವಾಲ್ಮೀಕಿ ಸಮುದಾಯ

ಅಧ್ಯಾಯ – ೩

ಆಧುನಿಕ ಶಿಕ್ಷಣ ಮತ್ತು ವಾಲ್ಮೀಕಿ ಸಮುದಾಯ

ಭಾರತವು ಪ್ರಾಚೀನ ಕಾಲದಿಂದಲೂ ಗುರುಕುಲ ಶಿಕ್ಷಣವನ್ನು ಅವಲಂಬಿಸಿತ್ತು. ವೇದಗಳು, ಪುರಾಣಗಳು, ಉಪನಿಷತ್ತುಗಳ ಪಠಣ, ರಾಮಾಯಣ, ಮಹಾಭಾರತ ಆದಿಯಿಂದಲೂ ಬೆಳೆದುಬಂದ ಶಿಕ್ಷಣದ ಪಠ್ಯ ವಿಷಯಗಳಾಗಿವೆ. ಇವುಗಳ ಜೊತೆ ಜೊತೆಗೆ ಯುದ್ಧವಿದ್ಯೆಗಳಾದ ಕತ್ತಿವರಸೆ, ಬಿಲ್ಲುವಿದ್ಯೆ, ಮಲ್ಲಯುದ್ಧ ಮುಂತಾದ ಸಾಂಪ್ರದಾಯಿಕ ವಿದ್ಯೆಗಳನ್ನು ರಾಜಾಶ್ರಯ ಹಾಗೂ ಗುರುಕುಲಗಳಲ್ಲಿ ಕಲಿಸಲಾಗುತ್ತಿತ್ತು.

ನಂತರದ ಕಾಲಘಟ್ಟದಲ್ಲಿ ಧಾರ್ಮಿಕ ಕೇಂದ್ರಗಳಾದ ಮಠಗಳು, ದೇಗುಲಗಳು, ಮಂದಿರ, ಮಸೀದಿ, ಚರ್ಚುಗಳು, ಬಸದಿಗಳ ಮುಖಾಂತರ ಶಿಕ್ಷಣ ನೀಡುವಿಕೆ ಮುಂದುವರೆಯಿತು.

ಹಿಂದಿನ ಕಾಲದ ಶಿಕ್ಷಣವು ವೃತ್ತಿಯಾಧಾರಿತವಾಗಿತ್ತು. ಮತ್ತು ಜೀವನಕ್ಕೆ ಆಧಾರವಾಗಿ ಇತ್ತು. ಕೆಲವರ್ಗಗಳಿಗೆ ಮಾತ್ರ ಶಿಕ್ಷಣ ಮೀಸಲಾಗಿತ್ತು. ರಾಜ್ಯದ ರಾಜವಂಶದವರು ಆಳುವವರ್ಗದವರು ಹಾಗೂ ಶ್ರೀಮಂತ ವ್ಯಾಪಾರಿಗಳು, ಪೌರೋಹಿತ್ಯ ಮಾಡಿಕೊಂಡು ಬರುವ ವರ್ಗಗಳು ಮಾತ್ರ ಅಕ್ಷರದ ಮೂಲಕ ಶಿಕ್ಷಣವನ್ನು ಪಡೆದು ಅದರ ಲಾಭವನ್ನು ಪಡೆದುಕೊಂಡವು. ಉಳಿದ ವರ್ಗದ ಜನರು ಅನಕ್ಷರಸ್ಥರಾಗಿಯೇ ಶಿಕ್ಷಣ ಪಡೆದ ವರ್ಗಗಳ ಜನರ ಸೇವೆಯಲ್ಲಿ ತಮ್ಮ ಜೀವನವನ್ನು ಸಾಗಿಸುತ್ತಿದ್ದರು. ತಮಗಾಗುತ್ತಿರುವ ಶೋಷಣೆಯ ಬಗ್ಗೆ ಚಿಂತನೆಯನ್ನು ಮಾಡದಷ್ಟು ಅಮಾಯಕರಾಗಿಯೇ ಉಳಿಯುವಷ್ಟರ ಮಟ್ಟಿಗೆ ಈ ಸಾಂಪ್ರದಾಯಿಕ ಶಿಕ್ಷಣ ಪದ್ಧತಿ ನಡೆದುಕೊಂಡು ಬಂದಿತು.

ಕ್ರಿ.ಶ. ೧೭-೧೮ನೇ ಶತಮಾನದವರೆಗೂ ಪರಿಸ್ಥಿತಿ ಬದಲಾಗದೆ ಹಾಗೆಯೇ ಇದ್ದಿತು. ನಂತರ ಪ್ರಪಂಚದ ನಾನಾ ದೇಶಗಳಲ್ಲಿ ಕಂಡುಬಂದ ಮಹಾ ಆರ್ಥಿಕ ಮುಗ್ಗಟ್ಟು ಹಾಗೂ ಕೈಗಾರಿಕೀಕರಣದಿಂದಾಗಿ

ಭಾರತದಂತಹ ಸಂಪ್ರದಾಯಸ್ಥ ರಾಷ್ಟ್ರಗಳಿಗೆ ಪಾಶ್ಚಾತ್ಯರ ಸಂಪರ್ಕವೇರ್ಪಟ್ಟಿತು. ಪಾಶ್ಚಾತ್ಯರ ಆಗಮನವು ಭಾರತದ ಪುನರುಜ್ಜೀವನಕ್ಕೆ ನಾಂದಿಯಾಯಿತು. ವ್ಯಾಪಾರಕ್ಕೆಂದು ಬಂದ ಫ್ರೆಂಚರು, ಪೋರ್ಚುಗೀಸರು, ಬ್ರಿಟಿಷರು, ಡಚ್ಚರು ಬರೀ ವ್ಯಾಪಾರೀಕರಣವಲ್ಲದೆ ತಮ್ಮ ಧರ್ಮಪ್ರಚಾರವನ್ನು ಸಹ ಕೈಗೊಂಡರು. ಒಡೆದು ಆಳುವ ನೀತಿಯ ಮೂಲಕ ಸಣ್ಣ ಸಣ್ಣ ಪಾಳೆಪಟ್ಟು ಮತ್ತು ರಾಜರುಗಳನ್ನು ತಮ್ಮ ಆಡಳಿತಕ್ಕೊಳಪಡಿಸಿಕೊಂಡು ಆಳ್ವಿಕೆ ನಡೆಸಿದರು.

ರಿಪ್ಪನ್, ಕರ್ಜನ್, ಮೇಕಾಲೆಯಂತಹ ನೀತಿ ನಿರೂಪಕ ಚಿಂತಕರು ತಮ್ಮ ವ್ಯಾಪಾರೀಕರಣ ಹಾಗೂ ಧರ್ಮಪ್ರಚಾರ, ಆಡಳಿತ ನಡೆಸಲು ಅನುಕೂಲವಾಗಲೆಂದು ಪಾಶ್ಚಾತ್ಯ ನೀತಿಯನ್ನು ಜಾರಿಗೆ ತಂದರು. ಹೆಣ್ಣುಮಕ್ಕಳು ಶಿಕ್ಷಣ ಪಡೆಯುವಂತಾಯಿತು. ಆಧುನಿಕ ಶಿಕ್ಷಣ ಪಡೆದ ಭಾರತೀಯರಲ್ಲಿ ವೈಚಾರಿಕತೆ ಬೆಳೆಯತೊಡಗಿತು. ಮೂಢನಂಬಿಕೆ, ಸಂಪ್ರದಾಯ ಆಚರಣೆಯಂತಹ ಸಾಮಾಜಿಕ ಪಿಡುಗುಗಳ ವಿರುದ್ಧ ಸಮರವನ್ನೇ ಸಾರಿದರು.

ರಾಜಾರಾಮ್ ಮೋಹನ್‌ರಾಯ್, ದಯಾನಂದ ಸರಸ್ವತಿ, ಜ್ಯೋತಿ ಬಾಫುಲೆ ಮುಂತಾದವರು ಸ್ಥಳೀಯವಾಗಿ ಆಧುನಿಕ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಿದರು. ಜನರ ಸಾಮಾಜಿಕ, ಆರ್ಥಿಕ ಜೀವನವನ್ನು ಎತ್ತರಿಸಲು ಯತ್ನಿಸಿದರು. ಆಧುನಿಕ ಶಾಲಾ ಕಾಲೇಜುಗಳಲ್ಲಿ ಸಮಾಜವಿಜ್ಞಾನ, ವಿಜ್ಞಾನ, ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರ, ಇತಿಹಾಸ ಮುಂತಾದ ವಿಷಯಗಳ ಬೋಧನೆ ನಡೆಯಿತು.

ಪಾಶ್ಚಾತ್ಯರು ಸ್ವಾರ್ಥಸಾಧನೆಗಾಗಿ ಶಿಕ್ಷಣವನ್ನು ನೀಡುತ್ತಾ ಬಂದರೆ ಅದು ಭಾರತೀಯರಲ್ಲಿ ವೈಚಾರಿಕತೆ ಮತ್ತು ಹೋರಾಟದ ಮನೋಭಾವವನ್ನು ಕೆರಳಿಸಿತು. ಗಾಂಧಿ, ಅಂಬೇಡ್ಕರ್, ತಿಲಕ್ ಅಂತಹವರು ಚಳುವಳಿಯ ಮುಂಚೂಣಿಯಲ್ಲಿ ನಿಂತು, ದಾಸ್ಯತ್ವದಿಂದ ಮುಕ್ತಿ ಪಡೆಯಲು ಕರೆ ನೀಡಿದರು. ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಮಂತ್ರಗಳು ಪಠಿಸುವಂತಾಯಿತು. ಸಮಾಜದ ಕೆಲವರ್ಗಗಳಿಗೆ ಮಾತ್ರ ಮೀಸಲಿದ್ದ ಶಿಕ್ಷಣ ಇಂದು ಎಲ್ಲಾವರ್ಗಗಳ ಸ್ವತ್ತಾಗುವುದರ ಮೂಲಕ ಜನಜಾಗೃತಿ ಮೂಡಿಸಿ, ಸ್ವಾತಂತ್ರ್ಯ ಚಳುವಳಿಯನ್ನೇ ಹುಟ್ಟುಹಾಕಿತು.

ಪಾಶ್ಚಾತ್ಯರಿಂದ ಭಾರತವನ್ನು ಮುಕ್ತಿಗೊಳಿಸಿ, ಸ್ವತಂತ್ರಗೊಂಡನಂತರ ತಮ್ಮದೇ ಆಳ್ವಿಕೆಗೆ ಅನುಕೂಲವಾಗುವಂತೆ ಭಾಷಾವಾರು ಪ್ರಾಂತ್ಯ ವಿಂಗಡನೆಯ ಮೂಲಕ, ೧೯೫೬ರಲ್ಲಿ ಕರ್ನಾಟಕ ಏಕೀಕರಣವಾಯಿತು. ಹಿಂದೆ ಮೈಸೂರು ಸಂಸ್ಥಾನವಾಗಿ ಆಳ್ವಿಕೆ ನಡೆಸಿ ಶಿಕ್ಷಣಕ್ಕೆ ಹೆಚ್ಚಿನ ಒತ್ತನ್ನು ಸಹ ನೀಡಿತ್ತು. ಆಧುನಿಕ ಶಿಕ್ಷಣದಿಂದ ಕರ್ನಾಟಕದ ತಳ ಸಮುದಾಯಗಳು ಸಹ ತಮ್ಮ ಅಸ್ಮಿತೆಯನ್ನು ಉಳಿಸಿಕೊಂಡು ಬಂದವು. ಅಖಂಡ ಕರ್ನಾಟಕವು ಮೈಸೂರು ಸಂಸ್ಥಾನದ ಜೊತೆಗೆ ಹೈದ್ರಾಬಾದ್ ನಿಜಾಮನ ಆಳ್ವಿಕೆಗೆ ಒಳಪಟ್ಟ ಪ್ರದೇಶಗಳಾದ ರಾಯಚೂರು, ಬೀದರ್, ಕೊಪ್ಪಳ, ಯಾದಗಿರಿ ಮುಂತಾದವು ಕರ್ನಾಟಕದಲ್ಲಿ ವಿಲೀನವಾದವು. ಮುಂಬೈ ಪ್ರಾಂತ್ಯದಿಂದ ಬೆಳಗಾವಿ, ಧಾರವಾಡ, ಹುಬ್ಬಳ್ಳಿ, ಗದಗ, ಬಾಗಲಕೋಟೆ ಪ್ರದೇಶಗಳು ಕರ್ನಾಟಕದಲ್ಲಿ ವಿಲೀನವಾದವು.

ಹೀಗೆ ವಿಲೀನವಾದ ಪ್ರದೇಶಗಳು ಆರ್ಥಿಕ, ಸಾಮಾಜಿಕ, ಶೈಕ್ಷಣಿಕವಾಗಿ ಹಿಂದುಳಿದ ಪ್ರದೇಶಗಳಾಗಿಯೇ ಉಳಿದು ಅನೇಕ ಸಮಸ್ಯೆಗಳಿಗೆ ಎಡೆಮಾಡಿದವು. ಹಾಗೂ ಹೀಗೂ ತಳಸಮುದಾಯದ ಕೆಲವರು ಆಧುನಿಕ ಶಿಕ್ಷಣ ಪಡೆದುಕೊಂಡು ಶಿಕ್ಷಣ ನೀಡಿದ ವೈಚಾರಿಕ ಮನೋಭಾವ, ಚಿಂತನೆಗಳ ಮೂಲಕ ತಮ್ಮ ಸಮ್ಮುದಾಯದ ಏಳಿಗೆಗಾಗಿ ಶ್ರಮಿಸುತ್ತಿದ್ದರು. ಅಂತಹವರಲ್ಲಿ ಬೆಳಗಾವಿ ಮೂಲದ ಡಾ. ಭೀಮರಾವ್ ಗಸ್ತಿಯವರು ಒಬ್ಬರಾಗಿದ್ದಾರೆ. ಗಸ್ತಿಯವರು ವಾಲ್ಮೀಕಿಸಮುದಾಯದ ಸಂಘಟನೆಗಾಗಿ ಶ್ರಮಿಸಿ, ಸಮುದಾಯ ಎದುರಿಸುತ್ತಿರುವ ಸಮಸ್ಯೆಗಳನ್ನು ನಿವಾರಿಸಲು ಶಿಕ್ಷಣದಿಂದ ಮಾತ್ರ ಸಾಧ್ಯವೆಂಬ ಮಂತ್ರದೊಂದಿಗೆ ಸಮುದಾಯ ಸಂಘಟನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡವರು; ಸಾಮಾಜಿಕ ಕಾರ್ಯಕರ್ತರಾಗಿ ಸಮುದಾಯದ ಸಮಸ್ಯೆಗಳಿಗೆ ಸ್ಪಂದಿಸುತ್ತಾ ಬೆಳೆದವರು.

ಆದಿಕಾಲದ ಮಾನವನಿಂದ ಇತ್ತೀಚಿನ ಬ್ರಿಟಿಷರವರೆಗಿನ ಶಿಕ್ಷಣಪದ್ಧತಿಯನ್ನು ಅವಲೋಕಿಸಿದಾಗ ಶ್ರೇಣೀಕೃತ ಸಮಾಜದಲ್ಲಿ ಕೆಲವೇ ಮೇಲುವರ್ಗಗಳು ಮಾತ್ರ ಶಿಕ್ಷಣ ಪಡೆದು, ಪ್ರಭುತ್ವ, ರಾಜರ ಆಡಳಿತದಲ್ಲಿ, ಸಮಾಜದಲ್ಲಿ ಗೌರವಾನೆತ ಸ್ಥಾನಪಡೆದಿದ್ದರೆಂಬುದು ಖಚಿತ. ಆದರೆ ಉಳಿದ ಸಮುದಾಯದ ಜನರು ಶಿಕ್ಷಣದಿಂದ ವಂಚಿತರಾದರೆನ್ನುವುದು ಮಾತ್ರ ಸತ್ಯ. ಬೇಟೆ, ಗ್ರಾಮೀಣ ಕುಲಕಸುಬುಗಳ ಮೂಲಕ ತಮ್ಮ ಅಸ್ಮಿತೆಯನ್ನು ಉಳಿಸಿಕೊಂಡು ಬಂದ ವಾಲ್ಮೀಕಿ ಸಮುದಾಯ ಬ್ರಿಟಿಷರ ಆಧುನಿಕ ಶಿಕ್ಷಣಕ್ಕೆ ಮುಖಾಮುಖಿಯಾಗಲು ಸಿದ್ಧವಿರಲಿಲ್ಲ. ಆದರೆ ಬ್ರಿಟಿಷರು ತಮ್ಮ ರಾಜಕಿಯ ಆಳ್ವಿಕೆಗಾಗಿ ಮತ್ತು ಸಂಪತ್ತಿನ ಲೂಟಿಗಾಗಿ ಭಾರತದಲ್ಲಿ ಅನೇಕ ಕಲ್ಯಾಣ ಕಾರ್ಯಗಳನ್ನು ಆರಂಭಿಸಿದರು. ಅಂತಹ ಕಲ್ಯಾಣ ಕಾರ್ಯದಲ್ಲಿ ಶಿಕ್ಷಣವೂ ಒಂದು. ಉಳಿದ ಕಾರ್ಯಗಳು ವಾಲ್ಮೀಕಿ ಸಮುದಾಯ ಶಿಕ್ಷಣ ಪಡೆಯಲು ಪೂರಕ ಕಾರ್ಯಗಳಾಗದೆ, ಮಾರಕ ಕಾರ್ಯಗಳಾಗಿವೆ. ವಾಲ್ಮೀಕಿ ಸಮುದಾಯವು ನಾಗರಿಕ ಜಗತ್ತಿಗೆ ತನ್ನನ್ನು ತೆರೆದುಕೊಳ್ಳುತ್ತಿರುವಾಗಲೇ ಬ್ರಿಟಿಷರಿಂದ ಕಾಡಿನ ರಕ್ಷಣೆ ಕಾಯ್ದೆ ಹಾಗೂ ವನ್ಯ ಜೀವಿಗಳ ಸಂರಕ್ಷಣೆ ಕಾಯ್ದೆಗಳು ಜಾರಿಯಾದವು. ಇವುಗಳಿಂದ ಸಮುದಾಯದ ಜನರು ಕಾಡುಗಳನ್ನು ತ್ಯಜಿಸಿ ಹಳ್ಳಿಗಳಿಗೆ, ನಗರಗಳಿಗೆ ಪಯಣ ಬೆಳಸಿದರು. ಕೆಲವರು ಜೀವನಕ್ಕಾಗಿ ಬುಟ್ಟಿ ಹೆಣೆಯುವುದು, ಚಾಪೆ ಎಣೆಯುವುದು ಮುಂತಾದ ಕಾರ್ಯಗಳಲ್ಲಿ ನಿರತರಾದರೆ, ಮತ್ತೆಕೆಲವರು ತಮ್ಮ ನಿತ್ಯ ಜೀವನದ ಅನ್ನಕ್ಕಾಗಿ ಕಾಡಿನ ಬೇಟೆಗೆ ಹೊರಟು ಬ್ರಿಟಿಷ್ ಅಧಿಕಾರಿಗಳಿಂದ ಶಿಕ್ಷೆಗೊಳಗಾಗುತ್ತಿದ್ದರು. ಇನ್ನೂ ಕೆಲವರು ತಮ್ಮ ತುತ್ತಿನ ಚೀಲ ತುಂಬಿಸಿಕೊಳ್ಳಲು ದಾರಿಹೋಕರನ್ನು ಬೆದರಿಸಿ ದೋಚುವ ಕಾರ್ಯಗಳಲ್ಲಿ ತೊಡಗಿಕೊಂಡು ಕಳ್ಳರು, ದರೋಡೆಕೋರರು ಎಂಬ ಹಣೆಪಟ್ಟಿಯನ್ನು ಕಟ್ಟಿಕೊಂಡರು. ಈ ಸನ್ನಿವೇಶದಲ್ಲಿ ಆಧುನಿಕ ಶಿಕ್ಷಣದಿಂದಲೂ ಸಹ ಇವರು ದೂರವೇ ಉಳಿದರು. ಆದರೆ ಇದೇ ಸಮುದಾಯದ ಕೆಲ ಅಳಿದುಳಿದ ಶ್ರೀಮಂತರು ಮಾತ್ರ ತಮ್ಮ ಮಕ್ಕಳಿಗೆ ಆಧುನಿಕ ಶಿಕ್ಷಣವನ್ನು ನೀಡಿದರು.

ಹಾಗೂ ಹೀಗೂ ಜಮೀನು ಹೊಂದಿ ಕೃಷಿ ಚಟುವಟಿಕೆಯಲ್ಲಿ ತೊಡಗಿಸಿಕೊಂಡು ಜೀವನ ಸಾಗಿಸುತ್ತಿದ್ದ ಕೆಲಕುಟುಂಬಗಳಿಂದ ಪ್ರಭುತ್ವ ರಸ್ತೆ ಅಭಿವೃದ್ಧಿಗಾಗಿ, ಕೈಗಾರಿಕೆಗಳ ಸ್ಥಾಪನೆಗಾಗಿ ಕಡಿಮೆ

ಬೆಲೆಗೆ ಜಮೀನುಗಳನ್ನು ಪಡೆದು ಅವರನ್ನು ಅಲೆಮಾರಿಗಳನ್ನಾಗಿಸಿತು. ಅಲ್ಲದೆ ಇದ್ದಬದ್ದ ಜಮೀನಿನ ಕಂದಾಯ ನೀಡಲು ಆಗದಿದ್ದಾಗ ಪಟೇಲರು, ಶಾನಭೋಗರಿಗೆ ಜಮೀನುಗಳನ್ನು ಬಿಟ್ಟುಕೊಟ್ಟಿರುವ ಪ್ರಸಂಗಗಳು ಅನೇಕ ಇವೆ.

ಈ ಸಮುದಾಯವನ್ನು ಸರ್ಕಾರ ಪರಿಶಿಷ್ಟವರ್ಗಕ್ಕೆ ಸೇರಿಸಿ ಅನೇಕ ಸೌಲಭ್ಯಗಳನ್ನು ಮೀಸಲಾತಿಯ ಹೆಸರಿನಲ್ಲಿ ನೀಡಿತು. ಆದರೂ ಆರ್ಥಿಕವಾಗಿ ಸಾಮಾಜಿಕವಾಗಿ ಹಿಂದುಳಿದ ಈ ಸಮುದಾಯ ಶಿಕ್ಷಣ ಪಡೆಯುವಲ್ಲಿ ಎಡವಿತು. ಅಷ್ಟು ಇಷ್ಟು ಆಧುನಿಕ ಶಿಕ್ಷಣ ಪಡೆದ ಕೆಲವರು, ಸಮುದಾಯದ ರೂಢಿ, ಸಂಪ್ರದಾಯ, ಮೂಢನಂಬಿಕೆಗಳನ್ನು ತಿದ್ದದೆ ತಾವು ತಮ್ಮ ಆರ್ಥಿಕ ಸ್ಥಾನಮಾನ ಗೌರವ ಎಂಬಂತೆ ಇದ್ದು ಬಿಟ್ಟರು.

ಶೈಕ್ಷಣಿಕವಾಗಿ ಬೇಡರು ೧೯೭೬ರ ನಂತರದಲ್ಲಿ ನಗರ ಪಟ್ಟಣಗಳಲ್ಲಿ ಮಾತ್ರ ಹೆಚ್ಚಿನ ಲಾಭ ಪಡೆಯುತ್ತಿದ್ದಾರೆ. ಹಳ್ಳಿಗಳಲ್ಲಿ ಇನ್ನೂ ಹಳೆಯಕಾಲದ ಗೊಡ್ಡು ಸಂಪ್ರದಾಯಗಳಿಂದ ಮಕ್ಕಳನ್ನು ಶಾಲೆಗೆ ಕಳುಹಿಸುವುದಿಲ್ಲ. ಸಮುದಾಯದಿಂದ ಬಂದ ಮಕ್ಕಳು, ಅನಕ್ಷರತೆ ಕಟ್ಟುನಿಟ್ಟಿನ ಸಂಪ್ರದಾಯಗಳ ಸೆಳೆತಕ್ಕೆ ಸಿಕ್ಕು ಶಾಲೆ ಬಿಡುವುದು ಹಾಗೂ ಅನುತ್ತೀರ್ಣರಾಗುವುದು ಹೆಚ್ಚು. ಸ್ಥಿತ್ಯಂತರಗೊಳ್ಳುತ್ತಿರುವ ವಾಲ್ಮೀಕಿ ಸಮುದಾಯವು ಅನ್ನ-ಆಹಾರಕ್ಕೆ ಹಾತೊರೆದಂತೆ ಶಿಕ್ಷಣಕ್ಕೆ ಪ್ರಯತ್ನಿಸಿದ್ದು ಅನೇಕ ವರ್ಷಗಳ ತರುವಾಯ ವರ್ಣಾಶ್ರಮ ಪದ್ಧತಿಯಲ್ಲಿ ಶಿಕ್ಷಣದಿಂದ ವಂಚಿತರಾದ ಈ ಸಮುದಾಯದವರು ತಮಗೆ ತಾವೇ ಕೆಲ ಮೌಲ್ಯಗಳನ್ನು ರೂಢಿಸಿಕೊಂಡರು.

ವೇದಗಳ ಕಾಲದ ಶಿಕ್ಷಣ, ಮಹಮದೀಯರ ಕಾಲದ ಶಿಕ್ಷಣ ಹಾಗೂ ಬ್ರಿಟಿಷರ ಕಾಲದ ಶಿಕ್ಷಣದಿಂದ ವಂಚಿತರಾದಂತೆ, ಬೇಡರು ಆಧುನಿಕ ಕಾಲದ ಶಿಕ್ಷಣದಿಂದ ವಂಚಿತರಾಗಲಿಲ್ಲ ಅವರು ಆಧುನಿಕ ಶಿಕ್ಷಣ ಪಡೆದು ಇತ್ತೀಚೆಗೆ ಗಣನೀಯ ಸಾಧನೆ ತೋರಿದ್ದಾರೆ. ಜಾಗೃತಗೊಂಡು ಅನೇಕ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ವಿದ್ಯಾಪ್ರಸಾರ ಮಾಡುತ್ತಿದ್ದಾರೆ. ಸರ್ಕಾರದ ಸೌಲಭ್ಯಗಳನ್ನು ಅನುಭವಿಸುತ್ತಿದ್ದಾರೆ.

"ವಾಲ್ಮೀಕಿ ವಿದ್ಯಾಸಂಸ್ಥೆ, ಮದಕರಿನಾಯಕ ವಿದ್ಯಾಸಂಸ್ಥೆ ಹೀಗೆ ನಾನಾ ಸಂಘ ಸಂಸ್ಥೆಗಳನ್ನು ಕಟ್ಟಿಕೊಂಡು ಶೈಕ್ಷಣಿಕ ಕಾರ್ಯಚಟುವಟಿಕೆಯಲ್ಲಿ ತೊಡಗಿದ್ದಾರೆ"[೧].

ವಾಲ್ಮೀಕಿ ಸಮುದಾಯದ ಜನರು ಕಾಲಕ್ಕೆ ತಕ್ಕಂತೆ ಪರಿವರ್ತನೆಯಾಗುತ್ತಿದ್ದಾರೆ. ಬೇಟೆ ಕುಲಕಸುಬುಗಳನ್ನು ತೊರೆದು ಓದು, ಉದ್ಯೋಗಗಳಿಗೆ ಊರಿಂದ ಊರಿಗೆ ಹೋಗುವುದರಿಂದ ಹೊಸ ಜಗತ್ತಿಗೆ ತಮ್ಮನ್ನು ಅಣಿಗೊಳಿಸಿಕೊಳ್ಳುತ್ತಿದ್ದಾರೆ. ಅಲ್ಲದೆ ಪ್ರಜಾಪ್ರಭುತ್ವದ ನಾಡಿನಲ್ಲಿ ಶಾಸಕ, ಸಚಿವರುಗಳಾಗಿ, ಸಾಕಷ್ಟು ಜನ ಹೆಸರು ಮಾಡಿ ಸಮುದಾಯದ ಏಳಿಗೆಗೆ ಶ್ರಮಿಸುತ್ತಿದ್ದಾರೆ. ಶಿಕ್ಷಣದಿಂದ ಸಾಕಷ್ಟು ಜನರು ಸರ್ಕಾರದ ಉನ್ನತ ಹುದ್ದೆಗಳನ್ನು ಅಲಂಕರಿಸಿದವರೂ ಇದ್ದಾರೆ.

ವಾಲ್ಮೀಕಿ ಸಮುದಾಯ ಸ್ವಾತಂತ್ರ್ಯನಂತರದಲ್ಲಿ ೧೯೫೬ರಲ್ಲಿ ಕರ್ನಾಟಕ ಏಕೀಕರಣದ ನಂತರ ೭೦ರ ದಶಕದಿಂದೀಚೆಗೆ ಶಕ್ತಿಯುತ ಸಮುದಾಯವಾಗಿ ಬೆಳೆಯುತ್ತಿದೆ. ಆದರೂ ಸಮುದಾಯಗಳ ಉನ್ನತ ಹುದ್ದೆಯಲ್ಲಿರುವ ಕೆಲ ಜನರು ತಮ್ಮ ಸ್ವಾರ್ಥ ಜೀವನಕ್ಕಾಗಿ ಸಮುದಾಯದ ಸಮಸ್ಯೆಗಳಿಗೆ ಸ್ಪಂದಿಸುತ್ತಿಲ್ಲ. ಹಾಗೆಯೇ ರಾಜಕೀಯ ವ್ಯಕ್ತಿಗಳು ಸಹ ತಮ್ಮ ಅಧಿಕಾರದ ಆಸೆಗಾಗಿ ಸಮುದಾಯದ ಅಶೋತ್ತರಗಳನ್ನು ಬಲಿಕೊಡುತ್ತಿದ್ದಾರೆ. ಇದರಿಂದ ಸಮುದಾಯ ಹಿಂದುಳಿಯಲು ಮತ್ತು ಸರ್ಕಾರದ ಸವಲತ್ತುಗಳನ್ನು ಪಡೆಯಲು ಆಗದಿರುವುದಕ್ಕೆ ಸಾಧ್ಯವಾಗಿದೆ.

ವಾಲ್ಮಿಕಿ ಸಮುದಾಯದಲ್ಲಿರುವ ಕೆಲವು ಜೀವಂತ ಸಂಪ್ರದಾಯಗಳ ಆಚರಣೆಗಳು ಇಂದಿಗೂ ಸಹ ಅವರು ಆಧುನಿಕ ಶಿಕ್ಷಣವನ್ನು ಪಡೆಯದಂತೆ ತಡೆದು ನಿಲ್ಲಿಸಿವೆ. ಹಾಗೂ ಇಂದಿನ ಶಿಕ್ಷಣ ವ್ಯವಸ್ಥೆಯು ಸಹ ಆಳುವ ವರ್ಗದ ಪರವಾಗಿರುವುದರಿಂದ ಇಂತಹ ಸಮುದಾಯಗಳ ಶೈಕ್ಷಣಿಕ ಏಳಿಗೆ ಕಷ್ಟಸಾಧ್ಯದ ವಿಷಯವಾಗಿದೆ. ಪ್ರಭುತ್ವ ಇಂದು ಬಂಡವಾಳ ಶಾಹಿಗಳ ಹಿಡಿತಕ್ಕೆ ಸಿಲುಕಿ ಸಮಾಜದ ಕೆಳ ಸಮುದಾಯಗಳ ಏಳಿಗೆಯನ್ನು ಪ್ರಚಾರಕಾರ್ಯವಾಗಿಸಿಬಿಟ್ಟಿದೆ. ಶಿಕ್ಷಣ ಪದ್ಧತಿ ಬೆಳವಣಿಗೆ ಹೊಂದಿದಂತೆಲ್ಲಾ ಸಮುದಾಯದ ಬೆಳವಣಿಗೆಯ ಜೊತೆಜೊತೆಗೆ ಸಮಸ್ಯೆಗಳು ಹುಟ್ಟುತ್ತಿರುತ್ತವೆ. ಮತ್ತೆ ಸಮುದಾಯ ಮತ್ತು ಪ್ರಭುತ್ವದ ನಡುವೆ ತಿಕ್ಕಾಟಗಳು ಶುರುವಾಗುತ್ತಲೇ ಇರುತ್ತವೆ. ಈ ಸಂಘರ್ಷಗಳಿಂದ ಹೊಸತನಕ್ಕೆ ನಾಂದಿಯಾಗುತ್ತಲೇ ಇರುತ್ತದೆ.

೩.೧. ಆಧುನಿಕ ಶಿಕ್ಷಣ: ಅಪಮಾನದ ಭಾವ :

ಭಾರತೀಯ ಶಿಕ್ಷಣ ಪದ್ಧತಿಯನ್ನು ಅವಲೋಕಿಸಿದಾಗ ಗುರುಕುಲ, ದೇವಸ್ಥಾನ, ಮಠ-ಮಂದಿರ, ಮಸೀದಿ, ಬಸದಿ, ಚೈತ್ಯಾಲಯ, ಅಗ್ರಹಾರಗಳ ಮೂಲಕ ವೇದೋಪನಿಷತ್ತುಗಳನ್ನು ಕಲಿಸಲಾಗುತ್ತಿತ್ತು. ಅಲ್ಲದೆ ಯುದ್ಧವಿದ್ಯೆಗಳನ್ನು ಸೀಮಿತ ಜನರಿಗೆ ಮಾತ್ರ ಕಲಿಸಲಾಗುತ್ತಿತ್ತು. ಪಾಶ್ಚಾತ್ಯರ ಆಗಮನದಿಂದಾಗಿ ಶಿಕ್ಷಣ ಪದ್ಧತಿಯಲ್ಲಿ ಗುರುತರವಾದ ಬದಲಾವಣೆಗಳಾದವು. ಇಂಗ್ಲಿಷ್ ಶಿಕ್ಷಣ ನೀತಿಯಿಂದಾಗಿ ಹೆಣ್ಣುಮಕ್ಕಳು ಶಿಕ್ಷಣ ಪಡೆಯುವಂತಾದರು. ಭೂಗೋಳ, ಇತಿಹಾಸ, ವಿಜ್ಞಾನ, ಭೌತಶಾಸ್ತ್ರ, ಅರ್ಥಶಾಸ್ತ್ರ ಮುಂತಾದವುಗಳ ಬಗ್ಗೆ ಶಿಕ್ಷಣ ನೀಡಲಾಯಿತು.

ಪಾಶ್ಚಾತ್ಯರು ತಮ್ಮ ಧರ್ಮ ಪ್ರಚಾರ ಮತ್ತು ಆಡಳಿತಕ್ಕೆ ಅನುಕೂಲವಾಗಲೆಂದು ಇಂಗ್ಲಿಷ್ ಶಿಕ್ಷಣವನ್ನು ಜಾರಿಗೆ ತಂದರು. ಸಮಾಜದ ಎಲ್ಲಾ ವರ್ಗಗಳು, ಸಮುದಾಯಗಳು ಸಮಾನಾಂತರವಾಗಿ ಶಿಕ್ಷಣಪಡೆಯಲು ಇದರಿಂದ ಸಹಾಯಕವಾಯಿತು. ಆದರೂ ಭಾರತೀಯರಲ್ಲಿ ಹಿಂದಿನಿಂದಲೂ ಬೆಳೆದುಬಂದಿದ್ದ ಮಡಿವಂತಿಕೆ, ಜಾತಿಭೇದ, ಸಮಾಜದ ಶ್ರೇಣಿಕರಣದಿಂದಾಗಿ ಆಧುನಿಕ ಶಿಕ್ಷಣ ಪಡೆಯುವಾಗಲು ಸಮಾಜದ ತಳಸಮುದಾಯದ ಜನರು ಅನುಭವಿಸಿದ ಹಿಂಸೆ-ಅಪಮಾನಗಳು ಸಾವಿರಾರು. ಇಂತಹ ಸಮಾಜದ ಅಲಕ್ಷಿತ ಸಮುದಾಯದ ಹಿನ್ನೆಲೆಯಿಂದ ಬಂದ ವ್ಯಕ್ತಿ ಡಾ. ಭೀಮರಾವ್ ಗಸ್ತಿ. ಗಸ್ತಿಯವರು ಆ

ಸಮುದಾಯದ ಪ್ರತಿನಿಧಿಯಾಗಿ ಪ್ರಾಥಮಿಕ ಶಿಕ್ಷಣವನ್ನು ಯಮುನಾಪುರದಲ್ಲೆ ಪಡೆದರು. ಅವರ ಬಾಲ್ಯದಲ್ಲಿ ಆದ ಶಿಕ್ಷಣ ಪಡೆಯುವಾಗಿನ ಅಪಮಾನ ಹಿಂಸೆಗಳು ಅಪಾರವಾಗಿರುವುದನ್ನು ಅವರು ಹೀಗೆ ವಿವರಿಸುತ್ತಾರೆ.

“ಎರಡನೆಯ ದಿನ ಪರಾಶ್ಯ ಮತ್ತು ಲಗಮ್ಯಾಗ ಜೊತೆಗೆ ನಾನು ಶಾಲೆಗೆ ಹೋದೆ. ಶಾಲೆ ಚಾವಡಿಯಲ್ಲಿ ನಡೆಯುತ್ತಿತ್ತು. ಚಾವಡಿಯ ಒಳಗೆ ಹನುಮಂತನ ಗುಡಿ. ಚಾವಡಿಯ ಕಟ್ಟೆಯ ಮೇಲೆ ಮಾಸ್ತರ್‌ನ ಟೇಬಲ್, ಖುರ್ಚಿ, ಗೋಡೆಗೆ ತೂಗುಹಾಕಿದ ದೊಡ್ಡ ಕರಿಹಲಗೆ ಮೇಲಿನ ಕಟ್ಟೆಯ ಮೇಲೆ ಸವರ್ಣಿಯ ಹುಡುಗರು ಕುಳಿತಿದ್ದಾರೆ. ಕೆಳಕಟ್ಟೆಯ ಮೇಲೆ ನಾವು ನಾಲ್ವರು ಬೇಡರ ಹುಡುಗರು ಕುಳಿತಿದ್ದೆವು”[೨] “ಚಾವಡಿಯ ಒಳಭಾಗದಲ್ಲಿ ಹನುಮಂತನ ಗುಡಿ ಇತ್ತು. ಸವರ್ಣೀಯರ ಹುಡುಗರು ಗುಡಿಯ ಒಳಗೆ ಹೋಗಿ ಹನುಮಂತನನ್ನು ನಮಸ್ಕರಿಸಿದರೆ ನಾವು ಕೆಳ ಕಟ್ಟೆಯ ಮೇಲೆ ನಿಂತು ಕೈ ಜೋಡಿಸುತ್ತಿದ್ದೆವು. ಬೇಡರು ಆಕಳು, ಎತ್ತು, ಎಮ್ಮೆಯ ಮಾಂಸವನ್ನು ತಿನ್ನುತ್ತಾರೆಂದು ನಮಗೆ ಮೇಲಿನ ಕಟ್ಟೆ ಏರಲು ನಿಷಿದ್ದವಾಗಿತ್ತು. ಸವರ್ಣೀಯರು ಗುಡಿಗೆ ಬರುತ್ತಿದ್ದರು. ಒಂದು ಕೈಯಲ್ಲಿ ಎಣ್ಣೆಯ ಬಟ್ಟಲು ಇನ್ನೊಂದು ಕೈಯಲ್ಲಿ ಅಗರಬತ್ತಿಯನ್ನು ಹಿಡಿದುಕೊಂಡೇ ಅವರು ಗುಡಿಗೆ ನುಗ್ಗುತ್ತಿದ್ದರು. ಒಳಗೆ ಹೋಗುವಾಗ ನಮ್ಮನ್ನು ತುಳಿಯುತ್ತಿದ್ದರು. ನಮ್ಮ ಪಾಟಿಗಳನ್ನು ಒಡೆಯುತ್ತಿದ್ದರು. ನಮಗೂ ಬೈಯುತ್ತಿದ್ದರು. ಸರಿರೋ ಬೇಡರ ಹುಡುಗರೋ ಎಂದೆನ್ನುತ್ತಿದ್ದರು. ಏ ಮಾಸ್ತರ್ ಇವರಿಗೆ ಸೊಕ್ಕು ಬಂದಿದೆ; ನಾಲ್ಕಾರು ಒದೆಯಿರಿ ಎಂದು ಮಾಸ್ತರ್‌ಗೆ ಹೇಳುತ್ತಿದ್ದರು.”[೩]

ಈ ಪ್ರಸಂಗವನ್ನು ಗಮನಿಸಿದಾಗ ಅಂದಿನ ಸಮಾಜದ ಮಡಿವಂತಿಕೆಯ ಜಾತಿ ಏಣಿಶ್ರೇಣಿ ತಿಳಿಯುವುದಲ್ಲದೆ, ಶಿಕ್ಷಣ ದೇವಾಲಯಗಳಲ್ಲೆ ನೀಡುವ ಪದ್ಧತಿ ಮುಂದುವರಿದಿರುವುದು ತಿಳಿಯುತ್ತದೆ. ಆದರೆ ಜಾತಿಭೇದ ಮಾತ್ರ ತೊಲಗಿಲ್ಲದಿರುವುದು ತಿಳಿಯುತ್ತದೆ. ಈ ಪದ್ಧತಿ ಈಗ ಹಿಂದಿನಷ್ಟು ಇಲ್ಲವಾದರೂ ತನ್ನ ಇರುವಿಕೆಯನ್ನು ಬೇರೆ ಬೇರೆ ರೂಪಗಳಲ್ಲಿ ತೋರಿಸುತ್ತಿದೆ. ಇದರಿಂದ ಸಮಾಜದ ಕೆಳಸಮುದಾಯಗಳು ಅಪಮಾನ ಹಿಂಸೆಗಳಿಗೆ ನಿರಂತರ ಒಳಗಾಗುತ್ತಿವೆ.

ಇಲ್ಲಿ ಮುಖ್ಯವಾಗಿ ಚರ್ಚಿಸಬೇಕಾದ ವಿಷಯವೆಂದರೆ ಕೆಳಸಮುದಾಯಗಳ ಆಹಾರ ಪದ್ಧತಿ. ಈ ಹಿನ್ನೆಲೆಯಲ್ಲಿ ಸಸ್ಯಹಾರಿಗಳು ಸವರ್ಣೀಯರು, ಮಾಂಸಾಹಾರಿಗಳು ಕೆಳಸಮುದಾಯದವರು, ಎನ್ನುವ ಭೇದಭಾವ ಹುಟ್ಟಿಸಿ ಶಿಕ್ಷಣ ಪಡೆಯುತ್ತಿರುವ ಮಕ್ಕಳ ಮನಸ್ಸಿನ ಮೇಲೆ ಅಘಾತವನ್ನು ಏರಿರುವುದು. ಪುರಾಣಗಳು ಹೇಳುವಂತೆ ದೇವರುಗಳೇ ಮಾಂಸಾಹಾರ ಭಕ್ಷಿಸುವಾಗ ಪ್ರಕೃತಿಯ ನೈಸರ್ಗಿಕ ಆಹಾರ ಸರಪಳಿಯಂತೆ ಕಾರ್ಯಚಟುವಟಿಕೆಗಳು ನಡೆಯುತ್ತಿರುವಾಗ ಇವರು ಮಾಂಸಾಹಾರಿಗಳು ಇವರನ್ನು ಮುಟ್ಟಬಾರದೆಂಬ ಭಾವನೆ ಸರಿಯಾದುದಲ್ಲ. ಅಲ್ಲದೆ ಕೆಳಸಮುದಾಯಗಳಿಂದ ತಮಗೆ ಬೇಕಾಗುವ ಆಹಾರ, ಬಟ್ಟೆ ಮುಂತಾದ ಜೀವನಾವಶ್ಯಕ ವಸ್ತುಗಳನ್ನು ಪಡೆದು ತಮ್ಮ ಜೀವನ ಉನ್ನತ ಸ್ಥಿತಿಯಲ್ಲಿ

ಸಾಗಿಸುವವರು. ಆ ಜನರನ್ನು ಮುಟ್ಟುವಹಾಗಿಲ್ಲ ಎಂಬ ಧೋರಣೆ ಆಧುನಿಕ ಯುಗದಲ್ಲಿಯು ಸಹ ಹಾಗೆಯೇ ಉಳಿದುಕೊಂಡು ಬಂದಿದೆ. ಆದರೆ ಇತ್ತೀಚಿನ ನಗರೀಕರಣದಿಂದ ಹೋಟೆಲ್‌ಗಳು ತಲೆಎತ್ತುವ ಮೂಲಕ ಭೇದಭಾವವಿಲ್ಲದೆ ಹಣತೆತ್ತು ಸಹ ಭೋಜನದ ವ್ಯವಸ್ಥೆ ಕಲ್ಪಿಸಿಕೊಡಲಾಗುತ್ತಿದೆ. ಆದರೂ ಗೋಹತ್ಯೆ ನಿಷೇಧ ಕಾಯ್ದೆಯಾಗಿ ಆಳುವ ಪ್ರಭುತ್ವ ಕಾನೂನು ಜಾರಿಗೆ ತಂದಿರುವುದು. ಪುರೋಹಿತಶಾಹಿ ವರ್ಗದ ರಾಜಕಾರಣವೇ, ಆಳುವ ವರ್ಗದ, ಅವಿವೇಕವೇ ತಿಳಿಯದಾಗಿದೆ. ಈ ಆಹಾರದ ನಿಷೇಧಗಳು ಹಿಂದಿನಿಂದಲೂ ಬೆಳೆದುಬಂದಿದ್ದು, ಮುಂದಿನ ದಿನಗಳಲ್ಲಿಯು ಸಹ ಮುಂದುವರೆಯುವ ಸಾಧ್ಯತೆಗಳೆ ಹೆಚ್ಚಾಗಿವೆ, ಈ ಕುರಿತ ಸಂಘರ್ಷಗಳು ಚಳುವಳಿಗೆ ಕ್ರಾಂತಿಗೆ ನಾಂದಿಯಾಗಿ ಸಮಾಜದ ಬದಲಾವಣೆಗೆ ಸಹಾಯಕವಾಗುವವು.

ಸಮಾಜದ ಕೆಳಸಮುದಾಯದ ಜನ ಉನ್ನತ ಶಿಕ್ಷಣಕ್ಕಾಗಿ ನಗರಗಳಿಗೆ ಬಂದಾಗ ಆದ ಅಪಮಾನ, ಹಿಂಸೆಯ ರೂಪ ಹೇಗಿತ್ತು ಎಂಬುದನ್ನು ಗಸ್ತಿಯವರ ಮಾತಿನಲ್ಲೇ ತಿಳಿಯೋಣ:

"ಅಲ್ಲಿಯ ಮಕ್ಕಳು ಬಿಳಿ ಅಂಗಿ ಮತ್ತು ಖಾಕಿ ಚಡ್ಡಿ ಹಾಕಿಕೊಂಡಿದ್ದರು. ನನ್ನ ಮೈಯಲ್ಲಿ ಬಣ್ಣದ ಅಂಗಿ ಇತ್ತು. ಪಟ್ಟೆ ಪಟ್ಟೆ ಚಡ್ಡಿ ಹಾಕಿಕೊಂಡಿದ್ದರೂ ಅಂಗಿಯೇ ಚಡ್ಡಿಯ ಕೆಲಸವನ್ನು ಮಾಡುತ್ತಿತ್ತು. ನಮ್ಮ ಊರಿನ ತರಗತಿಗೆ ಹೋಲಿಸಿದಾಗ ಈ ತರಗತಿ ಭಾರಿ ದೊಡ್ಡದಿತ್ತು. ಇಲ್ಲಿ ಕೂಡ್ರಲು ಬಾಕುಗಳಿದ್ದವು. ನಮ್ಮ ಊರಲ್ಲಿ ನಾವು ಗೋಣಿಚೀಲದ ಮೇಲೆ ಕೂಡ್ರುತ್ತಿದ್ದೆವು. ಇಲ್ಲಿಯೂ ನಾನು ಗೋಣಿಚೀಲ ತೆಗೆದುಕೊಂಡು ಬಂದಿದ್ದೆ. ಅದನ್ನು ನೆಲಕ್ಕೆ ಹಾಸಿ ಕೂತಾಗ ಎಲ್ಲರು ನನ್ನನ್ನು ನೋಡಿ ನಗಹತ್ತಿದರು, ನನ್ನನ್ನು ನೋಡಿ ಮಾಸ್ತರ್‌ರು ಬಾಕಿನ ಮೇಲೆ ಕೂಡ್ರಲು ಹೇಳಿದರು."[೪]

"ಯಾವ ಊರಿಂದ ಬಂದೆ? ನಿನ್ನ ಹೆಸರೇನು? ಮಾಸ್ತರ್ ಕೇಳಿದರು. ನಾನು ಯಮುನಾಪುರದವ, ನನ್ನ ಹೆಸರು.... ನನ್ನ ಹೆಸರು ಊರ ಹೆಸರು ಕೇಳಿ ಎಲ್ಲರೂ ನಗಹತ್ತಿದರು."[೫] ಈ ಪ್ರಸಂಗವನ್ನು ಗಮನಿಸಿದಾಗ ಕೆಳಸಮುದಾಯದ ಜನರು ಶಿಕ್ಷಣ ಪಡೆಯುವಾಗ ಅನುಭವಿಸಿದ ನೋವು ತಿಳಿಯುತ್ತದೆ. ಅಲ್ಲದೆ ಭಾರತ ಸ್ವತಂತ್ರವಾದ ಮೇಲೆ ಆಧುನಿಕ ಜಗತ್ತಿಗೆ ತನ್ನನ್ನು ಅಣಿಗೊಳಿಸಿಕೊಳ್ಳುತ್ತಿರುವ ಸಂದರ್ಭದಲ್ಲಿಯೇ ಕೈಗಾರಿಕೆ, ಸಾರಿಗೆ ಮುಂತಾದವುಗಳಿಂದ ನಗರಗಳು ಬೆಳೆಯತೊಡಗಿದವು. ಕೆಳಸಮುದಾಯಗಳ ಜನರು ಸಹ ಆಧುನಿಕ ಜಗತ್ತಿಗೆ, ಹಿಂದುಳಿದ ಸಮುದಾಯಗಳು ಆಧುನಿಕ ಶಿಕ್ಷಣಕ್ಕೆ ತಮ್ಮನ್ನು ಅಣಿಗೊಳ್ಳಿಸಿಕೊಳ್ಳುವತ್ತ ದಾಪುಗಾಲನ್ನಿಟ್ಟಿದ್ದರು. ಇದಕ್ಕೆ ಸಾಕ್ಷಿ ಹಳ್ಳಿಯಲ್ಲಿನ ದೇವಾಲಯದ ಚಾವಡಿಯ ಶಾಲೆಗೂ, ಇಲ್ಲಿನ ಕಾಂಕ್ರೀಟ್ ಶಾಲೆಗೂ ವ್ಯತ್ಯಾಸ ಇರುವುದು. ಇಲ್ಲಿ ಕೂಡಲು ಬಾಕಿನ ವ್ಯವಸ್ಥೆ ಮಾಡಿದ್ದು ಆಸನದಲ್ಲಿ, ತಾರತಮ್ಯತೆ ಇಲ್ಲದಿರುವುದು. ಆದರೆ, ಕೆಳಸಮುದಾಯದ ಜನರ ಹೆಸರುಗಳು ಯಾವಾಗಲೂ ಉಳಿದ ಜನರಿಗೆ ನಗೆಪಾಟಲಿಗೆ ಈಡಾಗಿರುವುದನ್ನು ಕುವೆಂಪುರವರ, 'ಮಲೆಗಳಲ್ಲಿ ಮದುಮಗಳು' ಕಾದಂಬರಿ ಚಿತ್ರಿಸುತ್ತದೆ. ಇಲ್ಲಿ ಬರುವ ಗುತ್ತಿನಾಯಿ, ಐತ-ಪಿಂಚಲು, ತಿಮ್ಮಿ ಮುಂತಾದ ಹೆಸರುಗಳು ಹಾಸ್ಯಾಸ್ಪದವಾಗಿರುವುದನ್ನು ನೋಡಬಹುದು.

ಸಮಾಜದ ಕೆಳಸಮುದಾಯಗಳ ಜನರ ಹೆಸರುಗಳು ಹೀಗೆ ಇರಬೇಕೆಂಬ ಉಚ್ಚಜಾತಿಗಳ ಪೂರ್ವಾಗ್ರಹ ಪೀಡಿತ ಅಂಶಗಳಿಂದಲೇ ಅವರ ಪಾತ್ರಗಳ ಹೆಸರು ಬಂದಿವೆ. ಇದೊಂದು ವಿಪರ್ಯಾಸವೇ ಸರಿಯಾದರೂ ಇಂದಿನ ನಗರಗಳಲ್ಲಿ ಆಧುನಿಕ ಶಿಕ್ಷಣದಿಂದ ಬದಲಾವಣೆ ಹೊಂದಿ ಕೆಳಜಾತಿಯವರಿಗೆ ಹೆಸರುಗಳ ಮೂಲಕ ಹಾಗು ಊರಿನ ಹೆಸರುಗಳ ಮೂಲಕ ಆಗುತ್ತಿರುವ ಅಪಮಾನ ಹಿಂಸೆಗಳು ಕಡಿಮೆ ಆಗುತ್ತಿವೆ ಕೂಡ.

ಮಾಸ್ತರ್‌ಗಳು ಕೇಳಿದ ಪ್ರಶ್ನೆಗೆ ಕೆಳಸಮುದಾಯದ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಉತ್ತರ ನೀಡುತ್ತಿದ್ದರಿಂದ ಸವರ್ಣೀಯ ವಿದ್ಯಾರ್ಥಿಗಳಿಗೆ ಮತ್ಸರವೇರ್ಪಡುವ ಪ್ರಸಂಗ 'ವಾಲ್ಮಿಕಿ'ಯಲ್ಲಿ ಬರುತ್ತದೆ, ಒಬ್ಬ ಹುಡುಗ "ಗುರೂಜಿ ನನ್ನ ಕಂಪಾಸ್ ಯಾರೋ ಕದ್ದಿದ್ದಾರೆ ಎಂದು ಮಾಸ್ತರ್‌ಗೆ ಹೇಳಿದ, ಮಾಸ್ತರ್‌ರು ಇವನ ಕಂಪಾಸ್ ಯಾರಾದರೂ ತೆಗೆದುಕೊಂಡಿದ್ದರೆ ವಾಪಸ್ ಕೊಡ್ರಿ ಎಂದು ಒದರಿ ಹೇಳಿದರು. ಎಲ್ಲರೂ ಸುಮ್ಮನೇ ಕೂತಿದ್ದರು. ಮಾಸ್ತರ್‌ರು ಕೈಗೆ ಛಡಿ ತೆಗೆದುಕೊಂಡು ಹಿಂದೆ ಹೇಳಿದ್ದನ್ನು ಮತ್ತೆ ಮತ್ತೆ ಹೇಳಿದರು. ನಂತರ ಪ್ರತಿಯೊಬ್ಬರ ಪಾಟಿಚೀಲ ತಪಾಸಿಸಲು ಎರಡು ವಿದ್ಯಾರ್ಥಿಗಳಿಗೆ ಆದೇಶಿಸಿದರು. ಆ ಇಬ್ಬರು ವಿದ್ಯಾರ್ಥಿಗಳು ಬೇರೆಯವರ ಪಾಟಿಚೀಲ ತಪಾಸಿಸಿದಂತೆಯೇ ನನ್ನ ಪಾಟಿಚೀಲಕ್ಕೂ ಕೈ ಹಾಕಿದರು. ಪಾಟಿಚೀಲ ತಿರುವು ಮುರುವು ಮಾಡಿದಾಗ ಒಳಗಿದ್ದ ಕಂಪಾಸ್ ಹೊರಗೆ ಬಿತ್ತು. ಕಂಪಾಸ್ ಕಳೆದುಕೊಂಡಿದ್ದ ವಿದ್ಯಾರ್ಥಿ ಇದೇ ನನ್ನ ಕಂಪಾಸ್ ಎಂದು ಕೂಗಿದ. ಮಾಸ್ತರ್‌ರಿಗೆ ತುಂಬ ಸಿಟ್ಟು ಬಂತು. ಕೈಯಲ್ಲಿದ್ದ ಛಡಿಯಿಂದ ನನಗೆ ಮೈತುಂಬಾ ಹೊಡೆದರು. ಕಳ್ಳ ನನ್ನ ಮಗನೇ ಬೇಡರ ಜಾತಿಯವನೇ ಹರಾಂ ಖೋರನೇ ಹೀಗೆ ವಿಧ ವಿಧ ರೀತಿಯಲ್ಲಿ ಬೈಯುತ್ತ ಚರ್ಮ ಸುಲಿದರು. ನನ್ನನ್ನು ಕ್ಲಾಸಿನಿಂದ ಹೊರಹಾಕಲಾಯಿತು. ಕಾಲಕಳೆಯುತ್ತ ಮನೆಗೆ ಬಂದೆ, ರಾತ್ರಿ ಊಟ ಮಾಡದೆ ಹಾಗೆಯೇ ಮಲಗಿಕೊಂಡೆ ನಿದ್ದೆಯಲ್ಲಿ ನನ್ನನ್ನು ಹೊಡೆಯಬೇಡ್ರಿ ಹೊಡೆಯಬೇಡ್ರಿ ನಾನು ಕಂಪಾಸ್ ಕದ್ದಿಲ್ಲ ಎಂದು ಬಡಬಡಿಸಹತ್ತಿದೆ."[೬] ಈ ಪ್ರಕರಣವು ಜಾತಿ ಕಾರಣದಿಂದ ಗಸ್ತಿಯವರು ಅಪಮಾನಗೊಳ್ಳಬೇಕಾಗಿದ್ದನ್ನು ಸೂಚಿಸುತ್ತಿದೆ. ಅಲ್ಲದೆ ವಿದ್ಯಾರ್ಥಿಗಳ ಮಧ್ಯೆ ಇದ್ದ ಮತ್ಸರ ಭಾವ, ಸ್ಪರ್ಧಾಮನೋಭಾವಗಳು ಏನೆಲ್ಲಾ ಉಪಾಯಗಳನ್ನು ಮಾಡಿ ಕೇಳ ಜಾತಿಯ ಬುದ್ಧಿವಂತ ವಿದ್ಯಾರ್ಥಿಗಳನ್ನು ಅಪಮಾನಗೊಳಿಸುತ್ತಿದ್ದರು. ಎಂಬುದನ್ನು ಸಹ ಸೂಚಿಸುತ್ತಿದೆ.

ಸಮಾಜದ ಯಾವುದೇ ಕ್ಷೇತ್ರವನ್ನು ತೆಗೆದುಕೊಂಡರೂ ಅಲ್ಲಿ ಸ್ಪರ್ಧೆಯೆಂಬುದು ಇದ್ದೇ ಇರುತ್ತದೆ. ಶಿಕ್ಷಣ ಕ್ಷೇತ್ರದಲ್ಲಿ ಅದು ಕೊಂಚ ಹೆಚ್ಚಾಗಿಯೇ ಇದೆ. ಕೆಳಜಾತಿಯ ಸಮುದಾಯದಿಂದ ಬಂದ ಹುಡುಗ-ಹುಡುಗಿಯರು ಮಾಸ್ತರರ ಪ್ರಶ್ನೆಗೆ ಉತ್ತರ ಕೊಟ್ಟರೆ ಅದು ಅವರ ಬುದ್ಧಿವಂತಿಕೆಯ ಹೆಚ್ಚುಗಾರಿಕೆಯನ್ನು ಸೂಚಿಸುತ್ತದೆ. ಆದರೆ ಈ ಬುದ್ಧಿವಂತಿಕೆಯ ಹೆಚ್ಚುಗಾರಿಕೆಯನ್ನು ಆರ್ಥಿಕ, ಸಮಾಜಿಕ ಒಸ್ನೆಲೆಯ ಶಕ್ತಿಗಳು ತುಳಿಯುತ್ತವೆ. ಉದಾಹರಣೆಗೆ ಮಹಾಭಾರತದ ಏಕಲವ್ಯನು ಬಿಲ್ಲುವಿದ್ಯೆ ಕಲಿತಾಗ.

"ಮಾಸ್ತರ್‌ರು ಕಲಿಸುವುದರಲ್ಲಿ ದಂಗಾಗಿದ್ದರು. ನಾನು ಆಸಕ್ತಿಯಿಂದ ಅವರು ಹೇಳುತ್ತಿರುವುದನ್ನು ಕೇಳುತ್ತಿದ್ದೆ. ಅಷ್ಟರಲ್ಲಿ ನಮ್ಮ ಕ್ಲಾಸಿಗೆ ದೇಸಾಯಿ ಗುರುಗಳು ಬಂದರು. ಅವರಿಗೆ ಗೌರವ ನೀಡಲು ನಾವುಗಳೆಲ್ಲ ಎದ್ದು ನಿಂತೆವು. ದೇಸಾಯಿ ಗುರುಗಳಿಗೆ ನಾನು ಪರಿಚಿತನಿದ್ದೆ. ಅವರು ನನ್ನನ್ನೇ ತೀಕ್ಷ್ಣವಾಗಿ ನೋಡುತ್ತ ಏನೋ ಗಸ್ತಾ, ಕೆರೆಯ ಹತ್ತಿರ ಏನು ಮಾಡಿ ಬಂದಿಯೆಂಬುದನ್ನು ಹೇಳು ಎಂದು ಗುಡುಗಿದರು. ನನ್ನ ಮುಖ ನೋಡಿ ದೇಸಾಯಿ ಗುರುಗಳು ಮತ್ತೆ ಹರಾಂಖೋರ್! ನಾನು ನಿನ್ನನ್ನು ಒಳ್ಳೆಯವನೆಂದು ಭಾವಿಸಿದ್ದೆ, ಹೊಲಸಿನ ಕ್ರಿಮಿಯೆಂದೇ ತೋರಿಸಿಕೊಟ್ಟೆ, ದಾರಿಯಲ್ಲಿದ್ದ ಕೆರೆಯ ಹತ್ತಿರ ಮಲ ಮಾಡಿ ಬಂದಿರುವೆಯಾ? ಎಂದು ಗರ್ಜಿಸಿದರು. ನಾನು ಬೇಡರವನಿರುವುದರಿಂದ ಯಾರೇ ಅಪರಾಧ ಮಾಡಿದರೂ ಅದು ನನ್ನ ಮೇಲೆ ಬರುತ್ತಿತ್ತು. ಅಳುತ್ತ, ಅಳುತ್ತ ನಾನು ಕೆರೆಯ ಕಡೆಗೆ ಹೋದೆ. ನನ್ನ ಹಿಂದೆ ದೇಸಾಯಿ ಗುರುಗಳು ಮತ್ತು ನಾಲ್ಕಾರು ವಿದ್ಯಾರ್ಥಿಗಳು ಇದ್ದರು. ಕೆರೆಯ ಸುತ್ತಾ ಐದಾರು ಕಡೆಗಳಲ್ಲಿ ಮಲವನ್ನು ವಿಸರ್ಜಿಸಲಾಗಿತ್ತು. ಈ ಮಲವನ್ನು ನಾನು ಹೇಗೆ ಸ್ವಚ್ಛ ಮಾಡಬೇಕು? ದೇಸಾಯಿ ಗುರುಗಳು ಯಮನಂತೆ ನನ್ನ ಬೆನ್ನ ಹಿಂದೆ ಇದ್ದರು. ಮನಸ್ಸನ್ನು ಗಟ್ಟಿ ಮಾಡಿಕೊಂಡು ನಾನು ಕೈಯಿಂದಲೇ ಮಲವನ್ನು ಆಕಡೆಗಿರುವ ತಿಪ್ಪೆಗೆ ಒಗೆದು ಬಂದೆ. ಅಸಹ್ಯವಾದ ವಾಸನೆಯಿಂದ ನನ್ನ ಹೊಟ್ಟೆ ತೊಳಸಿದಂತಾಯಿತು. ಕೈ ತೊಳೆಯಲು ಅಲ್ಲಿ ನೀರು ಇರಲಿಲ್ಲ, ಮಣ್ಣಿಗೆ ಕೈ ಒರೆಸಿಕೊಂಡೆ. ಆದರೆ ವಾಸನೆ ಇನ್ನೂ ಕಡಿಮೆ ಆಗಿರಲಿಲ್ಲ. ಶಾಲೆಯ ವಿದ್ಯಾರ್ಥಿಗಳು ನನಗೆ 'ಯಲ್ಯಾ' ಎಂದು ಕಾಡಿಸುತ್ತಿದ್ದರು. ಈಗ ಹೇಲು ಯಲ್ಯಾ ಎಂದು ಕಾಡಿಸಲಾರಂಭಿಸಿದರು. ಗೌಂಡವಾಡದ ಇಬ್ಬರು ಹುಡುಗರು ಕೆರೆಯ ಹತ್ತಿರ ಮಲವನ್ನು ವಿಸರ್ಜಿಸಿ ಬಂದಿದ್ದರು. ಅದು ಹದಿನೈದು ದಿನಗಳ ನಂತರ ತಿಳಿಯಿತು. ಗುರುಗಳಿಗೆ ವಿಷಯ ತಿಳಿದರೂ ಆ ಬಗ್ಗೆ ವಿಷಾದ ವ್ಯಕ್ತಪಡಿಸಲಿಲ್ಲ."[೮] ಈ ಪ್ರಕರಣವನ್ನು ಓದಿದಾಗ ಸಮಾಜದ ಕೆಳಸಮುದಾಯವನ್ನು ಅಪಮಾನಗೊಳಿಸಿ ನೋಡುವ ಮತ್ತೆ ದುಡಿಸಿಕೊಳ್ಳುತ್ತಿರುವ ಸವರ್ಣೀಯ ಸಮಾಜದ ದೃಷ್ಟಿಕೋನಗಳೆರಡು ತಿಳಿಯುತ್ತದೆ.

ಇಲ್ಲಿ ದೇಸಾಯಿ ಗುರುಗಳ ದೃಷ್ಟಿ ಪೂರ್ವಾಗ್ರಹ ಪೀಡಿತವಾಗಿರುವುದು. ಕೆಳಸಮುದಾಯದಿಂದ ಬಂದ ಜನ ಯಾವಾಗಲೂ ಸುಳ್ಳರು, ಕಳ್ಳರು, ಸ್ವಚ್ಛತೆ ಇಲ್ಲದವರು ಎಂಬ ಭಾವನೆ ಅವರ ಮನಸ್ಸಿನಲ್ಲಿ ಬೇರೂರಿರುವುದು. ಆದರೆ ಪಾಶ್ಚಾತ್ಯರು ಭಾರತಕ್ಕೆ ಬಂದ ಮೇಲೆ ಸಮಾಜದಲ್ಲಿ ಅನೇಕ ಬದಲಾವಣೆಗಳಾದವು. ಆ ಬದಲಾವಣೆಯ ಪರಿಣಾಮಗಳು ಸಮಾಜದ ಕೆಳವರ್ಗದ ಜನರಿಗೆ ಶಿಕ್ಷಣದ ಮೂಲಕ ಪೂರಕವಾಗಿ ಪರಿಣಮಿಸಿದವು. ಆದರೂ ಬೇಡರಂತಹ ಸಮುದಾಯಗಳ ಪಾಲಿಗೆ ಇವು ಮಾರಕವಾಗಿ ಪರಿಣಮಿಸಿದವು. ಜನರನ್ನು ಕಳ್ಳರು, ದರೋಡೆ ಖೋರರು, ಕೊಲೆಗಾರರು, ಸುಲಿಗೆಖೋರರು ಎಂದು ಕರೆಯಲು ಪ್ರೇರೇಪಿಸಿದವು. ಇದರಿಂದ ಬ್ರಿಟಿಷ್ ಪ್ರಭುತ್ವ ಸಮಾಜದ ಕೆಲವು ಕೆಳಸಮುದಾಯಗಳನ್ನು 'ಕ್ರಿಮಿನಲ್ ಟ್ರೈಬ್' ಎಂದು ಘೋಷಿಸಿತು. ಆಗ ಈ ಜನರು ತಮ್ಮ ಕುಲಕಸುಬುಗಳಿಂದ ವಂಚಿತರಾಗಿ

ಆರ್ಥಿಕವಾಗಿ ಹಿಂದುಳಿದು, ತುತ್ತಿನ ಚೀಲ ತುಂಬಿಸಿಕೊಳ್ಳಲು ದರೋಡೆ, ಸುಲಿಗೆಗಳನ್ನು ಮಾಡುವಂತಹ ಪರಿಸ್ಥಿತಿ ಅಂದಿನ ಕಾಲದಲ್ಲಿ ನಿರ್ಮಾಣವಾಗಿದ್ದಿತು. ಹೀಗಾಗಿ ಭೀಮರಾವ್ ಗಸ್ತಿಯಂತವರು ಈ ರೀತಿಯ ಅಪಮಾನವನ್ನು ಎದುರಿಸಬೇಕಾಯಿತು. ನಂತರ ಅದು ಹುಸಿ ಎಂದು ತಿಳಿದಾಗಲೂ ವಿಷಾದ ವ್ಯಕ್ತಪಡಿಸದಿರುವುದು ವ್ಯವಸ್ಥೆಯ ಕ್ರೂರ ಮುಖವನ್ನು ಅನಾವರಣಗೊಳಿಸುತ್ತದೆ. ಅಪಮಾನಗಳು ಸಹಜ; ಅವುಗಳನ್ನು ಯಶಸ್ಸಿನ ಮೆಟ್ಟಿಲುಗಳಾಗಿ ಮಾಡಿಕೊಂಡು ಇಂದು ಕೆಳಸಮುದಾಯದ ಜನ ಹೆಚ್ಚು ಹೆಚ್ಚಾಗಿ ಆಧುನಿಕ ಶಿಕ್ಷಣ ಪಡೆದು ವಿಚಾರವಂತರಾಗುತ್ತಿರುವುದು ಬದಲಾವಣೆಯ ಸಂಕೇತವಾಗಿದೆ.ಗಸ್ತಿಯವರ ಜೀವನವೇ ಇದಕ್ಕೆ ನಿದರ್ಶನ.

ಒಟ್ಟಾರೆಯಾಗಿ ಹೇಳುವುದಾದರೆ, ಸ್ವಾತಂತ್ರ್ಯಪೂರ್ವ ಭಾರತದ ಸ್ಥಿತಿಗಳು ಸ್ವಾತಂತ್ರ್ಯ ನಂತರವೂ ಮುಂದುವರೆದು ಸಮಾಜದ ತಳಸಮುದಾಯಗಳನ್ನು ಅಪಮಾನ ಹಿಂಸೆಗೆ ಒಳಪಡಿಸಿದವು. ಆದರೂ ಅವು ಶಾಶ್ವತ ಅಪಮಾನಗಳಾಗಲಿಲ್ಲ. ಆಧುನಿಕ ಶಿಕ್ಷಣದಿಂದ ತಳಸಮುದಾಯದ ಜನರು ಹೆಚ್ಚು ಶಿಕ್ಷಿತರಾಗಿ ಸಂವಿಧಾನಬದ್ಧ ಸೌಲಭ್ಯಗಳನ್ನು ಪಡೆಯುತ್ತಿದ್ದಾರೆ. ಸಮಾಜದ ತಳಸಮುದಾಯಗಳಿಗೆ ಅಪಮಾನಗಳು ಸಹಜ. ಆದರೆ ಅವುಗಳನ್ನು ಮೆಟ್ಟಿನಿಲ್ಲುವ ಚೈತನ್ಯ ಕೆಳಸಮುದಾಯಗಳಿಗೆ ಬರುವುದು ಆಧುನಿಕ ಶಿಕ್ಷಣದಿಂದಾಗಿ. ಆದ್ದರಿಂದ ಆಳುವ ಪ್ರಭುತ್ವ ಯಾವಾಗಲೂ ತನಗೆ ಸಹಾಯಕವಾಗುವ ರೀತಿಯಲ್ಲಿಯೇ ಶಿಕ್ಷಣದ ರೀತಿ ನೀತಿಗಳನ್ನು ಅನುಸರಿಸಿಕೊಂಡು ಬರುತ್ತಿದೆ. ಹಾಗಾಗಿ ಇಂದು ಆಳುವ ಪ್ರಭುತ್ವದ ಜೊತೆ ಜೊತೆಗೆ ಕಾರ್ಪೋರೇಟ್ ಜಗತ್ತು ಕಾಣದ ರೀತಿಯಲ್ಲಿ ತಳಸಮುದಾಯಗಳನ್ನು ಒಂದಿಲ್ಲೊಂದು ರೀತಿಯಲ್ಲಿ ಅಪಮಾನ ಹಿಂಸೆಗೊಳಪಡಿಸುತ್ತಿದೆ. ಇದು ಸಹ ಶಾಶ್ವತವಾದುದಲ್ಲ. ಬದಲಾವಣೆ ಸಮಾಜದ ಪ್ರಕೃತಿಯ ನಿಯಮವು ಹೌದು. ಎಲ್ಲಿ ಅಪಮಾನಗಳಿರುತ್ತವೆಯೋ ಅಲ್ಲಿ ಹೋರಾಟದ ಮನೋಭಾವಗಳಿಗೆ ನಾಂದಿಯಾಗುತ್ತದೆ. ಚಳುವಳಿ ಕ್ರಾಂತಿಗಳು ಆರಂಭವಾಗಿ ಸಮಾಜ ಬದಲಾವಣೆಗೊಳ್ಳುತ್ತದೆ. ಗಸ್ತಿಯವರ ಆತ್ಮಕತೆಯು ಅಪಮಾನವೇ ಯಶಸ್ಸಿನ ಮೆಟ್ಟಿಲಾದುದರ ರೂಪಕವಾಗಿದೆ.

೩.೨. ಆಧುನಿಕ ಶಿಕ್ಷಣ: ಹೋರಾಟದ ಭಾವ :

ಶಿಕ್ಷಣ ಪಡೆಯುವುದರಿಂದ ಮಾನವರು ಸಂಸ್ಕಾರವಂತರಾಗುತ್ತಾರೆ. ಸುಶಿಕ್ಷಿತರು, ಬುದ್ಧಿವಂತರು, ಯೋಚಿಸುವವರು, ವಿಚಾರವಂತರು ಆಗುತ್ತಾರೆಂದು ಹೇಳಬಹುದಾಗಿದೆ. ಆದರೆ ಭಾರತದ ಪ್ರಾಚೀನ ಶಿಕ್ಷಣಪದ್ಧತಿಯನ್ನು ಅವಲೋಕಿಸಿದಾಗ ಶಿಕ್ಷಣವು ತಾರತಮ್ಯತೆಯಿಂದ ಕೂಡಿರುವುದು, ಕೆಲವೇ ಸೀಮಿತ ಜಾತಿ ಮತ್ತು ವರ್ಗಗಳು ಮಾತ್ರ ಶಿಕ್ಷಣ ಪಡೆದು ರಾಜನ ಆಸ್ಥಾನದಲ್ಲಿ ಗೌರವಯುತ ಸ್ಥಾನ ಪಡೆದು ಸಮಾಜದಲ್ಲಿ ಉನ್ನತ ಸ್ಥಿತಿಯಲ್ಲಿ ಬದುಕುತ್ತಿರುವುದು ಕಂಡುಬರುತ್ತದೆ. ಆದರೆ ಇನ್ನುಳಿದ ವರ್ಗಗಳು ಹಾಗೂ ಕೆಳ ಜಾತಿಗಳು ಶಿಕ್ಷಣ ಪಡೆಯುವಂತೆಯೂ ಇರಲಿಲ್ಲ. ಶೂದ್ರ ಅಕ್ಷರ ಕಲಿತರೆ ಮಹಾಪಾಪವೆಂಬಂತೆ ಮನುಸ್ಮೃತಿಯಲ್ಲಿ ಬಿಂಬಿಸಲಾಗಿತ್ತು. ಮೇಲ್ವರ್ಗದ ಜನರ ಜೀವನೋಪಾಯಕ್ಕೆ ಸಹಾಯಕವಾಗುವ

ವಸ್ತುಗಳ ತಯಾರಿ, ಅವರು ತಿನ್ನುವ ಆಹಾರ ಬೆಳೆದು ಕೊಡುವುದು ಮುಂತ್ತಾದ ವೃತ್ತಿಯಲ್ಲಿ ತೊಡಗಿ ಅವರು ಜೀವನ ಸಾಗಿಸುವ ಪರಿಸ್ಥಿತಿ ಇತ್ತು. ಅದು ಹಾಗೆಯೇ ಬೆಳೆದುಬಂದಿತು. ಇಂಥದರಲ್ಲಿ ಯಾರಾದರೂ ಒಬಬ್ಬರು ಏಕಲವ್ಯನಂತಹ ವ್ಯಕ್ತಿಗಳು ವಿದ್ಯೆ ಕಲಿತು ಪ್ರದರ್ಶಿಸಿದಾಗ ದ್ರೋಣಾಚಾರ್ಯರ ವ್ಯವಸ್ಥೆಯೊಳಗೆ ಅವರನ್ನು ಹಾಕಿ ನಾಶ ಮಾಡಲಾಗುತ್ತಿತ್ತು.

ಕ್ರಿ.ಶ. ಸುಮಾರು ೧೮ನೇ ಶತಮಾನದ ನಂತರ ಭಾರತಕ್ಕೆ ಪಾಶ್ಚಿಮಾತ್ಯರು ವ್ಯಾಪಾರಕ್ಕಾಗಿ ಆಗಮಿಸಿದರು. ಇವರು ವ್ಯಾಪಾರದ ಜೊತೆ ಜೊತೆಗೆ ಧರ್ಮ ಪ್ರಚಾರಕ್ಕೆ ಅನುಕೂಲವಾಗಲೆಂದು ಸ್ಥಳೀಯ ಜನರಿಗೆ ತಮ್ಮ ಭಾಷೆಯಲ್ಲಿ ಶಿಕ್ಷಣವನ್ನು ಕೊಡುತ್ತಿದ್ದರು.. ಅದುವೇ ಇಂಗ್ಲಿಷ್ ಶಿಕ್ಷಣ. ಈ ಶಿಕ್ಷಣವನ್ನು ಹೆಣ್ಣು-ಗಂಡು ಎಂಬ ಭೇದ-ಭಾವವಿಲ್ಲದೆ ಸಮಾಜದ ತಳಸಮುದಾಯಗಳು ಪಡೆಯಲು ಮುಂದಾದವು. ಕೊನೆಗೆ ಭಾರತವನ್ನು ಇಂಗ್ಲಿಷರ ದಾಸ್ಯದಿಂದ ಮುಕ್ತಿಗೊಳಿಸಲು ಈ ಇಂಗ್ಲಿಷ್ ಶಿಕ್ಷಣವೇ ಕಾರಣವಾಯಿತು. ಭಾರತ ಸ್ವಾತಂತ್ರ್ಯ ಪಡೆಯಿತು. ಕರ್ನಾಟಕದಂತಹ ಸುಮಾರು ರಾಜ್ಯಗಳು ಭಾರತದ ಒಕ್ಕೂಟದಲ್ಲಿ ಸೇರಿ ಏಕರೂಪತೆಯ ಆಡಳಿತಕ್ಕೆ ಒಳಪಟ್ಟವು. ಶಿಕ್ಷಣ, ಆರೋಗ್ಯ, ಆಹಾರ ಮುಂತಾದ ಸಮಸ್ಯೆಗಳು ಉಂಟಾದರೂ ಪ್ರಭುತ್ವ ಆಧುನಿಕ ಶಿಕ್ಷಣವನ್ನು ಸಾರ್ವಜನಿಕರಿಗೆ ಕಡ್ಡಾಯಗೊಳಿಸಿ ಮುಂದುವರೆಸಿತು.

ಆಧುನಿಕ ಶಿಕ್ಷಣಪದ್ಧತಿಯಲ್ಲಿ ಅರ್ಥಶಾಸ್ತ್ರ, ಇತಿಹಾಸ, ಭೂಗೋಳ, ವಿಜ್ಞಾನ ಮುಂತಾದ ವಿಷಯಗಳನ್ನು ಬೋಧಿಸಲಾಗುತ್ತಿತ್ತು. ತಳಸಮುದಾಯದ ಅಲ್ಲೊಬ್ಬ ಇಲ್ಲೊಬ್ಬ ಈ ಶಿಕ್ಷಣ ಪಡೆದರು. ಶಿಕ್ಷಣ ಪಡೆದಂತೆಲ್ಲಾ ಆಧುನಿಕತೆಗೆ ತಮ್ಮನ್ನು ತೆರೆದುಕೊಳ್ಳುತ್ತಾ ಶೋಷಿಸುವವರ ವಿರುದ್ಧದ ಧ್ವನಿಯಾದರು. ಅಂತಹ ಕೆಳಸಮುದಾಯಗಳಲ್ಲಿ ವಾಲ್ಮೀಕಿ ಸಮುದಾಯವೂ ಒಂದು. ಈ ಸಮುದಾಯದಲ್ಲಿ ಹುಟ್ಟಿದವರಲ್ಲಿ ಡಾ.ಭೀಮರಾವ್ ಗಸ್ತಿಯವರೂ ಒಬ್ಬರು.

ಆಧುನಿಕ ಶಿಕ್ಷಣ ಪಡೆದ ನಂತರ ಸಿಕ್ಕ ಉದ್ಯೋಗದಿಂದ ಗಸ್ತಿಯವರು ನೆಮ್ಮದಿಯ ಜೀವನ ನಡೆಸಬಹುದಾಗಿತ್ತು. ಹಾಗೆ ಮಾಡಿದ್ದರೆ, ಎಲ್ಲಾ ತಳಸಮುದಾಯದ ಮಧ್ಯಮವರ್ಗದ ವ್ಯಕ್ತಿಯಂತೆ ಇವರೊಬ್ಬರಾಗಿರುತ್ತಿದ್ದರು. ಆದರೆ ಸಮಾಜದ ತಳಸಮುದಾಯದ ವ್ಯಕ್ತಿಯೊಬ್ಬ ಆಧುನಿಕ ಶಿಕ್ಷಣ ಪಡೆದಂತೆಲ್ಲಾ ಎಚ್ಚರದ ಪ್ರಜ್ಞೆಪಡೆದು ತನ್ನ ಸಮುದಾಯದ ಜನರಿಗಾಗುತ್ತಿರುವ ಶೋಷಣೆ, ಅಪಮಾನಗಳಿಂದ ವೇದನೆಪಟ್ಟುಕೊಳ್ಳುತ್ತಾನೆ. ಆ ವೇದನೆಯೇ ಹೋರಾಟಕ್ಕೆ ಎಡೆಮಾಡಿಕೊಡುವುದು.

ವೇದನೆ ಆತ ಶಿಕ್ಷಣ ಪಡೆದದ್ದರಿಂದ ಬಂದದ್ದಾಗಿದೆ. ಆದರೆ ಶಿಕ್ಷಣಪಡೆದವರೆಲ್ಲ ಹೋರಾಟಗಾರರಾಗಿಲ್ಲ. ಅವರಲ್ಲಿ ಕೆಲವರು ಮಾತ್ರ ತಮ್ಮ ಸಾಮುದಾಯಿಕ ಹೊಣೆಗಾರಿಕೆಯನ್ನು ಅರಿತು ಸಮಾಜವನ್ನು ವಿಮರ್ಶಿಸಿಕೊಂಡು ಪಡೆದ ಶಿಕ್ಷಣದಿಂದ ತನ್ನ ಸಮುದಾಯಕ್ಕೂ ಸಮಾಜದ ಇತರ ಸಮುದಾಯಗಳಿಗೂ ಸಹಾಯಕವಾಗುವಂತೆ ವರ್ತಿಸುತ್ತಾರೆ. ಇಂತಹ ಹೊಣೆಗಾರಿಕೆಯನ್ನು ಗಸ್ತಿಯವರು ತೋರುತ್ತಾರೆ.

ಗಸ್ತಿಯವರಿಗೆ ಹೋರಾಟದ ಮನೋಭಾವ ಚಿಕ್ಕಂದಿನಿಂದಲೇ ಬೆಳೆಯಿತು. ಅದು ಶಿಕ್ಷಣ ಪಡೆದಂತೆಲ್ಲಾ ಹೊಸ ಹೊಸ ರೂಪ ಪಡೆದು ಬಲಿಷ್ಠಗೊಂಡು ಅವರ ವಾಲ್ಮೀಕಿ ಸಮುದಾಯವನ್ನು ಸುಧಾರಿಸುವ ಪ್ರಜ್ಞೆಯ ಪ್ರತಿನಿಧಿಯಾದರು. ಬೇಡರ ಸಮುದಾಯದ ಮೇಲಾಗುತ್ತಿದ್ದ ದೌರ್ಜನ್ಯ ಶೋಷಣೆಗಳನ್ನು ಗಸ್ತಿಯವರು ಬಾಲ್ಯದಿಂದಲೂ ಕಂಡವರಾಗಿದ್ದರು. ಅವರಿಗೆ ಹೋರಾಟದ ಮನೋಭಾವ ಮೂಡಿದ್ದು ಹೈಸ್ಕೂಲಿನಲ್ಲಿ ಓದುತ್ತಿದ್ದಾಗ, ಅಣ್ಣ ಲಗುಮಣ್ಣನ ಸಾವು ಸಂಭವಿದಾಗ, ಹಾಸ್ಟೆಲಿನ ವಸತಿ ನಿಲಯದಿಂದ ಊರಿಗೆ ಬಂದು ಲಗುಮಣ್ಣನ ಸಾವಿನ ಕ್ರಿಯಾವಿಧಿಗಳನ್ನು ಮುಗಿಸಿ ಮತ್ತೆ ಹಾಸ್ಟೆಲಿಗೆ ಹಿಂದಿರುಗಿ ಹೋಗಿ ವಸತಿ ನಿಲಯದ ರೂಮಿನಲ್ಲಿ ಕೂಳಿತು ಲಗುಮಣ್ಣನ ಒಡನಾಟವನ್ನೆಲ್ಲ ಜ್ಞಾಪಿಸಿಕೊಂಡಾಗ ಗಸ್ತಿಯವರಿಗೆ ಹಿಗನಿಸುತ್ತದೆ.

"ಆಗಿನ ಲಗಮಣ್ಣನ ಮುಖ ನನ್ನ ಕಣ್ಣೆದರು ಮತ್ತೆ ಬಂತು. ನಾನು ಮನಸ್ಸಿನಲ್ಲಿಯೇ ಲಗಮಣ್ಣನನ್ನುದ್ದೇಶಿ 'ಅಣ್ಣಾ ನಾನು ದೊಡ್ಡವನಾದ ನಂತರ ಬೇಡರ ಮೇಲೆ ನಡೆಯುವ ಪೋಲೀಸ್ ಅತ್ಯಾಚಾರಗಳ ವಿರುದ್ಧ ಹೋರಾಡುತ್ತೇನೆ. ಈಗಿನಂತೆ ಆಗ ನಾನು ಸುಮ್ಮನೆ ಕೂಡುವುದಿಲ್ಲ. ಅನ್ಯಾಯದ ವಿರುದ್ಧ ಧ್ವನಿ ಎತ್ತುತ್ತೇನೆ. ಎಂತಹ ಪ್ರಸಂಗ ಬಂದರೂ ಬಗ್ಗುವುದಿಲ್ಲ ಮತ್ತು ಹಿಂದೆ ಸರಿಯುವುದಿಲ್ಲವೆಂದು ಹೇಳಿದೆ. ಈ ಮಾತು ಮುಗಿದಾಗ ಯಾರೋ ಸಮಾಧಾನ ನಿಟ್ಟುಸಿರು ಬಿಟ್ಟಂತೆ ಭಾಸವಾಯಿತು. ಸ್ಪಷ್ಟವಾಗಿ ನಿಟ್ಟುಸಿರಿನ ಧ್ವನಿ ಕೇಳಿಸಿತ್ತು. ಅಕ್ಕಪಕ್ಕ ಯಾರಾದರೂ ಇದ್ದಾರಯೇ ಎಂದು ನೋಡಿದೆ. ಯಾರೂ ಇರಲಿಲ್ಲ. ಹೊರಗೆ ಬಂದು ನೋಡಿದೆ. ಅಲ್ಲೂ ಯಾರೂ ಕಾಣಿಸಲಿಲ್ಲ. ಕೋಣೆಗೆ ಬಂದಾಗ ನನ್ನಲ್ಲಿ ಏನೋ ಬದಲಾವಣೆಯಾಗುತ್ತಿರುವಂತೆ ಅನ್ನಿಸಿತು. ಒಂದು ಅನಾಮಿಕ ಶಕ್ತಿ ದೇಹವನ್ನು ಪ್ರವೇಶಿಸಿದ ಅನುಭವವಾಯಿತು."[೯]

ಈ ಪ್ರಸಂಗವನ್ನು ಓದಿದಾಗ ಗಸ್ತಿ ಅವರಲ್ಲಿ ಆಗಲೇ ಮನಸ್ಸಿನ ಮೂಲೆಯಲ್ಲಿ ವ್ಯವಸ್ಥೆಯ ವಿರುದ್ಧದ ಧ್ವನಿ ಮೊಳಕೆಯೊಡೆದಿತ್ತು. ಅದು ಲಗಮಣ್ಣನ ಸಾವಿನೊಂದಿಗೆ ಹೋರಾಟದ ಭಾವ ಬೆಳೆಯಹತ್ತಿತು. ಶಿಕ್ಷಣ ಪಡೆಯುತ್ತಿರುವಾಗಲೇ ಹೋರಾಟದ ಭಾವ ಚಿಗುರೊಡೆದು ಬೆಳೆಯುತ್ತಿತ್ತು. ಎಂದು ಸ್ಪಷ್ಟವಾಗುತ್ತದೆ. ಆದರೆ ಆಧುನಿಕ ಶಿಕ್ಷಣ ಪಡೆದ ಎಲ್ಲರಲ್ಲೂ ಈ ಬಗೆಯ ಸಮುದಾಯಿಕ ಹೊಣೆಗಾರಿಕೆ ಬೆಳೆಯಲಾರದು.

ಅಕ್ಷರಸ್ಥರಿಗೆ, ವಿಶಿಷ್ಟ ಸನ್ನಿವೇಶಗಳು ಬಂದಾಗ, ವಿಶಿಷ್ಟ ಘಟನೆಗಳು ಇವರ ಅನುಭವಕ್ಕೆ ಬಂದಾಗ ಮನಸ್ಸಿನಲ್ಲಿ ಮಿಂಚಿನ ಪ್ರತಿಭಟನೆಯ ಧ್ವನಿ ಮೊಳಗುತ್ತದೆ. ಈ ಹೋರಾಟದ ಭಾವ ಮುಂದೆ ಅವರನ್ನು ಒಬ್ಬ ಸಾಮಾಜಿಕ ಕಾರ್ಯಕರ್ತ, ಹೋರಾಟಗಾರರನ್ನಾಗಿಸುತ್ತದೆ, ಈ ಹಿನ್ನೆಲೆಯಲ್ಲಿ ಆಘಾತಕರ ಸನ್ನಿವೇಶಗಳಿಂದ ಹೋರಾಟಗಾರರಾಗಿ ಅಂಬೇಡ್ಕರ್ ಅವರಂತೆ ಗಸ್ತಿಯವರು ರೂಪುಗೊಂಡರು.

ಹಳ್ಳಿಯ ಅನಕ್ಷರಸ್ಥರಿಗೆ ಈ ಹೋರಾಟದ ಭಾವ ಬರಲಾರದು ಎಂದೇನು ಇಲ್ಲ. ಅವರಲ್ಲೂ ಹೋರಾಟದ ಭಾವ ಇದ್ದೇ ಇರುತ್ತದೆ. ಅದು ಸಾಮಾಜಿಕವಾಗಿ ಆರ್ಥಿಕವಾಗಿ ಪ್ರಾಬಲ್ಯ ಹೊಂದಿದ

ವ್ಯಕ್ತಿ ಅಥವಾ ಸಮುದಾಯ ಮುಂತಾದವುಗಳ ವಿರುದ್ಧ ಮೂಡಬಹುದು. ಶಿವರಾಮ ಕಾರಂತರ ಕಾದಂಬರಿ 'ಚೋಮನದುಡಿ'ಯಲ್ಲಿ ಚೋಮ ಸಮಾಜದ ತಳಸಮುದಾಯದವನಾಗಿದ್ದು, ಅವನಿಗೆ ಗೇಣಿಧಾರನಾಗುವ ಆಸೆ ಇರುತ್ತದೆ. ಆತ ಅನಕ್ಷರಸ್ಥ ಮುಗ್ಧ. ಅವನು ವಸ್ತವಿಕವಾಗಿ ತನ್ನ ಆಸೆಯನ್ನು ಈಡೇರಿಸಿಕೊಳ್ಳಲು ಆಗದೆ ಹೋದಾಗ ಶೆರೆ ಕುಡಿದು 'ದುಡಿ'ಯನ್ನು ಜೋರಾಗಿ ಭಾರಿಸುತ್ತಾನೆ. ಇದು ಕೂಡ ಪ್ರತಿಭಟನೆಯ ಹೋರಾಟದ ಭಾವವಾಗಿ ಕಾದಂಬರಿಯಲ್ಲಿ ಮೂಡಿಬಂದಿದೆ. ಅಕ್ಷರಸ್ಥರಲ್ಲದವರ ಹೋರಾಟದ ಮನೋಭಾವಕ್ಕಿಂತ ಅಕ್ಷರಸ್ಥ ವ್ಯಕ್ತಿಯ ಪ್ರತಿಭಟನೆ ಹೆಚ್ಚು ಪರಿಣಾಮಕಾರಿ. ಆಧುನಿಕ ಶಿಕ್ಷಣ ಪಡೆದಂತೆಲ್ಲ ಮನುಷ್ಯರಿಗೆ ಏನು ಬೇಕಾದರೂ ಸಾಧಿಸುವ ಮನಸ್ಥಿತಿ ಮೂಡುವುದು ಸಹಜ. ಆದರೆ ಅದು ಸಮುದಾಯ ಬಿಡುಗಡೆಯ ಪ್ರಜ್ಞೆ ಮತ್ತು ಹೋರಾಟವಾಗದಿದ್ದರೆ ವ್ಯರ್ಥವಾಗುತ್ತದೆ. ಸ್ವಾತಂತ್ರ್ಯದ ನಂತರದಲ್ಲಿ ದಲಿತ ಸಮುದಾಯದಿಂದ ಬಂದ ಅನೇಕ ಜನರು ಶಿಕ್ಷಿತರಾಗಿ ಅನುಭವಿಸಿದ ಅಪಮಾನ, ಹಿಂಸೆಗಳನ್ನು ಬರಹರೂಪದಲ್ಲಿ ಅಭಿವ್ಯಕ್ತಿಗೊಳಿಸಿದರು.ಆದರೆ ತಮಗೆ ಆದ ಅಪಮಾನಗಳಿಗೆ ಪ್ರತಿಕಾರವಾಗಿ ಚಳುವಳಿ, ಹೋರಾಟಗಳನ್ನು ಅವರು ಮಾಡಿದ್ದು ಕಡಿಮೆ. ಆದರೆ ಗಸ್ತಿಯವರು ಇಡೀ ವಾಲ್ಮೀಕಿ ಸಮುದಾಯದ ಸಂಘಟನೆ ಮಾಡಿ ಶೋಷಿತರ ವಿರುದ್ಧ ಸಂಘರ್ಷಕ್ಕಿಳಿದು ಉಳಿದವರಿಗಿಂತ ಭಿನ್ನರಾಗಿ ನಿಂತಿದ್ದಾರೆ.

ಟಿಪ್ಪಣಿಗಳು

೧. ಡಾ.ವಿರೂಪಾಕ್ಷಿ ಪೂಜಾರಹಳ್ಳಿ, ಬೇಟೆ ಮತ್ತು ಬೇಡರು,		ಪು.೨೬೧,
೨. ಡಾ. ಭೀಮರಾವ್ ಗಸ್ತಿ, ವಾಲ್ಮೀಕಿ,		ಪು.೩
೩. ಅದೇ	,,	ಪು.೪
೪. ಅದೇ	,,	ಪು.೯
೫. ಅದೇ	,,	ಪು.೧೦
೬. ಅದೇ	,,	ಪು.೧೦,೧೧
೭. ಅದೇ	,,	ಪು.೧೧,೧೨
೮. ಅದೇ	,,	ಪು.೧೭,೧೮
೯. ಅದೇ	,,	ಪು.೩೨,೩೩

ಅಧ್ಯಾಯ – ನಾಲ್ಕು

ವಾಲ್ಮೀಕಿಯಲ್ಲಿ ಸಂಘರ್ಷದ ವಿಭಿನ್ನ ನೆಲೆಗಳು

ಅಧ್ಯಾಯ – ೪

ವಾಲ್ಮೀಕಿಯಲ್ಲಿ ಸಂಘರ್ಷದ ವಿಭಿನ್ನ ನೆಲೆಗಳು

ಪೀಠಿಕೆ : 'ವಾಲ್ಮೀಕಿ' ಆತ್ಮಕತೆಯು ಅನೇಕ ವೈಯಕ್ತಿಕ ಹಾಗೂ ಸಾಮಾಜಿಕ ಸಂಘರ್ಷಗಳಿಂದ ಕೂಡಿದ ಕೃತಿಯಾಗಿದೆ. ಈ ಸಂಘರ್ಷಗಳನ್ನು ಕೌಟುಂಬಿಕ, ಸಾಮುದಾಯಿಕ, ಸಾಮಾಜಿಕ ಹಾಗೂ ನಾಗರಿಕ ಎಂದು ಸ್ಥೂಲವಾಗಿ ವಿಂಗಡಿಸಿಕೊಂಡು ಚರ್ಚಿಸಲಾಗಿದೆ. ಮೊದಲನೆಯದು ವ್ಯಕ್ತಿಯು ತನ್ನ ಕುಟುಂಬದ ಒಳಗೇ ಮಾಡುವ ಸಂಘರ್ಷ; ಎರಡನೆಯದು ವ್ಯಕ್ತಿಯು ಸಮುದಾಯದ ಒಳಗಡೆಯೇ ಮಾಡುವ ಸಂಘರ್ಷ; ಮೂರನೆಯದು ವ್ಯಕ್ತಿ ಹೊರಗಿನ ಜಾತಿ ಮತ್ತು ಆಸ್ತಿಯ ಶಕ್ತಿಗಳ ಜತೆಗೆ ಮಾಡುವ ಸಂಘರ್ಷ; ನಾಲ್ಕನೆಯದು ವ್ಯಕ್ತಿಯು ಆಧುನಿಕ ನಾಗರಿಕ ಸಮಾಜದ ಜತೆ ನಡೆಸುವ ಸಂಘರ್ಷ ಕುರಿತು ಚರ್ಚಿಸಲಾಗಿದೆ.

೪.೧. ವಾಲ್ಮೀಕಿಯಲ್ಲಿ ಕೌಟುಂಬಿಕ ಸಂಘರ್ಷ

ಸಮಾಜದ ಅತ್ಯಂತ ಚಿಕ್ಕ ಘಟಕ ಕುಟುಂಬ. ಕುಟುಂಬದಲ್ಲಿ ವಿಭಕ್ತ ಕುಟುಂಬ ಅವಿಭಕ್ತ ಕುಟುಂಬ ಎಂದು ಎರಡು ವಿಧಗಳುಂಟು. ಗಸ್ತಿಯವರದು ಅವಿಭಕ್ತ ಕುಟುಂಬವಾಗಿದ್ದು ಅಜ್ಜಿ, ಅಪ್ಪ, ಅಮ್ಮ, ತಂಗಿ, ಅತ್ತೆಯವರಿಂದ ಕೂಡಿದ್ದಾಗಿದೆ. ಇವರ ಮತ್ತು ಕುಟುಂಬದ ಮಧ್ಯೆ ಬಿಕ್ಕಟ್ಟು ಉಂಟುಮಾಡಲು ಗಸ್ತಿಯವರ ಮದುವೆಯ ವಿಚಾರ ಕಾರಣವಾಗುತ್ತದೆ. ಅದಕ್ಕೆ ಪೂರಕವಾದ ಪ್ರಸಂಗ ಹೀಗಿದೆ:

"ಕಮಲಿಯ ಬದಲು ಬೇರೆ ಹುಡುಗಿಯನ್ನು ಹುಡುಕಬೇಕೆಂದು ಮನೆಯ ಜನರು ಯೋಚಿಸುತ್ತಿದ್ದರು. ನಾನು ಸಣ್ಣವನಿದ್ದಾಗಲೇ ಅಪ್ಪ, ಮಾಮನಿಗೆ ಮಾತು ಕೊಟ್ಟಿದ್ದ. ಕಮಲಿಯ ಮದುವೆಯನ್ನು ನನ್ನ ಜೊತೆಗೆ ಮಾಡಬೇಕೆಂದು ಹೇಳಿಸತ್ತಿದ್ದ. ನಾನು ಶಾಲೆ ಕಲಿಯುತ್ತಿದ್ದೇನೆಂದು

ಕಮಲಿಯನ್ನೂ ಶಾಲೆಗೆ ಕಳಿಸಿದ್ದರು. ಆದರೆ ಈಗ ಅವ್ವ, ಅಪ್ಪ, ಈ ಸಂಬಂಧದ ಬಗ್ಗೆ ಚಕಾರ ಮಾತನಾಡಲೂ ತಯಾರು ಇರಲಿಲ್ಲ. ಅವರಿವರು ಬಂದು ಅಪ್ಪ ಅವ್ವನ ಕಿವಿ ತುಂಬಲಾರಂಭಿಸಿದ್ದರು. ನನಗೆ ಇದ್ಯಾವದು ಸರಿಯೆಂದು ಅನ್ನಿಸಲಿಲ್ಲ. ಮಾಮಿಯ ದೀನ ಮುಖ ಕಣ್ಣೆದರು ಬಂದು ನಿಂತಿತು. ಕಮಲಿಯ ನೆನಪೂ ಕಾಡಿಸ ಹತ್ತಿತು. ದಡ್ಡಿಗೆ ಹೋಗಿ ಅವರನ್ನು ಕಂಡುಬರಬೇಕೆಂದೆನ್ನಿಸ ಹತ್ತಿತು. ಆದರೆ ಹೋಗುವ ಧೈರ್ಯ ಸಾಲದಾಯಿತು. ಒಂದೆರಡು ದಿನಗಳ ನಂತರ ದಡ್ಡಿಗೆ ಹೋಗುವ ನಿರ್ಧಾರಕ್ಕೆ ಬಂದೆ. ಸೂಟಿಯ ದಿನ ದಡ್ಡಿಯ ಬಸ್ಸು ಹಿಡಿದೆ"[7] ಈ ಮಾತುಗಳು ಗಸ್ತಿಯವರ ಮದುವೆಗೆ ಸಂಬಂಧಿಸಿದ್ದು, ಅವರ ಮಾಮಿಯ ಮಗಳು ಕಮಲಿಯನ್ನು ಮದುವೆಯಾಗಬೇಕೆಂದು ತೀರ್ಮಾನವಾಗಿದ್ದರೂ ಅದು ಫಲಿಸದಿದ್ದಾಗಿನ ನಿರಾಶೆಯ ಪರಿಸ್ಥಿತಿಯನ್ನು ತೋರಿಸುತ್ತದೆ.

ಭಾರತೀಯ ಸಂಸ್ಕೃತಿಯನ್ನು ಅವಲೋಕಿಸಿದಾಗ ಕುಟುಂಬದಲ್ಲಿ ತಂದೆ-ತಾಯಿಗೆ ಹೆಚ್ಚಿನ ಮಹತ್ವವನ್ನು ನೀಡಿರುವುದು ತಿಳಿಯುತ್ತದೆ. ಅಲ್ಲದೆ ಕಿರಿಯರನ್ನು ನಿಯಂತ್ರಿಸುವ ಅಧಿಕಾರ ಹಿರಿಯರಿಗಿರುತ್ತದೆ. ಹಾಗಾಗಿ ಕುಟುಂಬದ ಹಿರೀಕರಾದ ತಂದೆ-ತಾಯಿಗಳೇ ಕುಟುಂಬದ ನಿಯಂತ್ರಕರು. ಅಭಿವೃದ್ಧಿಗೊಳಿಸುವವರೂ ಅವರೆ ಆಗಿರುತ್ತಾರೆ. ಪಾಶ್ಚಿಮಾತ್ಯರಲ್ಲಿ ವಿಭಕ್ತ ಕುಟುಂಬಗಳೇ ಹೆಚ್ಚು. ಸ್ವಾತಂತ್ರ್ಯವು ಸಹ ಹೆಚ್ಚಾಗಿರುವುದು ಅಲ್ಲಿ ಒಬ್ಬರನ್ನೊಬ್ಬರು ನಿಯಂತ್ರಿಸುವಂತಿಲ್ಲ. ವೈಯಕ್ತಿಕ ತಮ್ಮ ಜೀವನ ಕುರಿತು ಅವರೇ ನಿರ್ಣಯ ಕೈಗೊಳ್ಳುವವರು.

ಆದರೆ ಭಾರತೀಯ ಕುಟುಂಬ ಪದ್ಧತಿಯಲ್ಲಿ ಹಿರಿಯರ ಅಪ್ಪಣೆಯನ್ನು ಮೀರುವಂತಿಲ್ಲ ಎಂಬ ಗ್ರಹೀತವಿದೆ. ಇದರಿಂದಾಗಿ ಹಿರಿಯರು ಕೈಗೊಳ್ಳುವ ನಿರ್ಣಯಗಳೆಲ್ಲವೂ ಸರಿಯಾದುವು ಎಂಬ ಅಂಶವನ್ನು ರೂಢಿ-ಸಂಪ್ರದಾಯಗಳ ಮೂಲಕ ಹೇರಲಾಗಿದೆ. ಹಾಗಾಗಿ ಮೊದಮೊದಲಿಗೆ ಸರಿಯಾಗಿ ಕಂಡುಬಂದದ್ದು ನಂತರದ ದಿನಗಳಲ್ಲಿ ಬೇಡವೆನಿಸುವುದು. ಕಮಲಿ ಮತ್ತು ಗಸ್ತಿಯವರ ಮದುವೆ ವಿಚಾರವಾಗಿದೆ. ಆದರೆ ಗಸ್ತಿಯವರ ಮದುವೆ ಕೌಟುಂಬಿಕ ಬಿಕ್ಕಟ್ಟಾಗಿದ್ದು ಗಸ್ತಿ ಮತ್ತು ಅವರ ತಂದೆಯ ಮಧ್ಯೆ ಘರ್ಷಣೆ ಶುರುವಾಗುತ್ತದೆ, ತಂದೆಯ ನಿರ್ಣಯವನ್ನು ಮೀರಿ ಕಮಲಿಯನ್ನು ಮದುವೆಯಾಗುವುದಕ್ಕೆ ಎಲ್ಲರೂ ಒಪ್ಪುವಂತೆ ಮಾಡುವುದು ಒಂದು ಸವಾಲಾಗುತ್ತದೆ. ಆಧುನಿಕ ಕುಟುಂಬದ ಮಕ್ಕಳು ಹಿಂದಿನವರ ನಿರ್ಣಯಗಳನ್ನು ಮತ್ತು ಕೌಟುಂಬಿಕ ಕಟ್ಟಳೆಗಳನ್ನು ಮೀರುತ್ತಾರೆಂಬುದಕ್ಕೆ ಮುಂದಿನ ಪ್ರಕರಣ ಸಾಕ್ಷಿಯಾಗುತ್ತದೆ. "ಐದು ದಿನಗಳಲ್ಲಿ ನನಗೆ ಮತ್ತು ಕಮಲಿಗೆ ಏಕಾಂತದ ಅನೇಕ ಕ್ಷಣಗಳು ಸಿಕ್ಕಿದವು. ಅವಳ ಜೊತೆಗೆ ಹೇಗೆ ಮತ್ತು ಏನು ಮಾತನಾಡಬೇಕೆಂದು ಗಲಿಬಿಲಿಗೊಳ್ಳುತ್ತಿದ್ದೆ. ಆಕೆ ನನ್ನನ್ನು ಮತ್ತು ನಾನು ಆಕೆಯನ್ನು ಸುಮ್ಮನೆ ನೋಡುತ್ತ ಕುಳಿತಿರುತ್ತಿದ್ದೆವು. ಕಣ್ಣುಗಳೇ ನಮ್ಮ ಭಾಷೆಯಾಗಿತ್ತು. ಕಮಲಿಯ ಮೈಬಣ್ಣ ಹಾಲಿನಂತೆ

ಬಿಳಿ. ಈಗ ಮೈಕೈ ತುಂಬಿಕೊಂಡು ಮತ್ತಷ್ಟು ಸುಂದರಿಯಾಗಿ ಕಾಣಿಸುತ್ತಿದ್ದಳು. ಏಕಾಂತದಲ್ಲಿದ್ದಾಗ ಪರಸ್ಪರ ಅಪ್ಪಿಕೊಳ್ಳಲು ಹಾತೊರೆಯುತ್ತಿದ್ದೆವು. ಒಂದು ದಿನ ಇಬ್ಬರೂ ಏಕಾಂತದಲ್ಲಿದ್ದಾಗ ಏನಾಗಬಾರದೆಂದು ಉಳಿದವರು ಬಯಸುತ್ತಿದ್ದರೋ ಅದು ನಡೆದುಹೋಯಿತು. ಎರಡು ದೇಹಗಳು ಪರಸ್ಪರ ಬೆಸೆದುಕೊಂಡವು. ಸುಖದ ಅದೇ ಗುಂಗಿನಲ್ಲಿ ನಾನು ಊರಿಗೆ ಮರಳಿದೆ”[೨] ಇಲ್ಲಿ ಸಮಾಜದ ತಳಸಮುದಾಯಗಳ ವಿವಾಹದ ನಂತರದ ಸಂಪ್ರದಾಯಗಳ ಆಚರಣೆಯನ್ನು ಪ್ರತಿಬಿಂಬಿಸಿದರೂ ಅದನ್ನು ಗಸ್ತಿಯವರು ಮೀರಿದ್ದಾರೆ.

ಭಾರತೀಯ ಸಂಸ್ಕೃತಿಯಲ್ಲಿ ಗಂಡು-ಹೆಣ್ಣಿನ ಸಂಬಂಧವನ್ನು ಬಹಳ ಪವಿತ್ರ ಎನ್ನಲಾಗುತ್ತದೆ. ಲೈಂಗಿಕತೆ ಕುರಿತು ಮಾತನಾಡುವುದು ತಪ್ಪು ಎಂಬ ಮಡಿವಂತಿಕೆಯ ಅಭಿಪ್ರಾಯಗಳು ಪ್ರಾಚೀನ ಕಾಲದಿಂದಲೂ ಬೆಳೆದುಬಂದಿದೆ. ಆದರೆ ಇತ್ತೀಚಿನ ಆಧುನಿಕ ಯುಗದಲ್ಲಿ ಮಡಿವಂತಿಕೆಯನ್ನು ಮೀರುವ ಪ್ರಕರಣಗಳು ಹೆಚ್ಚಾಗಿವೆ.

ವಿವಾಹವಾದ ಮೇಲೆ ಸಂಪ್ರದಾಯದಂತೆ ಗಂಡು-ಹೆಣ್ಣು ಸೇರುವಿಕೆಯನ್ನು ಕುಟುಂಬವೇ ನಿರ್ಧರಿಸುತ್ತದೆ. ಆದರೆ ಅದರ ಮೀರುವಿಕೆಯು ಕೆಳಸಮುದಾಯಗಳಲ್ಲಿ ಪಾಪದ ಪರಿಕಲ್ಪನೆ ತಪ್ಪು ಎಂಬ ನಂಬಿಕೆ, ಗೌರವಕ್ಕೆ ಧಕ್ಕೆ ಮುಂತಾಗಿ ಮಡಿವಂತಿಕೆಯೇ ಹೆಚ್ಚಾಗಿದೆ. ಆಗಲೂ ಗಸ್ತಿಯವರು ತಿಳಿದೋ ತಿಳಿಯದೆಯೋ ಆ ಮಡಿವಂತಿಕೆ ಮುರಿಯುವ ಕೆಲಸವನ್ನು ಮಾಡುತ್ತಾರೆ. ಅವರು ಬೇಡರ ಸಮುದಾಯದ ಜನರ ಸಂಘಟನೆಗೆ ತೊಡಗಿದಾಗ ತಮ್ಮ ಹೆಂಡತಿಯೊಂದಿಗೆ ಚಕಮಕಿಗೆ ಇಳಿಯುವ ಸಂದರ್ಭವು ಕುತೂಹಲಕರವಾಗಿದೆ.

“ವಸ್ತಿ ಜನರಿಗೆ ಕಾಳಜಿ ತೋರಿಸಿದಂತೆ ನಮ್ಮ ಮೇಲೂ ಕಾಳಜಿ ಇರಲಿ ಎಂದಳು. ನೀವು ಹೈದ್ರಾಬಾದಿಗೆ ಹೊರಡುವುದು ಯಾವಾಗ? ಎಂದು ಪ್ರಶ್ನೆ ಜೋಡಿಸಿದಳು. ನಾನು ಅಚ್ಚರಿಯಿಂದ ಅವಳ ಮುಖವನ್ನೇ ನೋಡಹತ್ತಿದೆ. ಈ ಜನರ ದೆಸೆಯಿಂದ ನೀವು ನಮ್ಮನ್ನೆಲ್ಲ ಮರೆಯುತ್ತಿದ್ದೀರಿ ಇಬ್ಬರು ಮಕ್ಕಳಿದ್ದಾರೆಂಬುದು ನಿಮಗೆ ನೆನಪಿರಲಿ ಎಂದು ಹೇಳಿದಳು ಅವಳ ಕಣ್ಣುಗಳಿಂದ ನೀರು ಒಸರುತ್ತಿತ್ತು”[೩] ಇಲ್ಲಿ ಹೆಣ್ಣಿನ ಸಹಜ ಗುಣಗಳ ಆಪ್ತ ಚಿತ್ರಣವಿದೆ. ಕುಟುಂಬದ ಹೊಣೆಗಾರಿಕೆಗೆ ಸಮಾಜದ ತಳಸಮುದಾಯಾಗಳಲ್ಲಿ ಹೆಚ್ಚಾಗಿ ಹೆಣ್ಣನ್ನೇ ಅವಲಂಬಿಸಿರುವುದು ಸಹ ಇಲ್ಲಿ ತಿಳಿಯುತ್ತದೆ.

ಸಾಮಾಜಿಕ ಕಾರ್ಯಕರ್ತನಾದವನಿಗೆ ಸ್ವಾರ್ಥವನ್ನು ತ್ಯಜಿಸಿದಾಗಲೇ ಸಮಾಜದಲ್ಲಿ ಗೌರವ ಪ್ರಾಪ್ತಿಯಾಗುವುದು. ಆದರೆ ಇಡೀ ಕುಟುಂಬವೇ ಅವನ ಮೇಲೆ ಅವಲಂಬಿತವಾಗಿರುವಾಗ ಕುಟುಂಬದ ಸದಸ್ಯರ ಹೇಳಿಗೆಗೆ ಶ್ರಮಿಸುವುದು ಅವನ ಕರ್ತವ್ಯವು ಸಹ ಹೌದು. ಹಾಗಾಗಿ ಕಮಲಿಯಂತಹ ಹೆಣ್ಣು ಮಗಳು ನಯವಾಗಿ ಗಸ್ತಿಯವರೊಂದಿಗೆ ಮಾತಿಗಿಳಿದು ಮೊದಲು ಮನೆ, ನಂತರ ಸಮಾಜ ಎಂಬ ತಿಳುವಳಿಕೆ ಎಚ್ಚರಿಕೆಯನ್ನು ನೀಡುತ್ತಾಳೆ. ಮುಂದೆ ಸಮುದಾಯ

ಸಂಘಟನೆ, ಹೋರಾಟಗಳೇ ಇವರಿಗೆ ಮುಳುವಾದ ಸಂದರ್ಭದಲ್ಲಿ ಕುಟುಂಬದವರು ಇವರನ್ನು ಟೀಕಿಸುತ್ತಾರಾದರೂ ಅದು ತಾತ್ಕಾಲಿಕವಾದುದಾಗಿದೆ.

ಸಮಾಜ ಎಂಬುದು ಸಂಕೀರ್ಣವಾದ ವ್ಯವಸ್ಥೆ. ಅ ವ್ಯವಸ್ಥೆಯ ಬಂಧನಗಳನ್ನು ಮೀರಲು ವ್ಯಕ್ತಿಗಳು ಸದಾ ಚಡಪಡಿಸುತ್ತಿರುತ್ತಾರೆ. ಆದರೆ ವ್ಯಕ್ತಿ ಮತ್ತು ಸಮುದಾಯಗಳ ನಡವಳಿಕೆಯನ್ನು ಹತೋಟಿಯಲ್ಲಿಡಲು ಸಮಾಜದಲ್ಲಿ ಸಾಮಾಜಿಕ ನಿಯಂತ್ರಣವೆಂಬ ಪ್ರಬಲವಾದ ಅಸ್ತ್ರವಿರುತ್ತದೆ. ಈ ಸಾಮಾಜಿಕ ನಿಯಂತ್ರಣಕ್ಕೆ ಸಂಪ್ರದಾಯ, ಲೋಕಾಚಾರ, ನೈತಿಕತೆ, ಧರ್ಮ, ಜಾತಿ ಇನ್ನೂ ಮುಂತಾದ ಅನೌಪಚಾರಿಕ ಸಾಧನಗಳು ಹಾಗೂ ಕಾನೂನು, ಶಾಸನ, ಪೊಲೀಸು, ನ್ಯಾಯಾಲಯ ಎಂಬಿತ್ಯಾದಿ ಔಪಚಾರಿಕ ಸಾಧನಗಳು ಸಹಾಯ ಮಾಡುತ್ತಿರುತ್ತವೆ. ಸಾಮಾಜಿಕ ನಿಯಂತ್ರಣ ಎಂಬುದು ಸಮಾಜದ ವ್ಯವಸ್ಥೆಯನ್ನು ಸದಾ ಪೋಷಿಸುತ್ತಿರುತ್ತದೆ.

ಸಾಂಪ್ರದಾಯಿಕ ಸಮಾಜದಲ್ಲಿ ವ್ಯಕ್ತಿಗಳು ಸಮಾಜದ ಅನೇಕ ಸಾಧನಗಳಿಂದ ನಿಯಂತ್ರಣಕ್ಕೆ ಒಳಗಾಗಿದ್ದರೂ ವ್ಯಕ್ತಿಗಳು ಸಮಾಜಕ್ಕಿಂತ ಹೆಚ್ಚೇನಲ್ಲ. ಅವರು ಸಮಾಜದ ಒಂದು ಭಾಗ. ವ್ಯಕ್ತಿಗಳು ಸಮಾಜದ ಇತಿಮಿತಿಯಲ್ಲಿ ಬಾಳಬೇಕು ಎಂದು ವ್ಯವಸ್ಥೆ ಅಪೇಕ್ಷಿಸುತ್ತದೆ. ಆದರೆ ಆಧುನಿಕ ಸಮಾಜದಲ್ಲಿ ವ್ಯಕ್ತಿಗಳು ತಮ್ಮ ಪ್ರಾಧಾನ್ಯತೆ ಹಾಗೂಳಳ ಸ್ವಂತಿಕೆ ಸ್ವಾತಂತ್ರ್ಯದ ಬಗ್ಗೆ ಯೋಚಿಸುತ್ತಾರೆ. ಅವರು ತಮ್ಮ ಆತ್ಮ ಸಂಯಮವನ್ನು ವೃದ್ಧಿಸಿಕೊಳ್ಳುತ್ತಾ ಸಾಮಾಜಿಕ ಬಂಧಗಳಿಂದ ಮುಕ್ತರಾಗಲು ಪ್ರಯತ್ನಿಸುತ್ತಾರೆ. ಸ್ವತಃ ತಾವೇ ಯೋಚಿಸುವ ನಿರ್ಣಯಿಸುವ, ತೀರ್ಮಾನಿಸುವ ಶಕ್ತಿಯನ್ನು ಬೆಳೆಸಿಕೊಳ್ಳುತ್ತಾರೆ.

ವ್ಯಕ್ತಿಗಳು ಅನ್ಯರ ಅಧೀನಕ್ಕೆ ಒಳಪಡಲು ಇಚ್ಚಿಸದೆ ಆಧುನಿಕ ಸಮಾಜದಲ್ಲಿ ತಮ್ಮ ವ್ಯಕ್ತಿತ್ವಗಳನ್ನು ಕ್ರಿಯಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ವ್ಯಕ್ತಿಗಳ ಸ್ವತಂತ್ರ ಹಾಗೂ ಸ್ವೋಪಜ್ಞ ಸ್ವಭಾವಗಳು ಕ್ರಾಂತಿಕಾರಕವಾಗಿರುತ್ತವೆ. ಸಾಮಾಜಿಕ ನಡವಳಿಕೆಗಳಿಗೆ ಬಗ್ಗದ ಸಮಾಜದಲ್ಲಿ ವ್ಯಕ್ತಿಗಳು ನಿರಂತರ ಹೋರಾಟದಲ್ಲಿ ತೊಡಗಿರುತ್ತಾರೆ. ಸಮಾಜ ವಿಧಿಸಿದ ಅಥವಾ ಒಪ್ಪಿದ ನಡವಳಿಕೆಗಳಿಗೆ ಬದ್ಧರಾಗದೆ ಇರುವ ಸಂದರ್ಭಗಳಲ್ಲಿ ವ್ಯಕ್ತಿಗಳ ಹಾಗೂ ಸಮಾಜದ ನಡುವೆ ನೇರವಾಗಿ ಘರ್ಷಣೆ ಏರ್ಪಡುತ್ತದೆ. ಏಕೆಂದರೆ ನಾಗರಿಕ ಜಗತ್ತಾಗಿ ಬೆಳೆಯುತ್ತಿರುವ ಸಮಾಜದ ವ್ಯವಸ್ಥೆಯಲ್ಲಿನ ಅಸಹಜತೆಯ ವಿರುದ್ಧ ವ್ಯಕ್ತಿಗಳು ಸಹಜತೆಯನ್ನು ಉಳಿಸಿಕೊಳ್ಳಲು ಮತ್ತು ತಮ್ಮ ಅಸ್ತಿತ್ವ ಸ್ಥಾಪನೆಗಾಗಿ ಹೋರಾಟ ಮಾಡಬೇಕಾಗುತ್ತದೆ. ಇದಕ್ಕಾಗಿ ಪರಂಪರೆಯ ಮೌಲ್ಯಗಳೊಂದಿಗೆ ಸಂಘರ್ಷಕ್ಕೆ ಇಳಿಯಬೇಕಾಗುತ್ತದೆ.

ರೋಗಿಷ್ಟ ಸಮಾಜದ ವ್ಯವಸ್ಥೆಯನ್ನು ಪ್ರಶ್ನಿಸುವಾಗ ಸಮಾಜ ಸ್ಥಾಪಿಸಿ ಒಪ್ಪಿದ ಮೌಲ್ಯಗಳನ್ನು ಪ್ರಜ್ಞಾವಂತ ವ್ಯಕ್ತಿಗಳು ಒಡೆದುಹಾಕಲು ಯತ್ನಿಸುತ್ತಿರುತ್ತಾರೆ. ವ್ಯಕ್ತಿಗಳಿಗೆ ತಮ್ಮ ಅಸ್ತಿತ್ವವಿಲ್ಲವೆನಿಸಿದಾಗ ವೈಯಕ್ತಿಕ ಮೌಲ್ಯಗಳಿಗೆ ಬೆಲೆ ಇಲ್ಲದಾಗ ಸಮಾಜದಲ್ಲಿನ ಸ್ವಾರ್ಥ ವ್ಯಕ್ತಿಗತ ಹಿತಾಸಕ್ತಿಗಳು ಮತ್ತು ವ್ಯವಸ್ಥೆಯ ಹಿತಾಸಕ್ತಿಗಳ ನಡುವೆ ಸಂಘರ್ಷವೇರ್ಪಟ್ಟು ವ್ಯಕ್ತಿಗಳಿಗೆ ಸಮಾಜದ ಜೊತೆ ಭಿನ್ನಮತ ಉಂಟಾಗುತ್ತದೆ. ಈ ಭಿನ್ನಮತ ವ್ಯಕ್ತಿಗಳು ಸಮಾಜದ ನಡುವಿನ ಬಿಕ್ಕಟ್ಟಿಗೆ ಕಾರಣವಾಗಿ ಹೊಸದೊಂದರ ಹುಟ್ಟುವಿಕೆಗೆ ಕಾರಣವಾಗಬಹುದು.

ವ್ಯಕ್ತಿಗಳ ಆದರ್ಶಗಳು ಸಮಾಜದ ಬಂಧನಕ್ಕೆ ಒಳಗಾಗಿದ್ದಾಗ ವ್ಯಕ್ತಿಗಳ ಒಳಗಿನ ನೈಜ ಸ್ವರೂಪ ಸಮಾಜದ ಬಂಧನಕ್ಕೆ ಪ್ರತಿರೋಧವನ್ನು ಒಡ್ಡುತ್ತಿರುತ್ತವೆ. ವಿದ್ಯಾವಂತ ವ್ಯಕ್ತಿಗಳ ಜಾಗೃತ ಮನಸ್ಸಿನಲ್ಲಿ ಪೂರ್ವ–ಪಶ್ಚಿಮಗಳ ತಾತ್ವಿಕತೆಗಳು ಆಳವಾದ ಸಂಘರ್ಷಕ್ಕೆ ಒಳಗಾಗುತ್ತವೆ.

ವ್ಯಕ್ತಿಗಳು– ಸಮುದಾಯ ಒಂದೇ ಎಂಬ ಭಾವನೆ ಮೂಡಿ ವ್ಯಕ್ತಿಗಳು ಸಮುದಾಯದ ಪ್ರತಿನಿಧಿಗಳಾಗಿ, ಸಮುದಾಯದ ಏಳಿಗೆಗೆ ಶ್ರಮಿಸುತ್ತಾರೆ. ಜೊತೆಗೆ ಸಮುದಾಯದ ಏಳಿಗೆಗೆ ಉಂಟಾಗುವ ವ್ಯವಸ್ಥೆಯ ಒಪ್ಪಿತ ಮೌಲ್ಯಗಳೊಂದಿಗೆ ಮುಖಾಮುಖಿಯಾಗುತ್ತಾರೆ. ಎದುರುಗೊಳ್ಳುವುದರ ಮುಖಾಂತರ ಸಮಾಜದ ಸ್ವಾಸ್ಥತೆಯನ್ನು ಕಾಪಾಡಲು ಹೊಸ ಹುಟ್ಟಿಗೆ ಕಾರಣರಾಗುತ್ತಾರೆ.

೪..೨. ಸಾಮುದಾಯಿಕ ಸಂಘರ್ಷ

ಸಮಾಜ ಒಂದು ಸಂಕೀರ್ಣವಾದ ವ್ಯವಸ್ಥೆ. ಈ ವ್ಯವಸ್ಥೆಯಲ್ಲಿ ಅನೇಕ ಒಳ ಪಂಗಡ ಜಾತಿ, ಜನಾಂಗ, ಸಮುದಾಯಗಳಿವೆ. ಇಂತಹ ಹಲವಾರು ಜಾತಿ, ಜನಾಂಗ, ಪಂಗಡ, ಸಮುದಾಯಗಳಲ್ಲಿ ವಾಲ್ಮೀಕಿ ಸಮುದಾಯವೂ ಒಂದು. ಈ ಸಮುದಾಯದ ಹಿನ್ನೆಲೆಯಿಂದ ಬಂದ ವ್ಯಕ್ತಿ ಭೀಮರಾವ್ ಗಸ್ತಿ. ಇವರು ತಮ್ಮ ಸಮುದಾಯದ ಏಳಿಗೆಗೆ ಕೆಲವೊಮ್ಮೆ ಸಮುದಾಯದ ಮುಖ್ಯಸ್ಥ, ಗುರು, ಯಜಮಾನರೊಂದಿಗೆ ಸಂರ್ಘಕ್ಕೆ ಇಳಿಯಬೇಕಾಗುತ್ತದೆ. ಇದಕ್ಕೆ ಕಾರಣವಾದ ಪ್ರಸಂಗಗಳು ಹೀಗಿವೆ; "ಪಕ್ಕದ ಎರಡು ಮೂರು ಊರಿನ ಎರಡುನೂರು ಬೇಡರು ಒಮ್ಮಿಂದೊಮ್ಮೆಲೇ ನಮ್ಮ ಊರು ಹೊಕ್ಕರು, ಎಲ್ಲರೂ ನನಗೆ ಬೈಯುತ್ತಿದ್ದರು. ಬೇರೆ ಊರಿನ ಉಗ್ರಾವತಾರದ ಈ ಬೇಡರನ್ನು ನೋಡಿ ನಮ್ಮ ಊರಿನವರು ಭಯಭೀತರಾದರು. ಊರಿನ ಪುಢಾರಿಗಳಿಗೆ ಸಂತೋಷವಾಗಿತ್ತು. ಈ ಬೇಡರನ್ನು ಪಂಚಾಯಿತಿ ಕಟ್ಟೆಗೆ ಕರೆದುಕೊಂಡು ಹೋಗಲಾಯಿತು. ಊರಿನ ಪುಡಾರಿಗಳ ಹಸ್ತಕರೇ ಪಂಚರಾಗಿದ್ದರು. ನನ್ನನ್ನು ಕಟ್ಟೆಗೆ ಕರೆಸಿ ಹೊಡೆಸಬೇಕು ನಂತರ ಊರಿನಿಂದ ಗಡಿಪಾರು ಮಾಡಬೇಕೆಂಬುದು ಪುಢಾರಿಗಳ ಇರಾದೆಯಾಗಿತ್ತು."[೪]

ವಾಲ್ಮೀಕಿ ಆತ್ಮಕಥೆಯ ಈ ಪ್ರಸಂಗವನ್ನು ಅವಲೋಕಿಸಿದಾಗ ಸಮುದಾಯದ ಆಂತರಿಕ ಸಂಘರ್ಷಗಳ ಸ್ವರೂಪ ಗೊತ್ತಾಗುತ್ತದೆ. ಸಮಾಜವು ಹಲವು ಸಮುದಾಯ, ಜಾತಿ, ಜನಾಂಗಗಳಿಂದ ರಚನೆಗೊಂಡಿರುತ್ತದೆ. ಮಾನವನ ಉಗಮದಿಂದಲೂ ಒಂದಿಲ್ಲೊಂದು ರೀತಿಯಲ್ಲಿ ಜಾತಿಯ ವ್ಯವಸ್ಥೆ ಬೆಳೆದುಬಂದ್ದುದಾಗಿದೆ. ವೇದಗಳ ಕಾಲದಲ್ಲಿದ್ದ ವರ್ಣಾಶ್ರಮ ಪದ್ಧತಿ ಬದಲಾವಣೆ ಹೊಂದಿ ಜಾತಿಯಾಗಿ ಮಾರ್ಪಟ್ಟು ಅದು ಸಮಾಜದ ಏಣಿಶ್ರೇಣಿತ್ವವನ್ನು ಪ್ರತಿನಿಧಿಸುವಷ್ಟರ ಮಟ್ಟಿಗೆ ಬೆಳೆದಿದೆ.

ಈ ಜಾತಿ ವ್ಯವಸ್ಥೆಯಿಂದ ಮಾನವರ ಮಾನವರಾಗಿರದೆ ಕುಲದ ಸಂಕೋಲೆಯೊಳಗೆ ಬಂದಿಯಾಗಿದ್ದಾರೆ. ಆಧುನಿಕ ಯುಗದಲ್ಲಿಯೂ ಸಹ ಆಳುವ ವರ್ಗ ರಾಜಕೀಯದಂತಹ ಕಾರಣದಿಂದಾಗಿ ಜಾತಿವ್ಯವಸ್ಥೆ ಹಾಗೇ ಉಳಿದುಕೊಂಡಿದೆ. ಒಂದೇ ಜಾತಿಯವರಾಗಿದ್ದು, ಯಜಮಾನಿಕೆಯ ಗೌರವ ಸ್ಥಾನ ಪಡೆದವರು ಹಾಗು ಆರ್ಥಿಕವಾಗಿ ಪ್ರಬಲರಾಗಿವವರು ಆಯಾ ಜಾತಿಯ ಪಂಚರಾಗಿರುತ್ತಾರೆ. ಇದು ಬಹು ಹಿಂದಿನಿಂದಲೂ ಜಾತಿ ವ್ಯವಸ್ಥೆಯೊಳಗೆ ಇರುವ ಒಳ ರಚನೆಯಾಗಿದೆ.

ಹಿಂದೆ ಹಳ್ಳಿಗಳಲ್ಲಿ ನಾನಾ ಜಾತಿಯ ಸಮುದಾಯದ ಹಾಗೂ ಕೋಮಿನ ಜನ ವಾಸ ಮಾಡುತ್ತಿರುವಾಗ ಅವರು ಜಾತ್ರೆ, ಹಬ್ಬ, ಹರಿದಿನಗಳ ಸಂದರ್ಭದಲ್ಲಿ ಜಾತಿಪಂಚರ ಅಪ್ಪಣೆ ಬೇಕಾಗಿತ್ತು. ಆಯಾ ಜಾತಿಗಳ ಜಗಳ, ಪಂಚಾಯ್ತಿ ತೀರ್ಮಾನಗಳನ್ನು ಇವರೇ ನಿರ್ವಹಿಸುತ್ತಿದ್ದರು. ಬುಡಕಟ್ಟು ಸಮುದಾಯಗಳಲ್ಲಿ ಜಾತಿಯ ಯಜಮಾನರು, ಜಾತಿಯ ಗುರು, ಜಾತಿಯ ಮುಖ್ಯಸ್ಥರುಗಳು, ಧರ್ಮಗುರುಗಳಾಗಿಯೇ ಕಾಣಿಸಿಕೊಳ್ಳುತ್ತಾರೆ.

ಹಿಂದೆ ಅಕ್ಷರಸ್ಥರು ಇಲ್ಲದ ಕಾರಣ ನ್ಯಾಯ ಸಂವಿಧಾನದ ಬಗ್ಗೆ ಆಧುನಿಕ ನಾಗರಿಕ ನ್ಯಾಯ ಪದ್ಧತಿಯ ಬಗ್ಗೆ ಅರಿವಿಲ್ಲದ ಕಾರಣದಿಂದಾಗಿ ಅನಕ್ಷರಸ್ಥರೇ ಹಳ್ಳಿಯ ಬಯಲಿನ ಕಟ್ಟೆಯನ್ನು ಆಯ್ಕೆ ಮಾಡಿಕೊಂಡು ನಡೆದ ಘಟನೆಗಳನ್ನು ಸಾಕ್ಷಿ ಆಧಾರಗಳ ಮುಖೇನ ಮೌಖಿಕ ರೀತಿಯಾಗಿ ಪರಿಶೀಲಿಸಿ ನ್ಯಾಯ ತೀರ್ಮಾನಗಳನ್ನು ಮಾಡುತ್ತಿದ್ದರು. ಅದರ ಫಲವಾಗಿ ಶಿಕ್ಷೆ, ಜುಲ್ಮಾನೆ ಅಥವಾ ಊರಿಂದ ಬಹಿಷ್ಕಾರಗಳಾಗಿರುತ್ತಿದ್ದವು. 'ವಾಲ್ಮೀಕಿ' ಕೃತಿಯಲ್ಲಿಯು ಸಹ ಗಸ್ತಿಯವರ ಪತ್ರಿಕಾ ಬರಹ ಸಹಿಸದ ಕೆಲವು ಪುಂಡರು ಅನಕ್ಷರಸ್ಥ ಜನರಿಗೆ ಅಪಪ್ರಚಾರ ಮಾಡಿ ಪಂಚಾಯ್ತಿಗೆ ಹಾಕುತ್ತಾ ಮತ್ತು ಇದೇ ಪಂಚಾಯ್ತಿಯ ಪಂಚರೊಬ್ಬ ಗಸ್ತಿಯವರನ್ನು ಒಳ್ಳೆಯವ ನಿರಪರಾಧಿ ಎಂದು ಹೇಳಿಕೆ ನೀಡಿ ಪಾರುಮಾಡುವಿಕೆಯನ್ನು ಈ ಪ್ರಸಂಗ ಹೇಳುತ್ತದೆ.

"ಪತ್ರಿಕೆಯನ್ನು ಇಲ್ಲೇ ತರಿಸಿ ಯಾರಿಂದಲಾದರೂ ಓದಿಸಿ, ಒಂದು ವೇಳೆ ನಾನು ಹೇಳಿದ್ದು ಸುಳ್ಳೆಂದು ಅನ್ನಿಸಿದರೆ ನಾನು ಜಾಹೀರ ರೀತಿಯಿಂದ ಕ್ಷಮೆ ಕೇಳುತ್ತೇನೆ ಎಂದು ಹೇಳಿದೆ. ಆದರೆ ಅಲ್ಲಿ ನೆರೆದವರಿಗೆ ಇದರ ಬಗ್ಗೆ ಆಸಕ್ತಿ ಇರಲಿಲ್ಲ. ಪೇಪರಲ್ಲಿ ಬರೆದು ಈತ ನಮ್ಮನ್ನು

ಅವಮಾನಿಸಿದ್ದಾನೆ ಅವನಿಗೆ ಬಿಡಬೇಡ್ರಿ, ಎಂದು ಒದರಾಡಹತ್ತಿದರು. ಗುಂಪು ಸೇರಿದ ಬೇಡರು ನನಗೆ ಹೊಡೆಯಲು ಬಂದರು. ಇದನ್ನೆಲ್ಲ ನೋಡಿ ಅಪ್ಪ ಅವರಿಗೆ ಕೈಮುಗಿದು ನನ್ನ ಮಗನನ್ನು ಕ್ಷಮಿಸಿರಿ ಎಂದು ಬೇಡಿಕೊಳ್ಳಹತ್ತಿದ. ನಾನು ನನ್ನ ಮಾತುಗಳನ್ನು ಹೇಳಿದ್ದೇನೆ ಈ ಜನರಿಗೆ ತಾವೇನು ಮಾಡುತ್ತಿದ್ದೇವೆಯೆಂದು ಗೊತ್ತಿಲ್ಲ ಎಂದು ಹೇಳಿ ಅಲ್ಲಿಂದ ಹೊರಬಿದ್ದೆ, ಕೂಡಲೆ ಬೇಡರು ಹೇ ಎಂದು ಎದ್ದರು. ಒಬ್ಬನಂತೂ ಕುಡುಗೋಲು ನನ್ನ ಕುತ್ತಿಗೆಗೆ ಹಿಡಿದು ಬೈಯ್ಯಹತ್ತಿದ. ಇದೆಲ್ಲವನ್ನು ನೋಡುತ್ತಿದ್ದ ಪಂಚರಲ್ಲಿಯ ಒಬ್ಬರಿಗೆ ಕೆಟ್ಟದೆನಿಸಿತು. ಅವರು ಪುಢಾರಿಗಳ ಪೈಕಿ ಇದ್ದರೂ ನನ್ನ ಕೆಲಸ ಕಾರ್ಯಗಳನ್ನು ಆರಂಭದಿಂದಲೇ ನೋಡುತ್ತ ಬಂದಿದ್ದರು. ಅವರು ಮುಂದೆ ಬಂದು ಎಲ್ಲರನ್ನೂ ಗದರಿಸಿದರು. ಆತ ನಿಮ್ಮ ಜಾತಿಯವರಿಗೆ ನೌಕರಿ ಕೊಡಿಸಿದ್ದನ್ನು ನಾನೇ ನೋಡಿದ್ದೇನೆ. ಇದರಲ್ಲಿ ಆತನ ಸ್ವಾರ್ಥವೇನೂ ಇಲ್ಲ ಇಲ್ಲಿಯವರೆಗೆ ನಿಮ್ಮ ಕಷ್ಟಗಳನ್ನು ಯಾರಾದರೂ ಸರ್ಕಾರದಲ್ಲಿ ಮಂಡಿಸಿದ್ದರೇ? ಅವನಿಂದಾಗಿ ನಿಮ್ಮ ಜಾತಿಯ ಒಂದೊಂದು ಸಮಸ್ಯೆಗಳು ಬಗೆಹರಿಯುತ್ತಿವೆ. ಅವನಿಗೆ ಯಾರೂ ಏನೂ ಮಾಡಕೂಡದು ಎಂದು ಹೇಳಿ ಅವರು ನನ್ನ ಕೈಹಿಡಿದು ಗುಂಪಿನಿಂದ ಹೊರಗೆ ಬಂದರು"[೫]

ಹಿಂದಿನ ಜಾತಿಯ ಪಂಚರು ಇಂದಿನ ನ್ಯಾಯವಾದಿಗಳಂತೆಯೇ ವರ್ತಸಿ, ಸಾಕ್ಷಿಗಳನ್ನು ಅವಲೋಕಿಸಿ ನ್ಯಾಯ ತೀರ್ಮಾನ ಮಾಡುತ್ತಿದ್ದ ಬಗೆ ಇದಾಗಿದೆ. ಅಲ್ಲದೆ ನ್ಯಾಯನಿಷ್ಠುರಿಯಾಗಿ ತೀರ್ಮಾನ ಮಾಡಿ ಪಂಚರ ಒಂದು ಮುಖ ಗೊತ್ತಾದರೆ ಇನ್ನೊಂದು ಮುಖ ಈ ಆತ್ಮಕಥೆಯಲ್ಲಿ ಮತ್ತೊಂದು ರೀತಿಯಲ್ಲಿ ಅನಾವರಣಗೊಳ್ಳುತ್ತದೆ. ಬೇಡರ ಗೊಂದ್ಯನಾಯಕನ ಮಗಳು ಭಾಗಿಯನ್ನು ಮುಸ್ಲಿಂ ಸಮುದಾಯದ ಕಾದರ ಎಂಬ ಯುವಕ ಓಡಿಸಿಕೊಂಡು ಹೋಗುವುದು ಜಾತಿ ಪಂಚಾಯತಿಗೆ ಬಂದು ಪಂಚರ ಮುಂದೆ ನಡೆಯುವ ವಿಚಾರಣಾ ಘಟನೆ ಹೀಗಿದೆ:

ಭಾಗಿಯ ಅಣ್ಣ ಮಲ್ಲಾ ಆಕೆಯ ಸೋದರ ನಾಗ್ಯ. ಇವರಿಬ್ಬರೂ ಕಾದರನನ್ನು ಕೊಲ್ಲುತ್ತೇವೆ ಎಂಬ ಮಾತಿನಿಂದ ಗಸ್ತಿಯವರು ಸಮಯ ಪ್ರಜ್ಞೆಯಿಂದ ಪೊಲೀಸರಿಗೆ ದೂರು ನೀಡುತ್ತಾರೆ. ನಂತರ ಆ ಪ್ರಕರಣವು ಜಾತಿ ಪಂಚಾಯ್ತಿಗೆ ಸೇರಿ ರೂಪ ಪಡೆಯುವುದು ಹೀಗೆ:

"ಭಾಗಿಯ ಕುಟುಂಬದ ಕೆಚ್ಚುರೊಚ್ಚು ಜೊತೆ ಜೊತೆಗೆ ಮುಸ್ಲಿಂ ಸಮುದಾಯದ ಕಾದರನ ಅಪ್ಪ ಮಹಮ್ಮದ್ ಅಲಿ ಊರಿನಲ್ಲಿ ಸಜ್ಜನ ಮನುಷ್ಯರೆಂದು ಗುರುತಿಸಲ್ಪಟ್ಟಿದ್ದರು. ಇವರು ತಲೆಬಾಗಿಸಿ ಪಂಚಾಯ್ತಿಯಲ್ಲಿ ನಿಂತರು. ಹನ್ನೊಂದು ಊರಿನ ಜಾತಿಪಂಚರು, ಊರಿನ ಸರಪಂಚರು ಹಾಗೂ ಬೇರೆ ಪಂಚರು ಪಂಚಾಯ್ತಿಗೆ ಕೂತರು. ವಿಚಾರಣೆ ಪ್ರಾರಂಭವಾಯಿತು. ಕಾದರನ ಅಪ್ಪ ನನ್ನ ಮಗ ತಪ್ಪು ಮಾಡಿದ್ದಾನೆ, ನಮ್ಮ ಮನೆಯ ಮರ್ಯಾದೆಯನ್ನು ಮಣ್ಣುಪಾಲು ಮಾಡಿದ. ಅವನನ್ನು ಮನೆಗೆ ಸೇರಿಸುವುದಿಲ್ಲ, ಆಸ್ತಿಯಲ್ಲಿ ಯಾವುದೇ ಪಾಲು ಅವನಿಗಿಲ್ಲ, ಎಂದು ಕೈ ಮುಗಿದು

ಕೇಳಿಕೊಂಡ. ಜಾತಪಂಚರು ತಮ್ಮ ತಮ್ಮಲ್ಲಿಯೇ ಚರ್ಚೆ ಆರಂಭಿಸಿ ಯಾರಿಗೆ ಎಷ್ಟೆಷ್ಟು ದಂಡ ಹಾಕಬೇಕೆಂದು ಚರ್ಚಿಸಿ ಕಾದರನ ತಂದೆಗೆ ಹತ್ತುಸಾವಿರ, ಕಾದರನಿಗೆ ಸಹಾಯ ಮಾಡಿದ್ದ ಮೂವರು ಯುವಕರಿಗೆ ಎರಡು ಸಾವಿರ, ಒಂದು ಸಾವಿರ, ಐದುನೂರು ದಂಡ ವಿಧಿಸಿದರು. ದಂಡದ ಹಣವನ್ನು ಸರಪಂಚರ ಕಡೆಗೆ ನೀಡಬೇಕು. ಕಾದರ ಮತ್ತು ಭಾಗಿ ಊರು ಪ್ರವೇಶಿಸದಂತೆ ನಿರ್ಬಂಧವನ್ನು ಹೇರಲಾಯಿತು. ನಾನು ಈ ಪ್ರಕರಣ ಪೊಲೀಸ್ ಸ್ಟೇಷನ್ನಿನಲ್ಲಿದೆ ಎಂದು ಎಚ್ಚರಿಸಿದರು. ನೀನು ಸುಮ್ಮನೆ ಕೂಡ್ರೋ ನಾಲ್ಕು ಪುಸ್ತಕಗಳನ್ನು ಓದಿದೆನೆಂದು ಬಹಳ ಜಾಣನೆಂದು ಭಾವಿಸಬೇಡ ಎಂದು ಒದರಾಡಹತ್ತಿದರು”[೬] ಈ ಪ್ರಕರಣವು ಹೇಗೆ ಬೇಡರಲ್ಲಿ ಜಾತಿ ಪಂಚರ ಪಂಚಾಯ್ತಿ ನಡೆಯುತ್ತಿತ್ತು ಎಂಬುದನ್ನು ತಿಳಿಸುತ್ತದೆ. ಅಷ್ಟೇ ಅಲ್ಲ ಇದು ಜಾತಿ ಪಂಚರ ಮತ್ತೊಂದು ಮುಖವನ್ನು ಸಹ ತೆರೆದಿಡುತ್ತದೆ. ತ್ವರಿತವಾದ ನ್ಯಾಯಕ್ಕಾಗಿ ಆಯಾ ಜಾತಿಯ ಜನರು ಮಾಡಿಕೊಂಡ ವ್ಯವಸ್ಥೆಯಂತೆ ಇದು ಕಂಡರು ಸಹ ಈ ಪಂಚಾಯ್ತಿ ಸಮಾಜದ ಜನರು ಗೌರವಿಸುವ ಮೌಲ್ಯಗಳನ್ನು ಎತ್ತಿಹಿಡಿಯುತ್ತಿರಲಿಲ್ಲ. ಆದರೆ ಇದು ಕೈಗೊಂಡ ನಿರ್ಣಯಗಳನ್ನು ಮಾತ್ರ ಎಲ್ಲರೂ ಒಪ್ಪಲೇಬೇಕಾಗಿತ್ತು. ಇದು ಅಂದಿನ ಜಾತಿ ಸಮಾಜದ ಒಪ್ಪಿತ ಮೌಲ್ಯವೂ ಆಗಿದ್ದಿತು.

ಆದರೆ ಭಾಗಿ ಅನ್ಯಕೋಮಿನ ಕಾದರ ಇಬ್ಬರೂ ಪರಸ್ಪರ ಇಷ್ಟಪಟ್ಟು ಹೋದರೆ ಭಾಗಿಯ ತಂದೆ ತಾಯಿಗಳಿಗೆ ದಂಡ ವಿಧಿಸದೆ, ಕಾದರನ ತಂದೆಗೆ ಮಾತ್ರ ದಂಡ ವಿಧಿಸಿರುವುದು ಜಾತಿ ಪಂಚಾಯ್ತಿಯ ರಾಜಕೀಯವೇ ಸರಿ. ಇದು ಪ್ರಶ್ನಾರ್ಹ ಕೂಡ. ದಂಡದ ಹಣವನ್ನು ಪಂಚರೇ ಹಂಚಿಕೊಳ್ಳುತ್ತಾರೆ, ದುಃಖತಪ್ತ ಕುಟುಂಬಗಳಿಗೆ ಆದ ಹಣದ ಶೋಷಣೆಯ ಬಗ್ಗೆ ಗಸ್ತಿಯವರು ಘರ್ಷಣೆಗೆ ಇಳಿದರೂ ಅದು ಫಲಕಾರಿಯಾಗುವುದಿಲ್ಲ. ಇದು ಇಂದಿನ 'ಮರ್ಯಾದಾ ಹತ್ಯೆ'ಯಂತಹ ಪ್ರಕರಣವನ್ನು ನೆನಪಿಸುತ್ತದೆ.

ಸಮಾಜದ ಜಾತಿವ್ಯವಸ್ಥೆಗಳು ಪ್ರೀತಿಯ ಬಂಧನದಿಂದ ಹೆಣ್ಣು-ಗಂಡುಗಳನ್ನು ಬೇರ್ಪಡಿಸುವುದು ಕಷ್ಟಸಾಧ್ಯವಾದುದೇ ಸರಿ. ಇಂತಹ ಅಂತರ್ ಕೋಮು ಹಾಗೂ ಅಂತರ್ ಜಾತಿ ವಿವಾಹಗಳು ಕನ್ನಡ ಸಾಹಿತ್ಯದಲ್ಲಿ ಅನೇಕ ರೀತಿಯಲ್ಲಿ ಅಭಿವ್ಯಕ್ತಿಗೊಂಡಿವೆ. ಪ್ರೀತಿಗೆ ನೈತಿಕ ಅನೈತಿಕ ಸಂಬಂಧಗಳ ಪರಿವಿಲ್ಲದೆ ಅದು ಜಾತಿ ವ್ಯವಸ್ಥೆಯನ್ನು ಮೀರಿ ಬೆಳೆಯುವಂತಹದು ಇಂತಹ ಬಿಕ್ಕಟ್ಟುಗಳು ಸಮಾಜದಲ್ಲಿ ಉಂಟಾಗಿ ಮುಂದೆ ಬದಲಾವಣೆಗೊಂಡು ಜಾತಿ ವ್ಯವಸ್ಥೆಯನ್ನು ನೆಲಸಮಗೊಳಿಸಲುಬಹುದಾಗಿದೆ. ಹೊಸ ಸಮಾಜ ನಿರ್ಮಾಣವಾಗಲು ಇಂತಹ ತಿಕ್ಕಾಟ, ಸಂಘರ್ಷಗಳು ಅನಿವಾರ್ಯ. ಆದರೆ ಇವು ಕುಟುಂಬ-ಕುಟುಂಬಗಳ ಸಂಘರ್ಷಗಳಾಗದೆ ಜಾತಿ ಸಂಘರ್ಷಗಳಾಗಿರುವುದೇ ಹೆಚ್ಚು.

೪.೩. ಸಾಮಾಜಿಕ ಸಂಘರ್ಷ :

ಭಾರತೀಯ ಸಮಾಜದ ಸಾಮಾಜಿಕ ಆಚರಣೆಗಳಲ್ಲಿ ದೇವದಾಸಿ ಪದ್ಧತಿಯು ಸಹ ಒಂದಾಗಿದೆ. ಈ ಪದ್ಧತಿ ಸಮಾಜದ ತಳಸಮುದಾಯಗಳಲ್ಲಿಯೇ ಹೆಚ್ಚು ಆಚರಣೆಯಲ್ಲಿದ್ದು ಅದು ಪುರಾಣಗಳ ಕಾಲದಿಂದಲೂ ಬೆಳೆದುಬಂದಿದೆ. ಆಧುನಿಕ ಯುಗದಲ್ಲಿಯು ಸಹ ತನ್ನ ಇರುವಿಕೆಯನ್ನು ವಾಲ್ಮೀಕಿ ಸಮುದಾಯಗಳಂತಹ ತಳಸಮುದಾಯಗಳಲ್ಲಿ ಜೋಗತಿ, ಮುತ್ತುಕಟ್ಟುವಿಕೆಯಂತಹ ರೂಪ ಪಡೆದು ಅದು ಅಸ್ತಿತ್ವದಲ್ಲಿದೆ. ಹೆಣ್ಣು ದೇವದಾಸಿಯಾಗುವುದರಿಂದ ಆಕೆಗಾಗುವ ನೋವು–ನಲಿವುಗಳೇನೆಂಬುದನ್ನು 'ವಾಲ್ಮೀಕಿ' ಆತ್ಮಕತೆಯಲ್ಲಿರುವ ಈ ಮುಂದಿನ ಪ್ರಸಂಗಗಳು ಹೇಳುತ್ತವೆ.

"ಮಾಮನ ದೊಡ್ಡಮಗಳು ಸತ್ಯವ್ವಾಳನ್ನು ದೇವದಾಸಿ ಎಂದು ಎಲ್ಲಮ್ಮನಿಗೆ ಬಿಟ್ಟಿದ್ದರು. ಆಕೆ ದೇವದಾಸಿಯಾಗಿದ್ದರಿಂದ ಮದುವೆಯಾಗುವಂತಿರಲಿಲ್ಲ. ಮಾಮನ ಮನೆಯಲ್ಲಿ ಒಬ್ಬ ಆಳಿದ್ದ. ಅವನೂ ಮಾಮನಿಗೆ ದೂರದ ಸಂಬಂಧಿಕನೇ. ಆತ ಮಾಮನಿಗೆ ಮನೆಕೆಲಸದಲ್ಲಿ ಸಹಾಯ ಮಾಡುತ್ತಿದ್ದ. ಸತ್ಯವ್ವಾಳನ್ನು ಅವನಿಗೆ ಉಡುಕಿ ಮಾಡಿಕೊಡಲಾಗಿತ್ತು. ಮಾಮನಿಗೆ ಗಂಡು ಸಂತಾನ ಇಲ್ಲದ್ದರಿಂದ ಸತ್ಯವ್ವಾ ಉಡುಕಿ ಗಂಡನೇ ಮನೆಮಗನಂತಾಗಿದ್ದ. ಅವರಿಬ್ಬರೂ ಪಕ್ಕದಲ್ಲಿಯೇ ಗುಡಿಸಲಿನಲ್ಲಿ ವಾಸಿಸುತ್ತಿದ್ದರು. ಸತ್ಯವ್ವಾ ನಡಗಟ್ಟಿ ಕಾಡಿಗೆ ಹೋಗಿ ಅಲ್ಲಿಂದ ಕಂಟ್ರಿಶೆರೆಯನ್ನು ತೆಗೆದುಕೊಂಡು ಬರುತ್ತಿದ್ದಳು. ಮನೆಯಲ್ಲಿಯೇ ಶೆರೆಯನ್ನು ಮಾರುತ್ತಿದ್ದಳು"[೭]

"ಒಂದು ಸಂಜೆ ನಾನು ಆಕೆಯ ಗುಡಿಸಲಿಗೆ ಹೋದಾಗ ಒಬ್ಬ ಶೆರೆ ಕುಡಿಯಲು ಅಲ್ಲಿಗೆ ಬಂದ. ಆತ ಅದೇ ಊರಿನವನಿರಬೇಕು. ಸತ್ಯವ್ವಾಳನ್ನು ಅವನು ಹಸಿದ ಕಣ್ಣುಗಳಿಂದ ನೋಡುತ್ತಿದ್ದ ಬಂದವನೇ ಶೆರೆ ಇದೆಯೇ? ಎಂದು ಕೇಳಿದ. ಇದೆ ಎಂದಳು ಸತ್ಯವ್ವಾ, ಆತ ಕುಳಿತುಕೊಂಡ, ಸತ್ಯವ್ವಾ ಒಳಗೆ ಹೋಗಿ ಒಂದು ಬಾಟ್ಲಿ ಮತ್ತು ಹಿಡಿಕೆ ಒಡೆದ ಕಪ್ಪು ತೆಗೆದುಕೊಂಡು ಬಂದಳು. ಕಪ್ಪಿಗೆ ಶೆರೆ ಸುರುವಿದಳು. ಆತ ಒಂದೇ ಹೊಡೆತಕ್ಕೆ ಕಪ್ಪು ಖಾಲಿಮಾಡಿದ. ಸತ್ಯವ್ವಾ ಮತ್ತೆ ಕಪ್ಪು ತುಂಬಿದಳು. ಆತ ಕುಡಿದ. ಅವನಿಗೆ ನಿಶೆ ಏರಲಾರಂಭಿಸಿತು. ಆತ ಸತ್ಯವ್ವಾಳ ಕೈ ಹಿಡಿದು ಜಗ್ಗಾಡಲಾರಂಭಿಸಿದ. ಅವಳು ಅವನನ್ನು ಝಾಡಿಸಿ ಒದ್ದು ಇಲ್ಲಿಂದ ಹೊರಟು ಹೋಗು ಎಂದು ಹೇಳಿದಳು. ಅವಳ ನಿರಾಕರಣೆಯಿಂದ ಅವನು ಮತ್ತಷ್ಟು ವ್ಯಗ್ರನಾಗಿದ್ದ. ಅವಳೆಡೆಗೆ ತುಚ್ಛನೆಯಿಂದ ನೋಡಿ ಅದೆಷ್ಟು ಧಿಮಾಕು ನಿನಗೆ? ಹೇಳಿ ಕೇಳಿ ನೀನು ದೇವದಾಸಿ, ಹಣ ಕೊಡ್ತೇನಿ, ಪುಕ್ಕಟೆ ಬೇಕಾಗಿಲ್ಲ ಎಂದು ಬಡಬಡಿಸಹತ್ತಿದ.

ದೇವದಾಸಿಯಾಗಿದ್ದೇನೆಂದು ನಿನ್ನ ಜೊತೆ ಮಲಗಬೇಕೆನು? ಎಂದು ಸತ್ಯವ್ವಾ ಕೇಳಿದಳು. ಅವಳು ಒಳಗೆ ಹೋಗುತ್ತಿರುವಂತೆಯೇ ಅವನೂ ಅವಳ ಹಿಂದೆಯೇ ಹೋದ. ಅಲ್ಲಿಯ ಪರಿಸ್ಥಿತಿ ನೋಡಿ ನಾನು ಗಾಬರಿಯಾದೆ. ತಿನ್ನುತ್ತಿರುವ ಶೇಂಗಾ ಬಿಟ್ಟು ಎದ್ದುನಿಂತೆ. ಅವನು ತನ್ನ ಹಿಂದೆ

ಬರುತ್ತಿರುವುದನ್ನು ನೋಡಿದ ಸತ್ಯವ್ವಾ ಕೈಗೆ ಕುಡುಗೋಲು ತೆಗೆದುಕೊಂಡಳು. ಅವನೆಡೆಗೆ ಕುಡುಗೋಲು ತೋರಿಸುತ್ತಾ ಮೈ ಮುಟ್ಟಿದರೆ ಹೊಟ್ಟೆಯನ್ನೇ ಸೀಳುತ್ತೇನೆ. ಬೇಡರ ಜಾತಿಯವಳಿದ್ದೇನೆ ಮುಟ್ಟಿ ನೋಡು ಎಂದು ಗರ್ಜಿಸಿದಳು. ಅವಳ ರಣಚಂಡಿ ಅವತಾರ ಕಂಡು ಅವನ ನಿಶೆ ಸರ್ರೆಂದು ಇಳಿಯಿತು. ಅಲ್ಲಿಂದ ಅವನು ಕಾಲ್ಕಿತ್ತ. ಇಲ್ಲಿ ನೋಡಿದ್ದನ್ನು ಯಾರಿಗೂ ಹೇಳಬೇಡ ಎಂದು ಸತ್ಯವ್ವಾ ನನ್ನಿಂದ ಆಣೆ ಮಾಡಿಸಿಕೊಂಡಳು. ಅವಳ ಕಣ್ಣುಗಳಿಂದ ಹರಿದ ನೀರು ಗಲ್ಲವನ್ನು ತೋಯಿಸಿತ್ತು. ಅವಳ ಕೈಗಳ ಕಡೆ ನೋಡಿದೆ. ಅಲ್ಲಿ ಯಲ್ಲಮ್ಮಳ ಮಣಿಗಳು ಹೊಳೆಯುತ್ತಿದ್ದವು. ಅವಳನ್ನು ಅಪ್ಪಿ ನಾನು ಅಳಹತ್ತಿದೆ."[೮]

ಈ ಪ್ರಸಂಗವನ್ನು ಗಮನಿಸಿದಾಗ ಸತ್ಯವ್ವಾ ಒಂದು ಹೆಣ್ಣಾಗಿ ಹೆಣ್ಣಿನ ಸ್ವಾಭಿಮಾನ, ಬದುಕು, ಪ್ರತಿಭಟನೆ, ಅಸಹಾಯಕತನಗಳನ್ನು ಮೈವೆತ್ತು ನಿಂತಿದ್ದಾಳೆ. ಮೊದಲಿಗೆ ಆಳುವ ಅರಸ ತನ್ನ ವಾಂಛೆ ತೀರಿಸಿಕೊಳ್ಳಲು ಶಯನ ಗೃಹದಲ್ಲಿ ಹೆಣ್ಣುಗಳನ್ನು ಬಂಧಿಯಾಗಿರಿಸಿಕೊಳ್ಳುತ್ತಿದ್ದ ಅಥವಾ ವಿವಾಹವಾಗುತ್ತಿದ್ದ. ನಂತರ ಅವರು ನೃತ್ಯಗಾರ್ತಿಯರಾಗಿ ಸಾಂಸ್ಕೃತಿಕ ಲೋಕಕ್ಕೆ ಕಾಲಿಟ್ಟರು. ಅಲ್ಲಿ ಜನರನ್ನು ರಂಜಿಸುವ ಕೆಲಸ ಮಾಡುವ ಹೆಣ್ಣುಗಳಾಗಿ ಅವರು ಮಾರ್ಪಾಡು ಹೊಂದಿದರು. ತದನಂತರ ಬರುತ್ತಾ ಬರುತ್ತಾ ಬದಲಾವಣೆ ಹೊಂದಿ ಊರಿಗೆ ಒಬ್ಬ ದೇವದಾಸಿಯನ್ನು ಊರಿನ ಗಂಡಸರ ವಾಂಛೆ ತೀರಿಸಲು ದೇವರ ಹೆಸರಿನಲ್ಲಿ ಬಿಡುವ ಪದ್ಧತಿ ಬೆಳೆಯಿತು.

ಭಾರತದ ಇತಿಹಾಸವನ್ನು ನೋಡಿದಾಗ ಸಮಾಜದ ಶ್ರೇಣೀಕೃತ ವ್ಯವಸ್ಥೆಯಲ್ಲಿ ಕೆಳ ಸಮುದಾಯದಲ್ಲಿಯೇ ಈ ಪದ್ಧತಿ ಹೆಚ್ಚಾಗಿ ಬೆಳೆದಿದೆ. ವಾಲ್ಮೀಕಿ, ಕುರುಬ, ಗೊಲ್ಲ, ಚಲವಾದಿ, ಮಾದಿಗ, ಉಪ್ಪಾರ ಮುಂತಾದ ಸಮುದಾಯಗಳಲ್ಲಿ ಮನೆಯ ಒಬ್ಬ ಹೆಣ್ಣನ್ನು ಆ ಊರಿನ ದೇವರ ಹೆಸರಿನಲ್ಲಿ ಬಸವಿ ಅಥವಾ ಜೋಗತಿ ಬಿಡುವುದೇ ದೇವದಾಸಿ ಪದ್ಧತಿಯಾಗಿದೆ. ತಳಸಮುದಾಯಗಳ ಮೂಢನಂಬಿಕೆ ದೈವಿಕ ಭಕ್ತಿ ಹೆಚ್ಚಾಗಿ ಕೆಲಸ ಮಾಡುತ್ತವೆ. ಉಳಿದ ಸವರ್ಣೀಯ ಜಾತಿಯ ಜನರು ಕೆಳಜಾತಿಗೆ ಸೇರಿದ ಈ ಹೆಣ್ಣು ಮಕ್ಕಳನ್ನು ಶೋಷಿಸುತ್ತಾರೆ.

ಇಂದಿಗೂ ಆಧುನಿಕ ಶಿಕ್ಷಣ ಪಡೆದ ಹಳ್ಳಿಗಳಲ್ಲಿ ಸಹ ಬಸವಿ ಬಿಡುವ ಪದ್ಧತಿ ಇದೆ. ಇದು ನಮ್ಮ ಸಮಾಜದಲ್ಲಿ ಈ ಪದ್ಧತಿ ಬೇರು ಬಿಟ್ಟಿರುವ ಆಳವನ್ನು ಸೂಚಿಸುತ್ತದೆ. ಮುತ್ತುಕಟ್ಟುವಿಕೆ ದೇವರೊಂದಿಗೆ ಮದುವೆ ಕಾರ್ಯ ಮಾಡುವಿಕೆ, ಹೀಗೆ ಆಯಾ ಸಮುದಾಯಗಳು ನಡೆಸಿಕೊಂಡು ಬಂದಿರುವ ಸಂಪ್ರದಾಯಗಳಂತೆ ವಾಲ್ಮೀಕಿ ಸಮುದಾಯದಲ್ಲಿ ಹೆಣ್ಣನ್ನು ದೇವದಾಸಿಯನ್ನಾಗಿ ಮಾಡಲಾಗುತ್ತದೆ.

ಇದೇ ರೀತಿಯಲ್ಲಿ ವ್ಯಕ್ತಗೊಂಡಿರುವ ಇನ್ನೊಂದು ಪ್ರಸಂಗವಿದೆ: "ನನ್ನ ತಂಗಿ ಮಲ್ಲವ್ವಳಿಗೆ ಹುಟ್ಟಿನಿಂದಲೇ ಕಾಲಿನ ಸಮಸ್ಯೆ ಇತ್ತು. ಆಕೆಗೆ ನಡೆದಾಡಲು ಆಗುತ್ತಿರಲಿಲ್ಲ. ಯಾವಾಗಲೂ ಒಂದೇ

ಕಡೆಗೆ ಕೂಡ್ರುತ್ತಿದ್ದಳು. ಅವಳನ್ನು ಯಲ್ಲಮ್ಮಳಿಗೆ ಅರ್ಪಿಸಿದರೆ ಅವಳ ಕಾಲಿನ ಸಮಸ್ಯೆ ಬಗೆಹರಿಯುತ್ತದೆಂದು ಜೋಗತಿಯೊಬ್ಬಳು ಅವ್ವಳಿಗೆ ಹೇಳಿದಳು. ಮಲ್ಲವ್ವಳೂ ನಮ್ಮ ಜೊತೆಗೆ ಇದ್ದಳು. ದೇವಸ್ಥಾನದಲ್ಲಿ ಅವಳ ಮದುವೆ ಪರಶುರಾಮನ ಜೊತೆಗೆ ನಡೆಯಬೇಕಾಗಿತ್ತು. ದೇವರಾದವನು ಇಷ್ಟು ಸಣ್ಣ ವಯಸ್ಸಿನ ಹುಡುಗಿಯೊಂದಿಗೆ ಅದು ಹೇಗೆ ಮದುವೆ ಮಾಡಿಕೊಳ್ಳುತ್ತಾನೆಂದು ನನಗೆ ಜಿಜ್ಞಾಸೆ. ಈ ಬಗ್ಗೆ ಅವ್ವನಿಗೆ ಕೇಳಿದರೆ ಆಕೆ ಸಿಟ್ಟು ಮಾಡಿಕೊಳ್ಳುತ್ತಿದ್ದಳು. ಹೀಗೆಲ್ಲ ಕೇಳಬೇಡ, ದೇವರಿಗೆ ಇದೆಲ್ಲ ಸೇರುವುದಿಲ್ಲ. ಈ ದೇವಿ ಬಹಳ ಕಡಕ್‌ದೇವಿ, ನಿನಗೆ ತೊಂದರೆ ಕೊಡಬಹುದು ಎಂದು ಹೇಳಿ ಬಾಯಿ ಮುಚ್ಚಿಸುತ್ತಿದ್ದಳು."[೬]

ಈ ಪ್ರಸಂಗವನ್ನು ಗಮನಿಸಿದರೆ ದೇವರು ಧರ್ಮದ ಹೆಸರಿನಲ್ಲಿಯೇ ಸ್ತ್ರೀಯರ ಶೋಷಣೆ ಮೊದಲಿನಿಂದಲೂ ಪುರುಷವರ್ಗ ಮಾಡಿಕೊಂಡು ಬರುತ್ತಿದೆ. ಅದನ್ನು ಮೂಢನಂಬಿಕೆಯಾಗಿಸಿ ಸಮಾಜದ ಕೆಳಸಮುದಾಯದ ಸ್ತ್ರೀಯರ ಮೇಲೆ ಹೇರಲಾಗಿದೆ. ಆದರೆ ದೇವದಾಸಿಗೆ ಬಿಡುವ ಹೆಣ್ಣಿಗೂ ಮನಸ್ಸಿದ್ದು ಗಂಡ, ಮಕ್ಕಳು ಸಂಸಾರ ಎನ್ನುವ ಪರಿಕಲ್ಪನೆ ಇರುವುದರಿಂದಲೇ ಸತ್ಯವ್ವಾಳಂತಹ ಹೆಣ್ಣು ಪ್ರತಿಭಟಿಸುವುದು. ಬಲಿಷ್ಠ ಪುರುಷ ಸಮಾಜದಲ್ಲಿ ಹುಲಿಗೆ ಸಿಕ್ಕ ಮೊಲದಂತೆ ಹೆಣ್ಣು ಬಳಕೆಗೊಳ್ಳುತ್ತಿದ್ದಾಳೆ. ಅಮರೇಶ್ ನುಗಡೋಣಿಯವರ 'ಊರಮ್ಮ' ಕಥೆಯು ಸಹ ಅಮಾಯಕ ಹುಡುಗಿಯೊಬ್ಬಳನ್ನು ದೇವದಾಸಿಯಾಗಿಸಿ ಊರಿನ ಶ್ರೀಮಂತನಿಂದ ಹಣಪಡೆದು ಋತುಮತಿಯಾದ ನಂತರವೇ ಊಡಿಕೆ ಮಾಡಿಕೊಡುವ ಪ್ರಸಂಗವನ್ನು ಒಳಗೊಂಡಿದೆ. ಆದರೇ ಆ ಊರಮ್ಮಳ ಮನಸ್ಸಿನಲ್ಲಿ ಕಪ್ಪನೆಯ ಭೀಮನೀರುವುದು ಪ್ರತಿಭಟನೆಯ ಸಾಂಕೇತಿಕವಾಗಿ ಮೂಡಿಬಂದಿದೆ. ಹೀಗೆ ಪುರುಷವರ್ಗ ಧರ್ಮ ಹೆಸರಿನಲ್ಲಿ ಸ್ತ್ರೀ ಶೋಷಣೆ ಮಾಡುತ್ತಿರುವುದನ್ನು ಅದಕ್ಕೆ ಸ್ತ್ರೀ ಪ್ರತಿರೋಧ ಒಡ್ಡುವುದನ್ನು ಕನ್ನಡದಲ್ಲಿ ಕತೆ ಕಾದಂಬರಿಗಳು, ಆತ್ಮಕತೆಗಳು ಚಿತ್ರಿಸುತ್ತಾ ಬಂದಿವೆ. 'ವಾಲ್ಮೀಕಿ'ಯಲ್ಲಿ ಬರುವ ಈ ಕೆಳಗಿನ ಪ್ರಸಂಗವನ್ನು ಗಮನಿಸಬಹುದು:

"ರಾತ್ರಿಯಲ್ಲೂ ದೇವಿ ದರ್ಶನಕ್ಕೆ ಗರ್ದಿ ಇದ್ದೇ ಇತ್ತು. ಎಲ್ಲರೂ ದೇವಿ ದರ್ಶನ ಪಡೆದೆವು. ತೆಗೆದುಕೊಂಡು ಹೋಗಿದ್ದ ತೆಂಗಿನಕಾಯಿ ಒಡೆದು ನೈವೇದ್ಯ ಇಟ್ಟೆವು. ಮುನೀಶ್ವರ ಮಾತಂಗಿ ದೇವರಿಗೆ ಕರ್ಪೂರ ಬೆಳಗಿದೆವು. ತಂಗಿ ಮಲ್ಲವ್ವಳನ್ನು ದೇವಿಗೆ ಅರ್ಪಿಸುವ ಕಾರ್ಯ ಬಾಕಿ ಉಳಿದಿತ್ತು. ವಿಧಿ ವಿಧಾನಗಳು ಮುಗಿದ ನಂತರ ಅವಳನ್ನು ಪರಶುರಾಮನಿಗೆ ಮದುವೆ ಮಾಡುವ ಕಾರ್ಯವನ್ನು ಪೂಜಾರಿ ನೆರವೇರಿಸಿದ. ಅಲ್ಲಿ ಆ ರೀತಿಯ ಅನೇಕ ಹುಡುಗಿಯರಿದ್ದರು. ಪೂಜಾರಿ ಅವರೆಲ್ಲರ ಮದುವೆಯನ್ನು ಪರಶುರಾಮನ ಜೊತೆಗೆ ನೆರವೇರಿಸುತ್ತಿದ್ದ. ಮದುವೆಯ ಕಾಲಕ್ಕೆ ಕೆಲ ಹುಡುಗಿಯರು ಅಳುತ್ತಿದ್ದರು. ಆದರೆ ಅವರ ಜೊತೆಗೆ ಬಂದಿದ್ದ ಹಿರಿಯರು ಅವರೆಡೆಗೆ ಬೆದರಿಸುವಂತೆ ಕಣ್ಣು ಕಿಸಿಯುತ್ತಿದ್ದರು. ಒಂದೇ ಕಾಲಕ್ಕೆ ಇಷ್ಟು ಹುಡುಗಿಯರ ಜೊತೆಗೆ ಪರಶುರಾಮ ಅದ್ಹೇಗೆ

ಮದುವೆ ಮಾಡಿಕೊಳ್ಳುತ್ತಾನೆಂದು ನಾನು ವಿಚಾರ ಮಾಡಹತ್ತಿದೆ. ಅಲ್ಲಿ ಇದ್ದದ್ದು ಒಂದು ಮೂರ್ತಿ. ಅಂತಹ ಮೂರ್ತಿಯ ಜೊತೆಗೆ ಈ ಹುಡುಗಿಯರ ಮದುವೆಯನ್ನೇಕೆ ಈ ಜನರು ಮಾಡುತ್ತಿದ್ದಾರೆಂದು ಗೊಂದಲಕ್ಕೆ ಬಿದ್ದೆ. ನಾವು ಎಲ್ಲಾರೂ ಪೂಜಿಸುವ ಈ ದೇವರು ನಿಜವಾಗಿಯೂ ಮದುವೆಯಾಗುತ್ತಿದ್ದಾನೆಯೋ ನನಗೆ ಅರ್ಥವಾಗಲೊಲ್ಲದು. ನಾವೆಲ್ಲರೂ ಮಲ್ಲಮ್ಮನನ್ನು ತಾಯಿಯೆಂದೇ ಕರೆಯುತ್ತಿದ್ದೆವು. ಪರಶುರಾಮ ಆಕೆಯ ಮಗ, ಹಾಗಿದ್ದಾಗ ಈ ಹುಡುಗಿಯರಿಗೆ ಪರಶುರಾಮ ಅಣ್ಣನೋ ತಮ್ಮನೋ ಆಗಬೇಕು. ಈ ಹುಡುಗಿಯರ ಮದುವೆ ತಾವು ಅಣ್ಣನೋ ತಮ್ಮನೋ ಎಂದು ನಂಬಿದವರ ಜೊತೆಗೆ ನೆರವೇರುತ್ತಿದೆಯಲ್ಲವೆಂದೆನಿಸಿ ನನಗೆ ದಾರಿಯೇ ತೋಚಲೊಲ್ಲದು. ಮದುವೆಯಾದ ಈ ಹುಡುಗಿಯರ ಭವಿಷ್ಯವೇನು? ನನ್ನ ತಂಗಿಯ ಭವಿಷ್ಯವೇನು? ನನ್ನ ತಂಗಿಯ ಕಾಲು ಸರಿಯಾಗಬಹುದೇ? ಆಕೆ ತನ್ನ ಇಡೀ ಆಯುಷ್ಯವನ್ನು ಈ ದೇವರ ಜೊತೆಗೆ ಕಳೆಯಬಲ್ಲಳೇ? ಈ ಹುಡುಗಿಯರ ಗತಿ ಏನು? ಹೀಗೆ ತಲೆಯಲ್ಲಿ ವಿಚಾರಗಳ ಅಲೆಗಳೆದ್ದು ಕಂಗಾಲಾದೆ. ಆದರೆ ನನ್ನ ಸುತ್ತಲೂ ಸಂಭ್ರಮದ ವಾತಾವರಣವಿತ್ತು. ಹಿರಿಯರ ಮುಖದಲ್ಲಿ ಸಂತಸ ಕಾಣಿಸುತ್ತಿತ್ತು. ತಮ್ಮ ಮಕ್ಕಳನ್ನು ದೇವಿಗೆ ಅರ್ಪಿಸಿದ ಬಗ್ಗೆ ತೃಪ್ತಿ ಕಾಣಿಸುತ್ತಿತ್ತು."[೧೦] ಈ ಪ್ರಸಂಗದಲ್ಲಿ ಹೆಣ್ಣುಮಕ್ಕಳ ಜೀವನ ಬಲಿಪಶುವಾಗುವಿಕೆ ಮತ್ತು ಅವರನ್ನು ಸಮಾಜ ನೋಡುವ ದೃಷ್ಟಿಗಳೆರಡನ್ನು ಅಸಹಾಯಕ ಮನಸ್ಕರಾಗಿ ನೋಡುತ್ತಾ ಲೇಖಕರು ಚಡಪಡಿಸುವುದನ್ನು ಕಾಣುತ್ತೇವೆ.

ಹಿಂದಿನಿಂದಲೂ ಸಮಾಜ ಒಪ್ಪಿಕೊಂಡು ಬಂದ ಮೌಲ್ಯಗಳನ್ನು ಬದಲಾಯಿಸುವುದು ಸುಲಭದ ಕೆಲಸವಲ್ಲ. ಅಂತಹ ಒಪ್ಪಿತ ಮೌಲ್ಯಗಳಲ್ಲಿ ದೇವದಾಸಿ ಪದ್ಧತಿಯು ಒಂದು. ಧಾರ್ಮಿಕ ಲೇಪನ ಪಡೆದಿರುವ ಇಂತಹ ಒಪ್ಪಿತ ಮೌಲ್ಯಗಳನ್ನು ತಿರಸ್ಕರಿಸುವ ಅಕ್ಷರಸ್ಥ, ವಿಚಾರವಂತ ಮನಸ್ಸುಗಳು ಸಮಾಜದ ಸಮುದಾಯಗಳೊಂದಿಗೆ ಸಂಘರ್ಷಕ್ಕಿಳಿಯುತ್ತವೆ. ಜಯಾಪಜಯಗಳೇನೇ ಇದ್ದರೂ ಬದಲಾವಣೆಯ ಪ್ರಕ್ರಿಯೆ ಶುರುವಾಗುತ್ತದೆ. ದೇವದಾಸಿ ಪದ್ಧತಿಯನ್ನು ನಿಷೇಧಿಸುವ ಕಾನೂನು ಜಾರಿಯಾಗಿರುವುದು ಬದಲಾವಣೆಗೆ ಕಾರಣವಾದರೂ ಇದರ ಪರಿಣಾಮ ಶೂನ್ಯವಾಗಿದೆ. ಈ ಹಿನ್ನೆಲೆಯಲ್ಲಿ ವಿಚಾರವಂತ ಮನಸ್ಸುಗಳು ಸ್ವತಃ ದೇವದಾಸಿ ಪದ್ಧತಿ ನಿರ್ಮೂಲನಾ ಸಮಿತಿಯ ಕೇಂದ್ರವನ್ನು ಸ್ಥಾಪಿಸಿಕೊಂಡು ತಮ್ಮ ಸ್ವಾಸ್ಥ್ಯ ಚಿಂತನೆಗಳಿಂದ ಈ ಸಮಾಜೋಧಾರ್ಮಿಕ ಮೂಢನಂಬಿಕೆಯ ಕಂದಾಚಾರಗಳ ವಿರುದ್ಧ ಸಂಘರ್ಷಕ್ಕಿಳಿಯುತ್ತವೆ. ಸತ್ಯವ್ವಾ, ಮಲ್ಲವ್ವರಂತಹ ಅನೇಕ ಹೆಣ್ಣುಮಕ್ಕಳು ಬಲಿಯಾಗದಂತೆ ತಡೆಯುತ್ತವೆ. 'ವಾಲ್ಮೀಕಿ' ಆತ್ಮಕತೆಯಲ್ಲಿ ಇಂಥ ಬದಲಾವಣೆಗೆ ಒತ್ತಡಗಳು ಸೃಷ್ಟಿಯಾಗುವುದನ್ನು ಚಿತ್ರಿಸಲಾಗಿದೆ.

೪.೪. ಆರ್ಥಿಕ ಸಂಘರ್ಷ :

ಮೋಸ, ವಂಚನೆ, ಶೋಷಣೆ, ಸುಲಿಗೆಗಳು, ಅಧಿಕಾರ ಮುಂತಾದವುಗಳನ್ನು ತನ್ನ ಉಪಾಯಗಳನ್ನಾಗಿಸಿಕೊಂಡು ನಿಂತಿರುವ ಬಂಡವಾಳಶಾಹಿ ಜಗತ್ತು ಇಂದು ಕಾರ್ಪೊರೆಟ್ ರೂಪ

ಪಡೆದು ಕಾರ್ಯಚಟುವಟಿಕೆಯಲ್ಲಿ ತೊಡಗಿದೆ. ಭಾರತೀಯ ಚರಿತ್ರೆಯನ್ನು ಅವಲೋಕಿಸಿದಾಗ ಹಣವಂತರ ಹಾಗೂ ಆಳುವ ವರ್ಗಗಳ ಪರವಾಗಿ ಪ್ರಭುತ್ವ ಕಾರ್ಯನಿರ್ವಹಿಸಿರುವುದು ಕಂಡುಬರುತ್ತದೆ. ಅಲ್ಲಿ ಸಾಮಾನ್ಯ ಮನುಷ್ಯರ ಆಶೋತ್ತರಗಳು ಧ್ಯೇಯಗಳು ಹಾಗೂ ಮೌಲ್ಯಗಳು ನಿರ್ಬಂಧಿಸಲ್ಪಟ್ಟಿರುತ್ತವೆ. ಸಮಾಜ ಒಪ್ಪಿತ ಮೌಲ್ಯಗಳಿಗೆ ಕಟ್ಟು ಬಿದ್ದು ಹೊಸ ಸಮಾಜ ನಿರ್ಮಾಣ ಸಾಧ್ಯವಿಲ್ಲ ವ್ಯಕ್ತಿಗಳ ಮತ್ತು ಸಮಾಜದ ಒಪ್ಪಿತ ಮೌಲ್ಯಗಳ ಮಧ್ಯೆ ಬಿಕ್ಕಟ್ಟು ಉಂಟಾದಾಗ ಮತ್ತೊಂದು ಹೊಸ ಸಮಾಜದ ಹುಟ್ಟು ಪಡೆಯಲು ಸಾಧ್ಯ. ವಾಲ್ಮೀಕಿ ಆತ್ಮಕಥನದಲ್ಲೂ ಗಸ್ತಿಯವರು ತಮ್ಮ ಉನ್ನತ ಶಿಕ್ಷಣವನ್ನು ಆಂಧ್ರಪ್ರದೇಶದಿಂದ ಮುಗಿಸಿಕೊಂಡು ಬಂದಾಗ ಊರಿನಲ್ಲಿ ಅಲ್ಯುಮಿನಿಯಂ ಕಾರ್ಖಾನೆ ಸ್ಥಾಪಿತವಾಗಿತ್ತು. ಅಲ್ಲಿ ಬಂಡವಾಳಶಾಹಿಗಳು ವಾಲ್ಮೀಕಿ ಸಮುದಾಯದ ಜನರನ್ನು ಶೋಷಿಸುತಿದ್ದರು.ಈ ಪ್ರಸಂಗದ ಚಿತ್ರಣ ಹೀಗಿದೆ:

"ನಮ್ಮ ಜನರು ಮೊದಲೇ ಹೆಬ್ಬೆಟ್ಟುವೀರರು, ಅಜ್ಞಾನಿಗಳು, ಮುಗ್ಧರು. ಇವರ ಬಣ್ಣದ ಆಶ್ವಾಸನೆಗಳಿಗೆ ಮರುಳಾಗಿ ಜನರು ತಮ್ಮ ಜಮೀನುಗಳನ್ನು ಕಾರ್ಖಾನೆಗೆ ವರ್ಗಾಯಿಸಿದ್ದರು. ತಮಗೆ ಮೋಸವಾಗಿದೆಯೆಂದು ಗೊತ್ತಾದಾಗ ಒಬ್ಬ ಲೀಡರ್‌ನನ್ನು ಹಿಡಿದುಕೊಂಡು ಬೆಂಗಳೂರಿಗೆ ಹೋದರೂ ಅದರಿಂದ ಯಾವ ಪ್ರಯೋಜನವೂ ಆಗಿರಲಿಲ್ಲ. ಸರ್ಕಾರವೇ ಆ ಕಾರ್ಖಾನೆಯ ಮಾಲೀಕರ ಜೊತೆಗೆ ಶಾಮೀಲಾಗಿದ್ದಿತು. ಕಾರ್ಖಾನೆಯ ಸಂಚಾಲಕರು ಊರಿನ ಕೆಲ ಗಣ್ಯರನ್ನು ಒಳಗೆ ಹಾಕಿಕೊಂಡು ಅವರಿಂದ ಬೇಡರ ಮೇಲೆ ಒತ್ತಡ ತಂದಿದ್ದರು. ಈ ಗಣ್ಯರ ಮಕ್ಕಳಿಗೆ ಕಾರ್ಖಾನೆಯಲ್ಲಿ ದೊಡ್ಡ ದೊಡ್ಡ ಹುದ್ದೆಗಳ ಭಕ್ಷೀಸು ನೀಡಿದ್ದರು. ಆದರೆ ಬಡ ಬೇಡರು ಹೊಟ್ಟೆ ತುಂಬಿಸಿಕೊಳ್ಳಲು ಕಾರ್ಖಾನೆಯ ಗವಂಡಿ ಕೆಲಸಕ್ಕೆ ಹೋಗಹತ್ತಿದರು. ಅವರಿಗೆ ಪ್ರತಿದಿನ ಐದು-ಆರು ರೂಪಾಯಿ ದಿನಗೂಲಿ ನೀಡಲಾಗುತ್ತಿತ್ತು."[೧೧]

ಈ ವರ್ಣನೆಯು ವಾಲ್ಮೀಕಿ ಸಮುದಾಯ ಶೋಷಣೆಗೆ ಒಳಪಟ್ಟ ಪರಿಯನ್ನು ಸ್ಪಷ್ಟಪಡಿಸುತ್ತದೆ. ಇದನ್ನು ತಿಳಿದು ಗಸ್ತಿ ಬಂಡವಾಳಶಾಹಿಗಳೊಂದಿಗೆ ಹೋರಾಡಲು ಸಜ್ಜಾಗುತ್ತಾರೆ.

ಬಹುಹಿಂದಿನಿಂದಲೂ ಶೋಷಣೆಗೆ ಒಳಗಾಗಿರುವುದು ಅನಕ್ಷರಸ್ಥ, ಅಮಾಯಕ, ಮುಗ್ಧಜನರೇ ಆಗಿದ್ದಾರೆ ಇಲ್ಲಿಯೂ ಸಹ ಅನಕ್ಷರಸ್ಥ ಸಮುದಾಯದ ಶೋಷಣೆ ಅಕ್ಷರಸ್ಥ ಅಥವಾ ಬಂಡವಾಳಶಾಹಿದಾರರಿಂದ ನಡೆಯುತ್ತದೆ. ಉದ್ಯಮಿಗಳು ಹಳ್ಳಿಯ ಗಣ್ಯವ್ಯಕ್ತಿಗಳ ಮೇಲೆ ಹಿಡಿತ ಸಾಧಿಸಿ ಅಮಾಯಕ ಜನರನ್ನು ಶೋಷಿಸುತ್ತಾರೆ. ದಲ್ಲಾಳಿಗಳ ಮೂಲಕ ಉದ್ಯಮಿಗಳು ಜನರನ್ನು ಶೋಷಿಸುತ್ತ ತಮ್ಮ ಕೆಲಸ ಮಾಡಿಸಿಕೊಳ್ಳುವಿಕೆ ಹೊಸ ವಿಷಯವೇನು ಅಲ್ಲ. ಈ ಬಗೆಯ ಶೋಷಣೆಯ ಚಿತ್ರಗಳು ಕನ್ನಡ ಸಾಹಿತ್ಯದಲ್ಲಿ ಕಥೆ, ಕಾದಂಬರಿ, ಕಾವ್ಯಗಳಲ್ಲಿ ಬಂದಿವೆ. ಕನ್ನಡದ ಲೇಖಕರು ಸಮುದಾಯದ ಪರವಾಗಿ ನೇರ ಚಳುವಳಿಗಿಳಿದು ಸಂಘರ್ಷಮಾಡಿದ್ದು ಕಡಿಮೆ. ಗಸ್ತಿಯವರು ನಡೆಸಿದ ಸಂಘರ್ಷದ ಇನ್ನೊಂದು ಪ್ರಸಂಗ ನೋಡೋಣ:

“ಊರಿನ ಜನರು ಹಾಗೂ ಇನ್ನೂ ಹಲವರು ನನ್ನೆಡೆಗೆ ಬಂದು ತಮ್ಮ ವ್ಯಥೆಯ ಕಥೆಯನ್ನು ಬಿಚ್ಚಹತ್ತಿದರು. ಹೈದ್ರಾಬಾದಿನ ಯುನಿವರ್ಸಿಟಿಯಲ್ಲಿ ನನಗೆ ಒಳ್ಳೆಯ ನೌಕರಿ ಸಿಗಲಿತ್ತು. ಆದರೆ ಎದುರಿಗೆ ನಲ್ವತ್ತು-ಐವತ್ತು ಜನರು ನಿಂತಿದ್ದರು. ಅವರ ಮುಖದ ಮೇಲೆ ಸಾವು ಕುಣಿಯುತ್ತಿತ್ತು. ಒಂದೆಡೆ ನನ್ನ ಜನರ ಹಿತ, ಇನ್ನೊಂದೆಡೆ ಯುನಿವರ್ಸಿಟಿಯಲ್ಲಿ ನೌಕರಿ. ನಾನು ವಿಚಾರದ ಗೊಂದಲದಲ್ಲಿ ಬಿದ್ದೆ. ಬಂದವರು ಟಕಮಕ ಮುಖ ಮುಖ ನೋಡಿಕೊಳ್ಳುತ್ತಿದ್ದರು. ಅವರಲ್ಲೊಬ್ಬ ನನ್ನ ಅಪ್ಪನಿಗೆ ‘ಈತ ಇಷ್ಟು ಕಲಿತಿದ್ದಾನೆ. ನಮಗಾಗಿ ಏನಾದರೂ ಮಾಡಲು ಹೇಳಿ’ ಎಂದು ಹೇಳಿದ. ಅಪ್ಪನು ನನ್ನ ಕಡೆಗೆ ತಿರುಗಿ ಕಾರ್ಖಾನೆಯವರು ಎಲ್ಲರಿಗೂ ಮೋಸ ಮಾಡಿದ್ದಾರೆ. ನಾವೆಲ್ಲರೂ ದಿವಾಳಿ ಎದ್ದಿದ್ದೇವೆ ನೀನು ಕಲಿತವ. ಇಂಗ್ಲಿಷ್ ಬರ್‍ತದೆ. ಕಾರ್ಖಾನೆಯ ಅಧಿಕಾರಿಗಳಿಗೆ ನಮಗೆ ನ್ಯಾಯ ನೀಡಲು ಹೇಳು ಎಂದು ಹೇಳಿದ”[೧೨]

ತಮ್ಮ ತಂದೆಯ ಮಾತುಗಳನ್ನು ಆಲಿಸಿದ ಗಸ್ತಿಯವರು ತಮ್ಮ ಮನಸ್ಸಿನಲ್ಲಿಯೇ ಇವರಿಗಾಗಿರುವ ನಷ್ಟವನ್ನು ತುಂಬಲು ತಾವು ಮಾಡಬೇಕಾದ ಕೆಲಸದ ಬಗ್ಗೆ ಗೊಂದಲಕ್ಕೆ ಬೀಳುತ್ತಾರೆ. ಪಜ್ಞಾವಂತನೊಬ್ಬ ಸ್ವಹಿತ ಕಾಪಾಡಿಕೊಳ್ಳದೆ ಸಮಾಜ ಮುಖಿಯಾಗಿ ಚಿಂತಿಸಿ ಕಾರ್ಖಾನೆಯವರೊಂದಿಗೆ ಸಂಘರ್ಷಕ್ಕಿಳಿಯಲು ಸಿದ್ಧನಾಗುವುದು ಸುಲಭದ ಮಾತಲ್ಲ. ಆಳುವ ವರ್ಗದ ಒಪ್ಪಿತ ಮೌಲ್ಯಗಳನ್ನು ಒಡೆಯುವ ಕೆಲಸಕ್ಕೆ ನಿರತವಾಗುವುದು ಬೌದ್ಧಿಕ ಹಾಗೂ ಮಾನಸಿಕ ಸದೃಢವಾದ ವ್ಯಕ್ತಿತ್ವದಿಂದ ಮಾತ್ರ ಸಾಧ್ಯ. ಅಂಬೇಡ್ಕರ್‌ರವರು ಸಹ ಅಂದಿನ ಸಾಂಪ್ರದಾಯಿಕ ಸಾಮಾಜಿಕ ಮೌಲ್ಯಗಳ ವಿರುದ್ಧ ಸಂಘರ್ಷಕ್ಕಿಳಿದ್ದದ್ದು ತಮ್ಮ ಘನ ವ್ಯಕ್ತಿತ್ವದಿಂದಾಗಿ. ಇವರ ಪ್ರಭಾವ ಗಸ್ತಿಯವರ ಮೇಲೂ ಆಗಿರಬಹುದು. ಗಸ್ತಿಯವರು ಸಾಮಾಜಿಕ ಸಂಘರ್ಷಕ್ಕೆ ತಮ್ಮ ಮನಸ್ಸನ್ನು ಅಣಿಗೊಳಿಸಿಕೊಳ್ಳುವ ಬಗೆ ಹೀಗಿದೆ:

“ರಾತ್ರಿ ನನಗೆ ನಿದ್ದೆಯೇ ಹತ್ತಲಿಲ್ಲ. ಬೇಡರ ಜನಾಂಗದ ದೀನ ಮುಖಗಳು ಕನಸಿಗೆ ಬಂದು ಮುತ್ತಿಗೆ ಹಾಕುತ್ತಿದ್ದವು. ಈ ಜನರಿಗಾಗಿ ನಾನು ಏನಾದರೂ ಮಾಡಲೇಬೇಕು ಎಂದು ನಿರ್ಧರಿಸಿದೆ. ಅನ್ಯಾಯವಾಗಿ ಅವರ ಜಮೀನುಗಳನ್ನು ಹಡಪ ಮಾಡಲಾಗಿತ್ತು. ಪೋಲೀಸರ ದೌರ್ಜನ್ಯ ಅಬಾಧಿತವಾಗಿತ್ತು. ಕಾರ್ಖಾನೆ ಬಂದಂದಿನಿಂದ ಊರಿನ ಎಲ್ಲರೂ ತಮ್ಮ ಜಮೀನು ಕಳೆದುಕೊಂಡು ಬಿಕಾರಿಗಳಾಗಿದ್ದರು. ಈ ಎಲ್ಲ ಅನ್ಯಾಯಗಳ ವಿರುದ್ಧ ನಾನು ಬಂಡೇಳಬೇಕಾಯಿತು.”[೧೩]

ತಮ್ಮ ಸಮುದಾಯದ ಶೋಷಣೆಯನ್ನು ಬಹಳ ಹತ್ತಿರದಿಂದ ಕಂಡ ಗಸ್ತಿಯವರು ಮಾನಸಿಕ ಗೊಂದಲದಿಂದ ಹೊರಬಂದು, ದೃಢ ಸಂಕಲ್ಪ ತೊಟ್ಟು ಬಂಡವಾಳಶಾಹಿಗಳೊಂದಿಗೆ ಸಂಘರ್ಷಕ್ಕೆ ಇಳಿಯುತ್ತಾರೆ.

ಹೀಗೆ ವ್ಯಕ್ತಿಯೊಬ್ಬ ಗುರಿಯ ಸಾಧನೆಯ ಪಥದಲ್ಲಿ ನಿಂತು ಚಡಪಡಿಸುತ್ತ ವೇದನೆಗೊಳಪಟ್ಟಾಗ, ಅದು ಕನಸಾಗಿ ರೂಪಪಡೆದುಕೊಂಡು ಚಾಲನೆ ಪಡೆಯುತ್ತದೆ. ಜೀವಂತ ವ್ಯಕ್ತಿಗೆ ಕನಸು ಮುಖ್ಯ.

ಕನಸು ಕಾರ್ಯಚಟುವಟಿಕೆಯ ಬಿಂಬವಾಗಿ ಗಸ್ತಿಯವರನ್ನು ಕಾಡಿ, ಸಾಮಾಜಿಕ ಕಾರ್ಯಕರ್ತನಾಗುವಂತೆ ಮಾಡುತ್ತದೆ. ಗಸ್ತಿಯವರು ಸಂಘಟನೆ ಆರಂಭಿಸುತ್ತಾರೆ. ಆದರೆ ಜನರನ್ನು ಒಗ್ಗೂಡಿಸಿ ಕಾರ್ಖಾನೆಯ ಬಾಗಿಲಿನಲ್ಲಿ ಮುಷ್ಕರಕ್ಕೆ ಕೂತಾಗಲು ನ್ಯಾಯ ಸಿಗುವುದಿಲ್ಲ. ಕೊನೆಗೆ ಪುಣೆ–ಬೆಂಗಳೂರು ರಸ್ತೆ ಮಾರ್ಗವನ್ನು ಬಂದ್ ಮಾಡಿ ಮುಷ್ಕರಕ್ಕೆ ಕೂತಾಗ ಕಾರ್ಖಾನೆಯ ಮ್ಯಾನೇಜರ್ ನಾಳೆ ನಿಮ್ಮ ಜನಗಳಿಗೆ ಬರಲೇಳಿ ಕೆಲಸ ಕೊಡುತ್ತೇವೆ ಎನ್ನುತ್ತಾರೆ. ಮುಷ್ಕರ ನಿಲ್ಲಿಸಿ ಖುಷಿಯಲ್ಲಿ ಜನರು ಮನೆಗಳಿಗೆ ಮರಳುತ್ತಾರೆ. ಆಗ ಗಸ್ತಿಯವರಿಗೆ ಒಂದು ಕನಸು ಬೀಳುತ್ತದೆ. ಅದರಲ್ಲಿ ಭಗ್ನತೆಯ ಸೂಚನೆ ಇರುತ್ತದೆ.

“ರಾತ್ರಿ ಕನಸು ಬಿತ್ತು, ಕನಸಿನಲ್ಲಿ ನಮ್ಮ ಜನರು ಪರಸ್ಪರ ಕಿತ್ತಾಡುತ್ತಿದ್ದರು, ನಿನಗೆ ಕೆಲಸ ಸಿಕ್ತು ನನಗೆ ಸಿಗಲಿಲ್ಲ ಎಂದು ಹೊಡೆದಾಟ ಆರಂಭವಾಯಿತು. ಕೆಲವರು ನನ್ನನ್ನು ಜಗ್ಗಾಡ ಹತ್ತಿದರು. ನಮಗೂ ಕೆಲಸಕೊಡಿಸಿ ಇಲ್ಲದಿದ್ದರೆ ನಿನ್ನನ್ನು ಕೊಂದೇ ಹಾಕ್ತೇವೆ ಎಂದು ಹೊಡೆಯಲು ಬಂದರು. ನಾನು ಗಾಬರಿಯಾಗಿ ಎದ್ದು ಕುಳಿತೆ”[೧೪] ಸಮುದಾಯದ ನಡಾವಳಿಗಳನ್ನು ಅರಿತಿದ್ದ ಗಸ್ತಿಯವರಿಗೆ ಅವರ ದೂರದೃಷ್ಟಿ ಕನಸಿನ ರೂಪದಲ್ಲಿ ಸುಪ್ತ ಪ್ರಜ್ಞೆಯನ್ನು ಎಚ್ಚರಿಸುವ ಕೆಲಸಮಾಡಿ ಸಮುದಾಯದ ಜನರ ಸ್ವಭಾವವನ್ನು ಬಿಂಬಿಸುತ್ತದೆ.

ಪ್ರಜ್ಞಾವಂತ ಸಾಮಾಜಿಕ ಕಾರ್ಯಕರ್ತನೊಬ್ಬ ತನ್ನ ಸಮುದಾಯದ ಜನರ ಓರೆ–ಕೊರೆಗಳನ್ನು ಅರಿತವನಾಗಿದ್ದಾಗ ಮಾತ್ರ ಆ ಸಮುದಾಯದ ಬೆಂಬಲ ಪಡೆಯಲು ಸಾಧ್ಯ. ಗಸ್ತಿಯವರಿಗೆ ವಾಲ್ಮೀಕಿ ಸಮುದಾಯದ ಜನರ ಏಳಿಗೆಯ ಬಗ್ಗೆ ಕನಸು ಇತ್ತು. ಅದು ಆರೋಗ್ಯವಂತ ಮನಸ್ಸಿನ ಲಕ್ಷಣವಾಗಿತ್ತು. ಬೇಡರ ಸಮುದಾಯ ಮೊದಲೇ ಹೊಡೆದಾಟಕ್ಕೆ ಬಡಿದಾಟಕ್ಕೆ ಎತ್ತಿದಕೈಯಾದ್ದರಿಂದ ಅವರ ಕನಸು ಭಗ್ನವಾಗುವ ಸಾಧ್ಯತೆ ಇತ್ತು. ಆದರೆ ಕೆಲವೇ ದಿನಗಳಲ್ಲಿ ಕಾರಖಾನೆಯವರು ಊರಿನ ಎಲ್ಲಾ ಜನರನ್ನು ಕೆಲಸಕ್ಕೆ ಸೇರಿಸಿಕೊಂಡರು. ಅಭದ್ರತೆ ಗಸ್ತಿಯವರನ್ನು ಕಾಡುತ್ತಿತ್ತು. ಕಾರಣ ಕೆಲಸ ತಾತ್ಕಾಲಿಕವಾದುದಾಗಿರುವುದು, ಕೊನೆಗೆ ಗಸ್ತಿಯವರು ವಿದ್ಯಾವಂತರಾಗಿದ್ದರಿಂದ ಇಂಗ್ಲಿಷ್ ಚೆನ್ನಾಗಿ ಬಲ್ಲವರಾಗಿದ್ದರಿಂದ ಆಳುವ ವರ್ಗ ಹಾಗೂ ಪತ್ರಿಕೆಗಳಿಗೆ ಲೇಖಕರ ಪತ್ರಗಳನ್ನು ಬರೆಯುವುದರ ಮುಖೇನ ವಿಷಯವನ್ನು ಜನರಿಗೆ ಮನದಟ್ಟು ಮಾಡಿಸುತ್ತಾರೆ. ಇದರ ಪರಿಣಾಮ ಇಂಗ್ಲೆಂಡಿನ ಕಾರ್ಖಾನೆಯ ಒಡೆಯ ಲೇಸ್ಲಿಯವರು ಗಸ್ತಿಯವರೊಂದಿಗೆ ಸಂಪರ್ಕಿಸಿ ಸಮಸ್ಯೆಗೆ ಪರಿಹಾರವನ್ನು ಕಂಡುಕೊಂಡು ಜನರಿಗೆಲ್ಲರಿಗೂ ಕೆಲಸ ನೀಡುತ್ತಾರೆ.

ಕನ್ನಡಕ್ಕೆ ಬಂದಿರುವ ಇನ್ನಿತರ ಅನುವಾದಿತ ಆತ್ಮಕಥೆಗಳನ್ನು ನೋಡಿದಾಗಲೂ ಈ ಬಗೆಯ ನಾಯಕನ ಹೋರಾಟ ಭ್ರಮನಿರಸನ ಕಂಡುಬರುತ್ತದೆ. ಲಕ್ಷ್ಮಣ ಗಾಯಕವಾಡರ ‘ಉಚಲ್ಯಾ’ದಲ್ಲೂ ಅನ್ಯಾಯದ ವಿರುದ್ಧ ಹೋರಾಡುವ ಪ್ರಸಂಗಗಳು ಬರುತ್ತವಾದರೂ ಅವು ರಾಜಕಾರಣಕ್ಕೆ ತಿರುಗಿ

ಮತ್ತೊಂದು ರೂಪ ಪಡೆಯುತ್ತವೆ. 'ವಾಲ್ಮೀಕಿ' ಆತ್ಮಕಥೆಯಲ್ಲಿ ಗಸ್ತಿಯವರ ಸಾಮಾಜಿಕ ಪ್ರಜ್ಞೆಯಿಂದ ಒಬ್ಬ ಸಾಮಾನ್ಯ ಮನುಷ್ಯನಾಗಿ ಸಾಮಾನ್ಯರಲ್ಲಿ ಬೆರೆತು ಜನರ ಅಪಾರ ಬೆಂಬಲ ಪಡೆದು ಕಾರ್ಖಾನೆಯವರ ಆಸೆ ಆಮಿಷಗಳಿಗೆ ಬಲಿಯಾಗದೆ ಸಮುದಾಯದ ಏಳಿಗೆಗೆ ಶ್ರಮಿಸುವದನ್ನು ಕಾಣಬಹುದು. ಯಾವಾಗಲೂ ಸಮಾಜದ ಒಪ್ಪಿತ ಮೌಲ್ಯಗಳನ್ನು ಒಡೆಯುವ ಕೆಲಸಗಳಾದಾಗಲೇ ಬಿಕ್ಕಟ್ಟುಗಳೇರ್ಪಡುವುದು. ಒಂದು ಬಿಕ್ಕಟ್ಟು ಮತ್ತೊಂದರ ಸಂಘರ್ಷಕ್ಕೆ ಕಾರಣವಾಗಿ ಬದಲಾವಣೆಗೊಂಡು ಸಮಾಜ ಆರೋಗ್ಯವಾಗಿರುತ್ತದೆ.

ಟಿಪ್ಪಣಿಗಳು

೧. ಡಾ. ಭೀಮರಾವ್ ಗಸ್ತಿ, ವಾಲ್ಮೀಕಿ,		ಪು.೪೮
೨. ಅದೇ	,,	ಪು.೫೮
೩. ಅದೇ	,,	ಪು.೬೪
೪. ಅದೇ	,,	ಪು.೬೭
೫. ಅದೇ	,,	ಪು.೬೮
೬. ಅದೇ	,,	ಪು.೭೬.೭೭
೭. ಅದೇ	,,	ಪು.೧೩
೮. ಅದೇ	,,	ಪು.೧೪
೯. ಅದೇ	,,	ಪು.೪೨
೧೦. ಅದೇ	,,	ಪು.೪೫
೧೧. ಅದೇ	,,	ಪು.೫೯
೧೨. ಅದೇ	,,	ಪು.೫೯.೬೦
೧೩. ಅದೇ	,,	ಪು.೬೦.೬೧
೧೪. ಅದೇ	,,	ಪು.೬೪

ಅಧ್ಯಾಯ – ಐದು

ವಾಲ್ಮೀಕಿಯಲ್ಲಿನ ಸಂಘಟನೆ ಮತ್ತು ರಾಜಕಾರಣ

ಅಧ್ಯಾಯ – ೫
ವಾಲ್ಮೀಕಿಯಲ್ಲಿನ ಸಂಘಟನೆ ರಾಜಕಾರಣ

ಸಂಘಟನೆ ಮತ್ತು ರಾಜಕಾರಣ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಎಲ್ಲಿ ಸಂಘಟನೆ ಇರುತ್ತದೆಯೋ ಸಾಮಾನ್ಯವಾಗಿ ಅಲ್ಲಿ ರಾಜಕಾರಣ ಕಾರ್ಯನಿರ್ವಹಿಸುತ್ತಿರುತ್ತದೆ. ಸಂಘಟನೆ ಮತ್ತು ರಾಜಕಾರಣಗಳನ್ನು ತನ್ನ ಹಿಡಿತದಲ್ಲಿ ಇಟ್ಟುಕೊಂಡು ಮುಂದುವರೆಯುವುದು ಧರ್ಮ. ಹಾಗಾಗಿ ಈ ಅಧ್ಯಯನದಲ್ಲಿ 'ವಾಲ್ಮೀಕಿ'ಯಲ್ಲಿನ ಸಂಘಟನೆ ಮತ್ತು ರಾಜಕಾರಣ, ಸಂಘಟನೆ ಮತ್ತು ಧರ್ಮ, ಹಾಗೂ ಸಂಘಟನೆ ಮತ್ತು ಪತ್ರಿಕೆಯ ಕುರಿತು ಈ ಅಧ್ಯಯನದಲ್ಲಿ ಚರ್ಚಿಸಲಾಗಿದೆ.

೫.೧. ಸಂಘಟನೆ ಮತ್ತು ರಾಜಕಾರಣ :

ಸಾಮಾಜಿಕ ಕಾರ್ಯಕರ್ತರಾಗಿ ಗಸ್ತಿಯವರು ತಮ್ಮ ಸಮುದಾಯದ ಸಂಘಟನೆಗೆ ತೊಡಗಿದರು. ಸಮುದಾಯದ ಸಂಘಟನೆಗೆ ಸಂಬಂಧಿಸಿದಂತೆ ಆತ್ಮಕಥೆಯಲ್ಲಿ ಅನೇಕ ಪ್ರಸಂಗಗಳು ವ್ಯಕ್ತವಾಗಿವೆ. ಸಂಘಟನೆಗೆ ಪ್ರೇರಣೆಯೇನು ಎಂಬುದನ್ನು ಈ ಪ್ರಸಂಗದ ಮೂಲಕ ತಿಳಿಯೋಣ:

"ಕಳೆದ ಎರಡನೂರು ವರ್ಷಗಳಲ್ಲಿ ಇಂಗ್ಲಿಷ್‌ರು ಬೇಡರನ್ನು ಗುಲಾಮಗಿರಿಗೆ ತಳ್ಳಿದರು. ಅವರನ್ನು ಕ್ರಿಮಿನಲ್ ಜನಾಂಗವೆಂಬ ಹಣೆಪಟ್ಟಿ ಕಟ್ಟಿ ಮುಖ್ಯ ವಾಹಿನಿಯಿಂದ ದೂರಸರಿಸಿದರು. ಪ್ರತಿಭಟನೆ ಮಾಡಿದರೆ ನಾಲಿಗೆ ಕತ್ತರಿಸಿದರು. ಅವರ ಸ್ವಾತಂತ್ರ್ಯಕ್ಕೆ ಸಂಚಕಾರ ತಂದರು. ಅಲ್ಲಿಂದ ಇಲ್ಲಿಯವರೆಗೆ ಈ ಜನರು ನಾಯಿ–ನರಿಗಳಂತೆ ಜೀವಿಸುತ್ತಿದ್ದಾರೆ. ತಮ್ಮ ಭವ್ಯ ಇತಿಹಾಸವನ್ನು ಮರೆತು ಈ ಜನರು ಬಿಕಾರಿಯಂತೆ, ಕಳ್ಳರಂತೆ, ದರೋಡೆಕೋರರಂತೆ ಬದುಕುತ್ತಿದ್ದಾರೆ. ಈ ನನ್ನ

ಜನರಿಗಾಗಿ ನಾನು ಏನಾದರೂ ಮಾಡಬೇಕೆಂಬ ತೀವ್ರ ಇಚ್ಛೆಯಾಗಹತ್ತಿತ್ತು. ಈ ಜನರು ಇತರರಂತೆ ಸ್ವಾಭಿಮಾನದಿಂದ ಬದುಕಬೇಕು. ಅವರಿಗೂ ಸಮಾಜದಲ್ಲಿ ಗೌರವ ಸಿಗಬೇಕೆಂಬ ಆಸೆ ಆಗಹತ್ತಿತು. ಕಳ್ಳಕಾಕರಂತೆ ಬದುಕಿತ್ತಿರುವ ಈ ಜನರನ್ನು ಒಂದೆಡೆ ಹೇಗೆ ತರಲಿ ಮತ್ತು ಅವರಿಗೆ ಅರಿವಿನ ಹಾದಿ ಹೇಗೆ ತೋರಿಸಲಿ ಎಂಬ ಚಡಪಡಿಕೆ ಆರಂಭವಾಯಿತು. ಈ ಜನರು ನನ್ನ ಮಾತನ್ನು ಕೇಳುತ್ತಾರೋ ಎಂಬ ಅನುಮಾನ ಕಾಡಹತ್ತಿತ್ತು. ಹೇಗಾದರೂ ಮಾಡಿ ಇವರನ್ನು ಸಂಘಟಿಸಬೇಕು. ಇವರಲ್ಲಿ ಹೊಸ ಜೀವನದ ಹಾಡು ಸ್ಮರಿಸಬೇಕೆಂದು ನಿರ್ಧರಿಸಿದೆ."೧

ಈ ಮಾತುಗಳು ಜನಾಂಗದ ಹೀನಾಯ ದುಸ್ಥಿತಿಯನ್ನು ಮಾತ್ರ ಹೇಳುತ್ತಿಲ್ಲ ಜತೆಗೆ ಸಂಘಟಿಸಬೇಕೆಂಬ ಲೇಖಕರ ಚಡಪಡಿಕೆಯನ್ನೂ ಸೂಚಿಸುತ್ತಿವೆ. ವಾಲ್ಮೀಕಿ ಸಮುದಾಯದ ಈ ಸ್ಥಿತಿಗತಿಗೆ ಕಾರಣ ಹುಡುಕುತ್ತಾ ಹೋದರೆ ಕಾಣುವ ಸತ್ಯವೆಂದರೆ ಪಾಶ್ಚಾತ್ಯರು ಭಾರತಕ್ಕೆ ಬಂದು ತಳವೂರಿ ನಂತು ಆಡಳಿತದ ಚುಕ್ಕಾಣಿ ಹಿಡಿದಿದ್ದು ಹಾಗೂ ಸಮಾಜದ ಅನೇಕ ತಳ ಸಮುದಾಯಗಳನ್ನು ಅದರಲ್ಲೂ ವಾಲ್ಮೀಕಿ ಸಮುದಾಯವನ್ನು ಕ್ರಿಮಿನಲ್ ಜನಾಂಗವೆಂದು ಬ್ರಿಟಿಷ್ ಸರ್ಕಾರ ಘೋಷಿಸಿದ್ದು.

ಬ್ರಿಟಿಷರ ಈ ಘೋಷಣೆಗೆ ಕಾರಣ ಇಷ್ಟೆ. ಅವರ ಸರ್ಕಾರವೆ ವಿಧಿಸುವ ಸುಂಕ, ತೆರಿಗೆಗಳನ್ನು ಕಟ್ಟಲು ಈ ಸಮುದಾಯದ ಜನರುಗಳಿಂದ ಆಗದಿರುವುದು. ಬ್ರಿಟಿಷರು ತಂದ 'ಅರಣ್ಯ ಸಂರಕ್ಷಣಾ' ಕಾಯ್ದೆ ಬೇಡರನ್ನು ಕಂಗಾಲು ಮಾಡಿತು ಜೊತೆ ಜೊತೆಗೆ ಬ್ರಿಟಿಷರು ಸಿದ್ಧ ಉಡುಪುಗಳಿಗೆ ಭಾರತವನ್ನು ಮಾರುಕಟ್ಟೆಯನ್ನಾಗಿ ಮಾಡಿಕೊಂಡರು. ಅದರಿಂದಾಗಿ ತಳಸಮುದಾಯದ ಆರ್ಥಿಕ ಪ್ರಾಬಲ್ಯಕ್ಕೆ ಕಾರಣವಾಗಿದ್ದ ಕುಲಕಸುಬುಗಳು, ಗುಡಿಕೈಗಾರಿಕೆಗಳು ನೆಲ ಕಚ್ಚಿದವು. ಮಾಡಲು ಕೆಲಸವಿಲ್ಲದೆ. ಇತ್ತ ಕೃಷಿ ಭೂಮಿಯೂ ಇಲ್ಲದೆ ಜನರು ಕೆಲಸವಿಲ್ಲದೆ ತಿರುಗಹತ್ತಿದರು. ಅವರು ಆಹಾರಕ್ಕಾಗಿ ದಾರಿಹೋಕರನ್ನು, ದರೋಡೆ, ಸುಲಿಗೆ ಮಾಡಲು ಮುಂದಾದರು. ಇವರ ಸ್ಥಿತಿಗತಿಗಳನ್ನು ಅವಲೋಕಿಸಿ ಬ್ರಿಟಿಷ್ ಸರ್ಕಾರ ಆ ಸಮುದಾಯಕ್ಕೆ ಬೇಕಾದ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳದೇ ಕ್ರಿಮಿನಲ್ ಜನಾಂಗವೆಂಬ ಹಣೆಪಟ್ಟಿಯನ್ನು ಕಟ್ಟಿತು. ಇಷ್ಟಲ್ಲದೆ ಪೊಲೀಸ್ ದೌರ್ಜನ್ಯ, ಹಿಂಸಾಚಾರ, ಅತ್ಯಾಚಾರಗಳು ನಡೆಯಹತ್ತಿದವು. ಇದನ್ನು ಕಂಡುಂಡ ಕೆಲವು ಅಕ್ಷರಸ್ಥ ಪ್ರಜ್ಞಾವಂತರು ಅನಿವಾರ್ಯವಾಗಿ ವಾಲ್ಮೀಕಿ ಸಮುದಾಯದ ಜನರ ಸಂಘಟನೆಗೆ ತೊಡಗಿದರು. ಆದರೆ ಸಂಘಟಿಸುವುದು ಸುಲಭದ ಮಾತಾಗಿರಲಿಲ್ಲ. ಅದನ್ನು ಗಸ್ತಿಯವರು ತಮ್ಮ ಮಾತುಗಳಲ್ಲೆ ಹೀಗೆ ಹೇಳಿದ್ದಾರೆ.

"ನಾನು ಪದವೀಧರನಾಗಿದ್ದರೂ ಸಂಘಟನೆಯ ಬಗ್ಗೆ ಏನೇನೂ ಗೊತ್ತಿರಲಿಲ್ಲ. ಅದಲ್ಲದೆ ಹೈದ್ರಾಬಾದ್ ಯುನಿವರ್ಸಿಟಿಯಲ್ಲಿ ನನಗೆ ಒಳ್ಳೆಯ ನೌಕರಿ ಸಿಗಲಿತ್ತು. ನಾನು ನಾಲ್ಕಾರು ದಿನಗಳಲ್ಲಿ ವಾಪಸ್ಸು ಹೈದ್ರಾಬಾದಿಗೆ ಹೋಗಬೇಕೆಂದು ಯೋಚಿಸಿದ್ದೆ"೨ ಗಸ್ತಿಯವರ ಈ ಮಾತನ್ನು ಗಮನಿಸಿದಾಗ ಸಮುದಾಯದ ಹಿತಕ್ಕಾಗಿ ವ್ಯಕ್ತಿ ತನ್ನ ಸ್ವಹಿತ ತ್ಯಾಗ ಮಾಡುವ ದಿಟ್ಟತನ ತೊರುವುದು ತಿಳಿಯುತ್ತದೆ.

ಸಮುದಾಯಗಳ ಸಂಘಟನೆಗೆ ಯಾವುದೇ ಮಾನದಂಡವಿಲ್ಲವಾದರೂ ಸಂಘಟಿಸುವವರು ಆಧುನಕ ಯುಗಕ್ಕೆ ತಕ್ಕಂತೆ ಪ್ರಗತಿಪರ ಮನೋಧರ್ಮದವರಾಗಿದ್ದು ಸರಳ ಜೀವನ, ಘನ ವ್ಯಕ್ತಿತ್ವದ ಜೊತೆಗೆ ಜನರಲ್ಲಿ ಬೆರೆಯುವಂತಹ ಸ್ವಭಾವವನ್ನು ಮೈಗೂಡಿಸಿಕೊಂಡು ಇರಬೇಕು. ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದಲ್ಲಿ ಗಾಂಧಿಜೀಯವರು ಸಹ ಹೀಗೆ ತಮ್ಮ ಮೇರು ವ್ಯಕ್ತಿತ್ವ ಹಾಗೂ ಮಾತಿನ ಮೂಲಕ ಜನರ ಮನಸ್ಸನ್ನು ಸೂರೆಗೊಂಡಿದ್ದರು. ಹಾಗಾಗಿ ಜನ ಸಂಘಟನೆಗೊಂಡು ಭಾರತ ಸ್ವತಂತ್ರವಾಯಿತು. ದಲಿತರ ವಿಮೋಚನಾ ಚಳುವಳಿಯಲ್ಲಿ ಡಾ. ಅಂಬೇಡ್ಕರ್ ಅವರೂ ಸಹ ಇಂಥ ದಿಟ್ಟ ಮತ್ತು ವಿವೇಚನಾಯುತ ವ್ಯಕ್ತಿತ್ವ ಹೊಂದಿದ್ದರು. ಇದರಿಂದ ದಲಿತರ ಸಂಘಟನೆ ಮತ್ತು ಜಾಗೃತಿ ಸಾಧ್ಯವಾಯಿತು. ಹೀಗೆ ಗಸ್ತಿಯವರು ಸಹ ಆರಂಭಿಕ ನಲುವಿನಲ್ಲಿ ನಂತು, ಯೋಚಿಸಿ ಸಾಮಾಜಿಕ ಕಾರ್ಯಕರ್ತರಾಗಲು ತಯಾರಿಯನ್ನು ಮಾಡಿಕೊಂಡು ನಂತರ ಅವರು ಚಳುವಳಿಗೆ, ಹೋರಾಟಕ್ಕೆ ಧುಮುಕ್ಕುತ್ತಾರೆ. ಅದಕ್ಕಾಗಿ ಅವರು ಹಳ್ಳಿಗಳಲ್ಲಿ ಯುವಕರನ್ನು ಸೇರಿಸಿಕೊಂಡು ಸಂಘಗಳನ್ನು ಕಟ್ಟುತ್ತಾರೆ.

ಈ ಸಂಘಗಳ ಕಾರ್ಯವೈಖರಿಯ ಬಗ್ಗೆ ಆತ್ಮಕಥೆಯಲ್ಲಿ ಹೀಗೆ ವ್ಯಕ್ತವಾಗಿದೆ: "ಸುರಕ್ಷಾ ಸಂಘವು ರಾತ್ರಿಯಿಡೀ ಬೇಡರ ವಸ್ತಿಯಲ್ಲಿ ಗಸ್ತು ತಿರುಗುತ್ತಿತ್ತು. ಇದರಿಂದ ಕಳವು, ದರೋಡೆಗಳು ಮಾಯವಾದವು. ನಮ್ಮ ಸಂಘದಲ್ಲಿ ಮೂವತ್ತು-ನಲತ್ತು ಯುವಕರಿದ್ದರು. ಐದಾರು ಯುವಕರು ಒಂದೊಂದು ಗುಂಪು ತಯಾರಿಸಿ ರಾತ್ರಿ ಹತ್ತರಿಂದ ನಸುಕಿನ ಐದು ಗಂಟೆಯವರೆಗೆ ಗಸ್ತು ತಿರುಗುತ್ತಿದ್ದೆವು"[3] ಗಸ್ತಿಯವರ ಈ ಮಾತುಗಳನ್ನು ಅವಲೋಕಿಸಿದಾಗ ಸಮುದಾಯ ಸಂಘಟನೆಯು ಒಂದು ಸವಾಲಾಗಿ ಪರಿಣಮಿಸಿರುವ ಹಾಗೂ ಕಾರ್ಯ ನಿರ್ವಹಿಸಿರುವ ಕಷ್ಟವನ್ನು ನೋಡಬಹುದು.

ಸಂಘಟನೆಗೆ ತೊಡಗಿದ ಯಾವುದೇ ವ್ಯಕ್ತಿ ಮೊದಲು ಸಂಘಕ್ಕೆ ಬೇಕಾದ ಸದಸ್ಯರನ್ನು ಆರಿಸಿಕೊಂಡು ಅವರಿಗೆ ತಿಳಿಹೇಳಿ ಸದಸ್ಯರಾಗಿಸಿಕೊಂಡು ಕಾರ್ಯ ಚಟುವಟಿಕೆಗಳನ್ನು ಕೈಗೊಳ್ಳಬಹುದು. ಬ್ರಿಟಿಷರು ಹೇರಿದ್ದ ಕ್ರಿಮಿನಲ್ ಜನಾಂಗ ಎನ್ನುವ ಹಣೆಪಟ್ಟಿಯಿಂದ ಯಾರೇ ಕಳ್ಳತನ ಮಾಡಿದರೂ ಅದು ಬೇಡರ ಮೇಲೆ ಬರುತ್ತಿತ್ತು. ಆದ್ದರಿಂದ ಕಳ್ಳತನಗಳೇ ಕಡಿಮೆಯಾಗಲೆಂದು 'ಸುರಕ್ಷಾ ಸಂಘ' ಸ್ಥಾಪಿಸಿಕೊಂಡು ಹಳ್ಳಿಯ ಯುವಕರನ್ನು ಸಂಘಟಿಸುವ ಕಾರ್ಯವನ್ನು ಗಸ್ತಿಯವರು ಮಾಡುತ್ತಿದ್ದರು. ಹೀಗೆ ಕಾರ್ಯ ಚಟುವಟಿಕೆಗಳು ನಡೆಯುತ್ತಿರಲು ಊರಿನಲ್ಲಿ ಒಂದು ಅಹಿತಕರ ಘಟನೆಯೊಂದು ನಡೆಯುತ್ತದೆ. ಅದುವೇ 'ಭಾಗಿಯ ಪ್ರಕರಣ'. ಈ ಪ್ರಕರಣದ ಪರಿಣಾಮ ಆತ್ಮಕಥೆಯಲ್ಲಿ ಹೀಗೆ ವ್ಯಕ್ತವಾಗಿದೆ:

"ಭಾಗಿಯ ಪ್ರಕರಣದಿಂದ ಊರು ಮತ್ತು ಊರಲ್ಲಿನ ಬೇಡರು ಇಬ್ಭಾಗಗೊಂಡರು. ಊರಿನಲ್ಲಿ ದಿನಂಪ್ರತಿ ಮಾರಾಮಾರಿಗಳು ಶುರುವಾದವು. ನಮ್ಮ ಸಂಘದಲ್ಲಿಯೂ ಎರಡು

ಭಾಗಗಳಾದವು. ಒಂದಿಷ್ಟು ಜನ ಸಂಘ ಬಿಟ್ಟು ಹೋದರು. ಇವರನ್ನು ಮತ್ತೆ ಒಂದು ಮಾಡಬೇಕೆಂದು ನಿರ್ಧರಿಸಿದೆ. ಸರಪಂಚರ ಹತ್ತಿರ ದಂಡದ ಒಂದೂವರೆ ಸಾವಿರ ರೂಪಾಯಿ ಜಮೆ ಇತ್ತು, ಈ ಹಣದಿಂದ ವಾಚನಾಲಯ ಆರಂಭಿಸಬೇಕೆಂಬ ಯೋಚನೆ ಬಂತು. ಸರಪಂಚರ ಕಡೆಗೆ ಹೋಗಿ ಈ ವಿಚಾರ ಅವರಿಗೂ ಸರಿಯೆನ್ನಸಿತು"[೪]

ಗಸ್ತಿಯವರ ಈ ಮಾತುಗಳನ್ನು ಗಮನಸಿದಾಗ ಸಂಘಟನೆ ಎಷ್ಟೇ ಗಟ್ಟಿಯಾಗಿದ್ದರೂ ಒಮ್ಮೊಮ್ಮೆ ವಿಪರ್ಯಾಸವೆಂಬಂತೆ ಬಾಗಿಯಂತಹ ಪ್ರಕರಣಗಳಿಂದಲೋ ಮತ್ತೊಂದು ಪ್ರಸಂಗದಿಂದಲೋ ಇಭ್ಭಾಗವಾಗುವುದು ಸಹಜ. ಆದರೆ ಅದನ್ನು ಒಟ್ಟುಗೂಡಿಸುವಲ್ಲಿ ಸಂಘಟಕನ ಜವಾಬ್ದಾರಿ ಹೆಚ್ಚಿರುತ್ತದೆ. ಅದಕ್ಕಾಗಿ ಗಸ್ತಿಯವರು ವಾಚನಾಲಯ ತೆರೆದರೆ ಅರೆಬರೆ ಓದಿದವರು ದಿನಪತ್ರಿಕೆ ಮುಂತಾದವುಗಳನ್ನು ಓದಿ ತಿಳಿದುಕೊಂಡು ಮತ್ತೆ ಸಂಘಟನೆಯತ್ತ ಮುಖ ಮಾಡುತ್ತಾರೆ. ಬೇರೆಯಾದರೂ ವಾಚನಾಯಲದ ಮುಖಾಂತರ ಒಟ್ಟುಗೂಡುತ್ತಾರೆ ಎಂದು ಆಲೋಚಿಸುತ್ತಾರೆ. ಇಷ್ಟಲ್ಲದೆ ವಸ್ತಿಯ ಜನರನ್ನು ಸಂಘಟಿಸಲು ಅವರು ನಾನಾ ರೀತಿಯ ಕಾರ್ಯಕ್ರಮಗಳನ್ನು ಯೋಜಿಸುತ್ತಾರೆ. ಅವುಗಳಲ್ಲಿ ಅಂಬೇಡ್ಕರ್ ಜಯಂತಿಯೂ ಒಂದು. ಇದರ ಬಗ್ಗೆ ಅವರೇ ಹೇಳಿಕೊಂಡಿರುವ ರೀತಿಯಲ್ಲಿ ನೋಡೋಣ:

"ಈ ಹಿಂದೆ ನಾನು ಅಂಬೇಡ್ಕರ್ ಜಯಂತಿಯನ್ನು ಊರಿನಲ್ಲಿ ಆಯೋಜಿಸುತ್ತಿದ್ದೆ. ಊರಲ್ಲಿ ಒಬ್ಬನೇ ಒಬ್ಬ ಹೊಲೆಯ ಇರಧಿದ್ದರೂ ನಾವು ಅಂಬೇಡ್ಕರ್ ಜಯಂತಿಯನ್ನು ಶ್ರದ್ಧೆ-ಭಕ್ತಿಯಿಂದ ಆಚರಿಸುತ್ತಿದ್ದೆವು. ಹೊರಗಿನಂದ ಒಂದಿಬ್ಬರು ಭಾಷಣಕಾರರನ್ನು ಕರೆಸುತ್ತಿದ್ದೆವು. ಇದೇ ಕಾಲಕ್ಕೆ ಬೇಡರಲ್ಲಿ ಜಾಗೃತಿಯನ್ನು ಉಂಟುಮಾಡುವ ಶಿಬಿರಗಳನ್ನು ಆಯೋಜಿಸಿದೆ. ಹೊರ ಊರುಗಳ ಬೇಡರೂ ಇದರಲ್ಲಿ ಭಾಗಿಯಾಗಿದ್ದರು. ಬೇಡರಲ್ಲಿ ಜಾಗೃತಿಯ ಸೂರ್ಯ ಸಾವಕಾಶವಾಗಿ ಉದಯಿಸುತ್ತಿದ್ದ"[೫] ಗಸ್ತಿಯವರ ಮಾತಿನ ಈ ಪ್ರಸಂಗ ಬೇಡರ ಜಾಗೃತಾವಸ್ಥೆಗೆ ಬಂದ ರೀತಿಯನ್ನು ಹೇಳುತ್ತದೆ. ಅಲ್ಲದೆ ಸಂಘಟನೆ ಯಾವಾಗಲೂ ಕ್ರಿಯಾಶೀಲಗೊಳ್ಳಬೇಕಾದರೆ, ಸಂಘಟನೆಗೊಂದು ಶಕ್ತಿ ಬೇಕಾದರೆ ರಾಷ್ಟ್ರ ನಾಯಕರ ಜಯಂತಿ, ಹಬ್ಬ-ಹರಿದಿನಗಳ ಆಚರಣೆ ಮಾಡುವುದು ಒಂದು ಉಪಾಯ ಇದರಿಂದ ಸಂಬಂಧಪಟ್ಟವರು ಪಡದವರೂ ಸಂಘಟನೆಯಲ್ಲಿ ಸೇರಿಕೊಳ್ಳುವರು. ಆಗ ಪ್ರಭಾವಶಾಲಿ ವ್ಯಕ್ತಿಗಳ ಮಾತುಗಳಿಂದ ಪ್ರಭಾವಿತರಾಗುತ್ತಾರಲ್ಲದೆ ಹೊಸ ಪ್ರಪಂಚಕ್ಕೆ ತಮ್ಮನ್ನು ಅಣಿಗೊಳಿಸಿಕೊಂಡು ಸಂಘಟನೆ ಪ್ರಬಲಗೊಳ್ಳಲು ಸಾಧ್ಯವಾಗುತ್ತದೆ.

ಭಾರತ ಸ್ವಾತಂತ್ರ್ಯ ಪೂರ್ವದಲ್ಲಿ ಸಂಘಟನೆಗಾಗಿ ಬಾಲಗಂಗಾಧರ ತಿಲಕ್‌ರವರು ಗಣೇಶ ಚತುರ್ಥಿಯನ್ನು ಆಚರಿಸಲು ದೇಶದಾದ್ಯಂತ ಕರೆ ನೀಡಿ, ಬ್ರಿಟಿಷರ ವಿರುದ್ಧ ಭಾರತೀಯರನ್ನು ಸಂಘಟಿಸಲು ಮುಂದಾದರು. ಇಲ್ಲಿಯು ಸಹ ಗಸ್ತಿಯವರು ಶಿಬಿರಗಳನ್ನು ಮತ್ತು ಜಯಂತಿಗಳನ್ನು

ಆಚರಿಸುವುದರ ಮೂಲಕ ಸಂಘಟನೆ ಬಲಗೊಳಿಸಿಕೊಂಡರು. ಅಲ್ಲದೆ ಅವರು ಬೇಡರ ಜನಾಂಗದ ಒಂದು ಬೃಹತ್ ಸಮ್ಮೇಳನ ನಡೆಸಲು ಕೈ ಹಾಕಿದರು. ಇದರ ಹಿನ್ನೆಲೆಯನ್ನು ಅವರೇ ಉಲ್ಲೇಖಿಸಿರುವ ಈ ಮಾತುಗಳನ್ನು ನೋಡೋಣ:

"ಬೇಡ ಜನಾಂಗದ ಒಂದು ಬೃಹತ್ ಸಮ್ಮೇಳನಗಳನ್ನು ಕರೆಯಬೇಕೆಂದು ಯೋಜಿಸಿದ್ದೆ. ಸಮ್ಮೇಳನದಲ್ಲಿ ಬೇಡರ ಸಮಸ್ಯೆಗಳನ್ನು ಚರ್ಚಿಸಿ ಅವುಗಳನ್ನು ಹೇಗೆ ಗೆಲ್ಲಬೇಕೆಂಬ ಯೋಜನೆಗಳನ್ನು ರೂಪಿಸಬೇಕಾಗಿತ್ತು, ಸಮ್ಮೇಳನಕ್ಕೆ ಬರಬೇಕೆಂದು ಕರ್ನಾಟಕದಲ್ಲಿನ ಅನೇಕ ಬೇಡ ಜನಾಂಗದ ಹಿರಿಯರಿಗೆ, ರಾಜಕಾರಣಿಗಳಿಗೆ, ನಾಯಕರುಗಳಿಗೆ ಪತ್ರ ಬರೆದೆ"[೬]

ಪ್ರಜ್ಞಾವಂತ ಸಾಮಾಜಿಕ ಕಾರ್ಯಕರ್ತನೊಬ್ಬ ಅಕ್ಷರಸ್ಥನಾಗಿದ್ದಾಗ ಮಾತ್ರ ರಾಜ್ಯಮಟ್ಟದ ಜಿಲ್ಲಾಮಟ್ಟದ ಸಮ್ಮೇಳನಗಳನ್ನು ಮಾಡಲು ಸಾಧ್ಯ. ಆಳುವ ಪ್ರಭುತ್ವ ಮತ್ತು ಶೋಷಕ ವರ್ಗಗಳಿಗೆ ಎದುರೇಟು ನೀಡಲು ತಳಸಮುದಾಯಗಳ ಒಕ್ಕೊರಲಿನ ಧ್ವನಿ ಬೇಕಾಗಿತ್ತು. ಆದ್ದರಿಂದ ಈತರಹದ ಸಮ್ಮೇಳನಗಳು ಸಹ ಅವಶ್ಯಕ. ಹಲವು ಸಮ್ಮೇಳನಗಳಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನವೂ ಒಂದು. ಪ್ರತಿವರ್ಷ ಕನ್ನಡದ ಭಾಷೆ, ನೆಲ, ಜಲಗಳಿಗೆ ಸಂಬಂಧಿಸಿದಂತೆ, ಕರ್ನಾಟಕವನ್ನು ಕುರಿತು ಚರ್ಚಿಸುತ್ತಿರುವಂತೆ ಬೇಡರ ಸ್ಥಿತಿಗತಿಗಳನ್ನು ಚರ್ಚಿಸಲು ಸಮ್ಮೇಳನಗಳನ್ನು ಗಸ್ತಿಯವರು ಆಯೋಜಿಸುತ್ತಾರೆ. ಪ್ರಜ್ಞಾಪೂರ್ವಕ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಂಡು ಬೇಡರನ್ನು ಸಂಘಟಿಸುತ್ತಾರೆ. ನಗರಗಳಲ್ಲಿ ಹೆಚ್ಚಾಗಿ ಅಕ್ಷರಸ್ಥರಿರುತ್ತಾರೆ. ಅವರಿಗೆ ಸಮಕಾಲಿನ ವಿಚಾರಗಳ ಅರಿವು ಇರುತ್ತದೆ. ಅವರನ್ನು ಸಂಘಟಿಸುವುದು ದೊಡ್ಡ ಮಾತೇನಲ್ಲ. ಆದರೆ ಹಳ್ಳಿಯ ಅನಕ್ಷರಸ್ಥ ಜನರನ್ನು ಸಂಘಟಿಸುವುದು ಬಹುದೊಡ್ಡ ಸವಾಲೇ ಸರಿ. ಅದರ ಕಷ್ಟವನ್ನು ಗಸ್ತಿಯವರು ತಮ್ಮ ಮಾತುಗಳಲ್ಲಿ ಹೀಗೆ ವಿವರಿಸುತ್ತಾರೆ.

"ಗ್ರಾಮೀಣ ಭಾಗದಲ್ಲಿ ಬೇಡರ ಸಂಖ್ಯೆ ಅಧಿಕ. ಅವರು ವಾಸವಾಗಿರುವುದು ಕಗ್ಗಾಡಿನಲ್ಲಿಯೇ ಮೂಲಭೂತ ಸೌಕರ್ಯಗಳೆಂದರೇನೆಂಬುದೇ ಅವರಿಗೆ ಗೊತ್ತಿರಲಿಲ್ಲ. ಈ ಜನರಲ್ಲಿ ಜಾಗೃತಿ ಮೂಡಿಸುವುದು ಕಷ್ಟಸಾಧ್ಯವಾಗಿದ್ದರೂ, ಕನಿಷ್ಟ ಅವರಲ್ಲಿ ಪ್ರಜ್ಞೆಯನ್ನಾದರೂ ಹುಟ್ಟಿಸಬೇಕೆಂದು ದಡ್ಡಿಯಲ್ಲಿ ಬೇಡರ ಒಂದು ಸಮ್ಮೇಳನವನ್ನು ಆಯೋಜಿಸಬೇಕೆಂದು ನಿರ್ಧರಿಸಿದೆ. ದಡ್ಡಿಯ ಸುತ್ತಮುತ್ತ ಚಂದಗಡ, ಗಡಹಿಂಗ್ಲಜ, ಬೆಳಗಾವಿ, ಹುಕ್ಕೇರಿ ಈ ತಾಲೂಕುಗಳಿದ್ದವು. ಇಲ್ಲಿರುವ ಬೇಡರಿಗೆ ದಡ್ಡಿಗೆ ಬರಲು ಅನುಕೂಲವಾಗಿದ್ದರಿಂದ ದಡ್ಡಿಯನ್ನೇ ಸಮ್ಮೇಳನದ ಸ್ಥಳವೆಂದು ಗುರುತಿಸಿದ್ದೆ. ಈ ಭಾಗದ ಬೇಡರು ಕರ್ನಾಟಕ, ಮಹಾರಾಷ್ಟ್ರ ರಾಜ್ಯಗಳಲ್ಲಿ ಹಂಚಿ ಹೋಗಿದ್ದರು. ಅವರನ್ನೆಲ್ಲ ಒಂದೆಡೆ ಸೇರಿಸಿ ಅವರ ಸಮಸ್ಯೆಗಳಿಗೆ ಧ್ವನಿ ನೀಡಬೇಕಾಯಿತು."[೭]

ಭಾರತ ಹಳ್ಳಿಗಳ ದೇಶ. ಹಾಗಾಗಿ ಭಾರತ ಸ್ವಾತಂತ್ರ್ಯಗೊಂಡ ಮೇಲೆ ಕರ್ನಾಟಕದಂತಹ ಹಲವಾರು ರಾಜ್ಯಗಳು ಒಂದು ಕೇಂದ್ರ ಒಕ್ಕೂಟದ ಆಡಳಿತಕ್ಕೊಳಪಟ್ಟವು. ಅಲ್ಲದೆ ೧೯೫೬ರಲ್ಲಿ ಭಾಷಾವಾರು ಪ್ರಾಂತ್ಯ ವಿಂಗಡಣೆಗೊಂಡು ಕರ್ನಾಟಕ ಏಕೀಕರಣಗೊಂಡಿತು. ಆಗ ಉತ್ತರ ಕರ್ನಾಟಕವು ಮುಂಬೈ, ಮದ್ರಾಸ್, ಹೈದ್ರಾಬಾದ್ ಪ್ರಾಂತ್ಯಗಳಿಂದ ಕೆಲವು ಪ್ರದೇಶಗಳು ಕರ್ನಾಟಕದಲ್ಲಿ ವಿಲೀನವಾದವು. ವಿಲೀನವಾದ ಪ್ರದೇಶಗಳು ಹಿಂದುಳಿದಿದ್ದು, ಬೇಡ ಸಮುದಾಯದ ಜನಸಂಖ್ಯೆ ಹೆಚ್ಚಾಗಿದ್ದಿತು. ಹಾಗಾಗಿ ಗಸ್ತಿಯವರು ಮೊದಲು ಹಳ್ಳಿಗಳಲ್ಲಿಯ ಬೇಡರನ್ನು ಸಂಘಟಿಸಲು ಹಾಗೂ ದಡ್ಡಿಯಲ್ಲಿ ಸಮ್ಮೇಳನ ನಡೆಸಲು ಮುಂದಾದರು. ಆದರೆ ಇದಕ್ಕೆ ರಾಜಕಾರಣದ ನಂಟು ಬಿಡಲಿಲ್ಲ. ಅದರ ಪ್ರಭಾವ ಮತ್ತು ಪರಿಣಾಮವನ್ನು ಗಸ್ತಿಯವರೆ ವರ್ಣಿಸುವ ಪ್ರಸಂಗದ ಮೂಲಕ ತಿಳಿಯ ಬಹುದು:

"ಮಾಮಿಯ ನಿಧನದ ಕಾರಣವಾಗಿ ನಾನು ಹೈದ್ರಾಬಾದಿಗೆ ಹೋಗಿರಲಿಲ್ಲ. ದಡ್ಡಿಯಿಂದ ಯಮನಾಪುರಕ್ಕೆ ಬಂದೆ. ನಾನು ಊರಿನಲ್ಲಿರುವುದು ನನ್ನ ವಿರೋಧಿಗಳಿಗೆ ಅಪಥ್ಯವೆನಸಿತು. ನಾನು ದಲಿತ ಪ್ಯಾಂಥರಿನವ, ಇಂದಿರಾ ಗಾಂಧಿಯ ವಿರುದ್ಧವಾಗಿ ಜನರನ್ನು ದಂಗೆ ಎಬ್ಬಿಸಲು ಪ್ರಯತ್ನಿಸುತ್ತಿದ್ದೇನೆ ಎಂದು ಪೊಲೀಸರಿಗೆ ತಿಳಿಸಿದರು. ನನಗೆ ಈ ಯಾವ ವಿಷಯಗಳೂ ಗೊತ್ತಿರಲಿಲ್ಲ. ಹೈದ್ರಾಬಾದಿಗೆ ಹೋಗಿ ನಾನೊಬ್ಬನೇ ಸುಖವಾಗಿ ಇರಬಹುದಾಗಿತ್ತು. ಆದರೆ ಮನೆಯ ಪರಿಸ್ಥಿತಿ ನೋಡಿ ನಾನು ಊರಲ್ಲಿಯೇ ಇರಲು ನಿಶ್ಚಯಿಸಿದ್ದೆ. ಹೈದ್ರಾಬಾದಿನ ನನ್ನ ನೌಕರಿಗೆ ರಾಜಿನಾಮೆ ಕಳಿಸಿಕೊಟ್ಟೆ. ನಾನು ರಾಜಿನಾಮೆ ಕೊಟ್ಟಿರುವ ವಿಷಯ ವಿರೋಧಿಗಳಿಗೆ ಗೊತ್ತಾಗಿ ಅವರು ಪೊಲೀಸರಿಗೆ ಈತ ಖಂಡಿತವಾಗಿಯೂ ಇಂದಿರಾಗಾಂಧಿಯ ವಿರುದ್ಧ ಹೋರಾಡಲು ಊರಿಗೆ ಬಂದಿದ್ದಾನೆ. ಇವನ ಬಂದೋಬಸ್ತ್ ಮಾಡಿ ಎಂದು ಒತ್ತಡ ತಂದರು. ಪೊಲೀಸರು ನನ್ನನ್ನು ಕರೆಯಿಸಿದಾಗ ಈ ಯಾವ ಸಂಚುಗಳ ಅರಿವಿಲ್ಲದೆ ನಾನು ಅವರಿಗೆ ನಾನು ರಾಜಿನಾಮೆ ಕಳಿಸಿದ್ದು ನಜವೆಂದು ಹೇಳಿದೆ. ಕಾರ್ಖಾನೆಯ ಕೆಲ ಸಂಚಾಲಕರೂ ನನ್ನ ವಿರುದ್ಧವಾಗಿ ಸಾಕ್ಷಿ ಹೇಳಿದರು. ಯಾವುದೇ ಕಾರಣವನ್ನು ನೀಡದೆ ಪೊಲೀಸರು ನನ್ನನ್ನು ಹಿಡಿದು ಜೈಲಿಗೆ ಅಟ್ಟಿದರು."[೮]

ಈ ಪ್ರಸಂಗದಲ್ಲಿ ಗಸ್ತಿಯವರ ಮುಗ್ಧತೆ ಅನಾವರಣಗೊಂಡು ವಿರೋಧಿಗಳ ಸಂಚು ಸ್ಪಷ್ಟಗೊಳ್ಳುವುದನ್ನು ತಿಳಿಯಬಹುದು. ಅಲ್ಲದೆ ಸಾಮಾಜಿಕ ಕಾರ್ಯಕರ್ತ ಸಂಘಟನಾ ಚತುರನಾದವನಗೆ ಸಮಕಾಲೀನ ರಾಜಕೀಯ ಅಂಶಗಳು ತಿಳಿಯಬೇಕು ಮತ್ತು ಸಮಾಜದ ವಿವಿಧ ಮುಖವಾಡಗಳ ಬಗ್ಗೆ ಅವನು ಅರಿತುಕೊಂಡವನಾಗಿರಬೇಕು. ಅಂದಿನ ರಾಜಕೀಯ ತುರ್ತು ಪರಿಸ್ಥಿತಿ ಶ್ರೀಮತಿ ಇಂದಿರಾ ಗಾಂಧಿಯವರು ರಾಜಕೀಯ ಲಾಭ ಪಡೆಯಲು ಮಾಡಿದ ಸಂಚಾಗಿತ್ತು. ಅದು ಸಾಮಾನ್ಯ ಮನುಷ್ಯರ ಮೇಲೆ ಬೀರಿದ ಪರಿಣಾಮ ಬೇರೆಯದೇ ಆಯಿತು. ಆಳುವ ಪ್ರಭುತ್ವದ

ನೌಕರರು ಸರ್ವಾಧಿಕಾರಿಗಳಾಗಿ ಅಧಿಕಾರದಿಂದ ಸಮಾಜದ ತಳಸಮುದಾಯದ ಜನರು ಶೋಷಣೆಗೆ ಒಳಗಾದರು. ದೇಶದಲ್ಲಿ ಅರಾಜಕತೆಯುಂಟಾಯಿತು. ಹೀಗೆ ರಾಜಕೀಯವು ಆಳುವ ಪ್ರಭುತ್ವವನ್ನು ಅವಲಂಬಿಸಿರುತ್ತದೆ. ಅಲ್ಲದೆ ಅದು ಯಾವಾಗಲೂ ಹೇರಿಕೆಯ, ಅಪ್ಪಣೆಯ, ಅಧಿಕಾರದ ರೀತಿಯಲ್ಲಿಯೇ ಇರುತ್ತದೆ ಎಂಬುದನ್ನು ಗಸ್ತಿಯವರು ಮನಗಾಣಲಿಲ್ಲ ಹೀಗಾಗಿ ತಮ್ಮ ಮುಗ್ದತೆಯಿಂದ ಅವರು ಜೈಲುಪಾಲಾದರು. ನಂತರ ಅವರು ಬೇಡರ ಒಗ್ಗಟ್ಟಿಗಾಗಿ ಏರ್ಪಡಿಸುವ ಸಮ್ಮೇಳನಕ್ಕೆ ರಾಜಕಾರಣಿಗಳನ್ನು ಆಹ್ವಾನಸಿದ್ದರೂ. ರಾಜಕಾರಣಿಗಳು ಬರುವುದಿಲ್ಲ. ಗಸ್ತಿಯವರು ಬೆಂಗಳೂರಿಗೆ ಹೋದಾಗ ಅವರನ್ನು ಬೇಟಿಯಾದಾಗ ನಡೆದ ಮಾತುಕಥೆಯ ಪ್ರಸಂಗ ಹೀಗಿದೆ:

"ಒಂದು ತಿಂಗಳಿನ ನಂತರ ನಾನು ಬೆಂಗಳೂರಿಗೆ ಹೋಗಿದ್ದೆ. ಸಮಾಜ ಕಲ್ಯಾಣದ ಸಮಿತಿಯವರನ್ನು ಭೇಟಿಯಾದೆ. ಅವರು ಸಮ್ಮೇಳನಕ್ಕೆ ಬಾರದಿರುವ ಕಾರಣ ಹೇಳಿದರು. ನಮ್ಮ ಸಮಾಜದ ಶಾಸಕರೇ ಅವರ ಮೇಲೆ ಒತ್ತಡ ತಂದು ಸಮ್ಮೇಳನಕ್ಕೆ ಹೋಗಬೇಡಿ ಎಂದು ಹೇಳಿದ್ದರಂತೆ. ನನಗೆ ಬರಲು ತುಂಬಾ ಮನಸ್ಸಿತ್ತು. ಆದರೆ ಈ ಒತ್ತಡದಿಂದ ಬರಲಾಗಲಿಲ್ಲವೆಂದು ಪ್ರಾಂಜಲ ಮನಸ್ಸಿನಂದ ಅವರು ಒಪ್ಪಿಕೊಂಡರು. ನನಗೆ ನನ್ನ ಸಮಾಜದ ಶಾಸಕರ ವರ್ತನೆಯ ಬಗ್ಗೆ ಜಿಗುಪ್ಸೆ ಬಂದಿತು. ಈ ಜನರನ್ನು ನಾನು ಗೌರವ ಪೂರ್ವಕವಾಗಿ ಸಮ್ಮೇಳನಕ್ಕೆ ಕರೆದಿದ್ದೆ. ಅವರೂ ಬರಲು ಸಂತೋಷದಿಂದ ಒಪ್ಪಿಕೊಂಡಿದ್ದರು. ಆದರೆ ಕೊನೆ ಕ್ಷಣದಲ್ಲಿ ಈ ಶಾಸಕರು ಕೈಕೊಟ್ಟಿದ್ದರು. ಈ ಸಮ್ಮೇಳನವನ್ನು ಆಯೋಜಿಸಿ ರಾಜಕೀಯ ಲಾಭವನ್ನು ಪಡೆಯಬೇಕೆಂಬುದು ನನ್ನ ಉದ್ದೇಶವಾಗಿರಲಿಲ್ಲ. ರಾಜಕೀಯ ನನ್ನ ಕ್ಷೇತ್ರವೂ ಆಗಿರಲಿಲ್ಲ. ಸಮ್ಮೇಳನಕ್ಕೆ ಬಂದಿದ್ದರೆ ಈ ಜನರೇ ವೇದಿಕೆಯ ಮೇಲೆ ಕೂಡುತ್ತಿದ್ದರು. ಆದರೆ ಅವರು ನನ್ನಲ್ಲಿ ಒಬ್ಬ ರಾಜಕೀಯ ವಿರೋಧಿಯನ್ನು ಕಂಡಿರಬೇಕು. ನಾನು ಜನರನ್ನು ಸಂಘಟಿಸುತ್ತ ಅವರಲ್ಲಿ ಅರಿವನ್ನು ಉಂಟುಮಾಡುತ್ತಿರುವುದರ ಬಗ್ಗೆ ಅವರಿಗೆ ಅಸಹನೆ ಇತ್ತು. ಜನರು ಜಾಣರಾದರೆ ತಮ್ಮನ್ನು ಪ್ರಶ್ನಿಸಬಹುದೆಂಬ ಭಯ ಅವರಿಗೆ ಕಾಡುತ್ತಿದ್ದಿರಬೇಕು. ಜನರು ಪ್ರಜ್ಞಾವಂತರಾಗುವುದು ಸುಧಾರಿಸುವುದು ಅವರಿಗೆ ಬೇಕಿರಲಿಲ್ಲ. ಜನರು ಕತ್ತಲೆಯಲ್ಲಿ ಇದ್ದಷ್ಟು ದಿನ ಇವರು ಬೆಳಕಿನಲ್ಲಿ ಮೆರೆದಾಡಬಹುದಾಗಿತ್ತು. ಇವರ ಸ್ವಾರ್ಥವನ್ನು ಕಂಡು ಮನಸ್ಸು ಪೆಚ್ಚಾಯಿತು."[೯] ಈ ಮಾತುಗಳನ್ನು ಗಸ್ತಿಯವರು ಬರೆಯುವಾಗ ಅವರ ಮನದಲ್ಲಿ ಮೂಡಿರುವ ವಿಷಾದದ ಭಾವನೆಯೊಂದಿಗೆ ತಮ್ಮ ಸಮಾಜದ ಶಾಸಕರ ಬಗೆಗೆ ಆಕ್ರೋಶದ ಭಾವನೆಯೂ ಮೂಡಿರುವುದನ್ನು ಗಮನಿಸಬಹುದು.

ಆಳುವ ವರ್ಗ ಅಥವಾ ಪ್ರಭುತ್ವ ಯಾವಾಗಲೂ ಜನವಿರೋಧಿಯಾಗಿರುತ್ತದೆ. ಅದು ಸಾಮಾನ್ಯ ಜನರ ಒಪ್ಪಿತ ಮೌಲ್ಯಗಳನ್ನು ಒಡೆದುಹಾಕಿ ತನಗೆ ಸರಿ ಅನಿಸಿದ್ದನ್ನು ಜನರ ಮೇಲೆ ಹೇರುವ ಕೆಲಸವನ್ನು ಬಹುಹಿಂದಿನಿಂದಲೂ ಮಾಡಿಕೊಂಡು ಬಂದಿದೆ. ಹೇರಲ್ಪಟ್ಟ ಮೌಲ್ಯಗಳನ್ನು

ತಿರಸ್ಕರಿಸಬೇಕಾದರೆ ಜನರಿಗೆ ತಿಳುವಳಿಕೆ ಅಗತ್ಯ. ಆ ತಿಳುವಳಿಕೆ ನೀಡುವ ವ್ಯಕ್ತಿಗಳನ್ನು ಕಂಡಾಗ ಪ್ರಭುತ್ವ ಅವರನ್ನು ಸಾಮಾನ್ಯ ಜನರಿಂದ ದೂರವಿಡುವಂತೆ ಮಾಡುತ್ತದೆ. ಅವನಿಂದ ದೂರ ಇರಲೂ ತಾನೂ ಬಯಸುತ್ತದೆ. ಅದಕ್ಕೆ ಜನರ ಕಲ್ಯಾಣಕಾರ್ಯಗಳು ಬೇಕಾಗಿರುವುದಿಲ್ಲ. ಹಾಗಾಗಿಯೇ ಕ್ರಾಂತಿಕಾರರು, ಸುಧಾರಕರು ಪ್ರಭುತ್ವಕ್ಕೆ ಬಹಳ ಅಪಾಯಕಾರಿ ವ್ಯಕ್ತಿಗಳಾಗಿ ಕಾಣುತ್ತಾರೆ. ಇಲ್ಲಿಯು ಸಹ ವಾಲ್ಮೀಕಿ ಸಮುದಾಯದ ಸಮ್ಮೇಳನಕ್ಕೆ ಬರುತ್ತೇನೆಂದು ಹೇಳಿ ಬಾರದಿರುವ ತಂತ್ರವೂ ಶಕ್ತಿ ರಾಜಕಾರಣದ ರಾಜ ತಾಂತ್ರಿಕತೆಯನ್ನು ಸೂಚಿಸುತ್ತದೆ. ಜನಾಭಿಪ್ರಾಯಕ್ಕೆ ಮನ್ನಣೆ ಸಿಕ್ಕು ವ್ಯಕ್ತಿಗಳು ಎಲ್ಲಿ ಆಳುವ ವರ್ಗ ಪ್ರಭುತ್ವವನ್ನು ಪ್ರಶ್ನಿಸಿ, ಅಧಿಕಾರದಿಂದ ತಮ್ಮನ್ನು ಕೆಳಗಿಳಿಸುತ್ತಾರೋ ಎನ್ನುವ ಆತಂಕ ಅವರನ್ನು ಕಾಡಿರಬಹುದು. ಹೀಗಾಗಿ ಸಾಮಾನ್ಯ ಜನರ ಧ್ವನಿಯನ್ನು ಎತ್ತರಿಸುವಂತೆ ಮಾಡುವ ಕ್ರಾಂತಿಕಾರಿ ವ್ಯಕ್ತಿಗಳ ಬಗ್ಗೆ ಪ್ರಭುತ್ವ ಸದಾ ಜಾಗರೂಕತೆಯಿಂದ ಇರುತ್ತದೆ.

ಸಂಘಟನೆ ಮತ್ತು ರಾಜಕಾರಣ ಒಂದಕ್ಕೊಂದು ಅವಿನಾಭಾವ ಸಂಬಂಧವಿಟ್ಟುಕೊಂಡಿವೆ. ಸಂಘಟನೆ ಒಂದು ಶಕ್ತಿಯಾದರೆ ಆ ಶಕ್ತಿಯನ್ನು ಬಳಸಿಕೊಂಡು ತನ್ನ ಕಾರ್ಯಚಟುವಟಿಕೆಗಳನ್ನು ನಭಾಯಿಸಿಕೊಳ್ಳುವುದೇ ಪ್ರಭುತ್ವ ಅಥವಾ ರಾಜಕಾರಣವಾಗಿದೆ. ರಾಜಕಾರಣ ಅಥವಾ ಪ್ರಭುತ್ವವು ತನ್ನ ಹಿಡಿತದಲ್ಲಿ ಸಂಘಟನೆ ಇರಬೇಕೆಂದು ಆಪೇಕ್ಷಿಸುತ್ತದೆ. ಯಾವಾಗ ಪ್ರಭುತ್ವವನ್ನು ಮೀರುವ ಕೆಲಸ ಸಂಘಟನೆಯಿಂದ ಆಗುತ್ತದೆಯೋ ಆಗ ಪ್ರಭುತ್ವದ ನಾಶವಾಗಿ ಮಗದೊಂದು ರೂಪ ಪಡೆಯಬಹುದು. ಹೊಸಹುಟ್ಟಿಗೆ ನಾಂದಿಯಾಗಬಹುದು. ಸಂಘಟನೆಯಿಂದ ವ್ಯಕ್ತಿಗಳು ಶಕ್ತಿಗಳಾಗಿ ಮಾರ್ಪಟ್ಟು ಸಮಾಜವನ್ನು ಆರೋಗ್ಯಕರವಾಗಿ ಬದಲಾಯಿಸ ಬಲ್ಲರು ಅಲ್ಲದೆ ಸ್ವಾರ್ಥದ ರಾಜಕಾರಣದ ವಿರುದ್ಧ ಒಂದು ಅಸ್ತ್ರವಾಗಿಯೂ ಅವರು ಕಾರ್ಯನಿರ್ವಹಿಸಬಲ್ಲರು. ಆದರೆ ಸಂಘಟನೆ ಮತ್ತು ರಾಜಕಾರಣಗಳೆರಡನ್ನು ನಿಯಂತ್ರಿಸುವ ಶಕ್ತಿ ಧರ್ಮಕ್ಕಿದೆ. ಹಾಗಾಗಿ ಒಪ್ಪಿತ ಮೌಲ್ಯಗಳನ್ನು ಪ್ರಸಾರ ಮಾಡುವ ಧರ್ಮದ ವಿರುದ್ಧ ಸಂಘಟನೆ, ರಾಜಕಾರಣಗಳು ಎಲ್ಲ ಸನ್ನಿವೇಶಗಳಲ್ಲು ಗೆಲ್ಲಲಾರವು.

೫. ೨. ಸಂಘಟನೆ ಮತ್ತು ಧರ್ಮ :

ಜನರ ಧಾರ್ಮಿಕ ನಂಬಿಕೆಗಳು ಸಾಮಾಜಿಕ ಸಂಘಟನೆಯಲ್ಲಿ ಪೂರಕವೂ ತೊಡಕೂ ಆಗಬಲ್ಲವು. ಇಂಥ ಪ್ರಸಂಗಗಳು 'ವಾಲ್ಮೀಕಿ'ಯಲ್ಲಿ ಬರುತ್ತವೆ. ಒಮ್ಮೆ ಗಸ್ತಿಯವರು ಚಳುವಳಿ ಮಾಡಲಿಕ್ಕೆ ಮುಂದಾಗುತ್ತಾರೆ. ಆಗ ಜನರು ಸಹಕರಿಸುವರೋ ಇಲ್ಲವೋ ಎಂಬ ಭಯ ಅವರಲ್ಲಿ ಮೂಡುತ್ತದೆ: "ಎರಡನೆಯ ದಿನ ಕಾರ್ಖಾನೆ ಬಾಗಿಲಿಗೆ ಎಲ್ಲ ಬೇಡರನ್ನು ಸತ್ಯಾಗ್ರಹಕ್ಕೆ ಕೂಡ್ರಿಸಿ ರಸ್ತಾಬಂದ್ ಚಳುವಳಿ ಮಾಡಬೇಕೆಂಬ ನಿರ್ಧಾರಕ್ಕೆ ಬಂದೆ. ರಾತ್ರಿ ಎಲ್ಲರನ್ನು ಕರೆಸಿ ಚಳುವಳಿಯ ರೂಪುರೇಷೆ ಹೇಳಿದೆ. ಚಳುವಳಿಯನ್ನು ದಿಢೀರೆಂದು ಆರಂಭಿಸುತ್ತಿದ್ದರಿಂದ ಈ ಬಗ್ಗೆ ಸದ್ಯ ಯಾರಿಗೂ ಹೇಳಬೇಡಿರೆಂದು ವಿವರಿಸಿದೆ. ಎರಡನೆಯ ದಿನ ಕಾಕತಿಯಲ್ಲಿ ಸಿದ್ಧೇಶ್ವರನ ಜಾತ್ರೆ

ಇತ್ತು. ರಸ್ತಾ ಬಂದ್ ಚಳುವಳಿ ಬಿಟ್ಟು ಇವರೆಲ್ಲಾ ಜಾತ್ರೆಗೆ ಹೋದರೆ ಗತಿಏನು, ಎಂಬ ಸಂಶಯ ಕಾಡಹತ್ತಿತ್ತು. ಆ ದೇವರು ಉಗ್ರನೆಂಬ ಖ್ಯಾತಿಯೂ ಇತ್ತು. ಆ ದೇವರಿಗಿಂತ ಈ ಗಸ್ತ್ಯ ದೊಡ್ಡವನೇನು? ಎಂದು ಯಾರಾದರೂ ಕೇಳಿದರೆ ನಮ್ಮ ಜನರು ರಸ್ತಾಬಂದ್ ಮರೆತು ಆ ಕಡೆ ಹೋಗುವ ಸಾಧ್ಯತೆಯೂ ಇತ್ತು. ಈ ಚಿಂತೆಯಲ್ಲಿರುವಾಗಲೇ ಬೆಳಗಾವಿಯಿಂದ ನನ್ನ ಗೆಳೆಯರಾದ ಡಾ. ಯಾದಗಿರಿ ಮತ್ತು ಲಕ್ಷ್ಮಣ ಹಂಡಿ ಬಂದರು. ಅನೇಕ ದಿನಗಳ ನಂತರ ನಾವು ಪರಸ್ಪರ ಭೇಟಿಯಾಗುತ್ತಿದ್ದೆವು. ನಾನು ಅವರಿಗೆ ನನ್ನ ಹೋರಾಟದ ಬಗ್ಗೆ ವಿವರಿಸಿದೆ. ರಾತ್ರಿ ಬಹಳ ಹೊತ್ತು ಮಾತಾಡಿ ನಿದ್ದೆಗೆ ಜಾರಿದೆವು"[೧೦]

ಗಸ್ತಿಯವರ ಮನದಲ್ಲಿ ಮೂಡಿದ ಭಯ ನಿಜವಿರಬಹುದು. ಕಾರಣ ಜಾತ್ರೆ, ದೇವರು ಮುಂತಾದುವುಗಳು ಸಮಾಜ ಒಪ್ಪಿತ ಮೌಲ್ಯಗಳಾಗಿವೆ. ಹೀಗಾಗಿ ಸಮಾಜದ ಒಪ್ಪಿತ ಮೌಲ್ಯವಾದ ಧರ್ಮ, ಧಾರ್ಮಿಕ ವಿಧಿವಿಧಾನಗಳಿಗೆ ಸಾಮಾನ್ಯ ಮನುಷ್ಯ ತಲೆಬಾಗುವುದು ಸಹಜ. ಇಲ್ಲಿಯೂ ಅದೇ ಆಗುತ್ತದೆ. ಗಸ್ತಿಯವರು ತಮ್ಮ ಜನಗಳಿಗೆ ನ್ಯಾಯ ಹೋಗಿಸಲೋಸುಗ ಕಾರ್ಖಾನೆಯ ಬಾಗಿಲಿನ ಮುಂದೆ, ರಸ್ತೆಬಂದ್ ಮಾಡಿಸಿ ಮುಷ್ಕರಕ್ಕಿಳಿಸುವ ಪೂರ್ವ ತಯಾರಿಯಲ್ಲಿದ್ದರು. ಆದರೆ ಅಂದೇ ಕಾಕತಿಯಲ್ಲಿ ಸಿದ್ದೇಶ್ವರನ ಜಾತ್ರೆ ಇದ್ದುದು ಅವರಿಗೆ ದೊಡ್ಡ ಸವಾಲಾಗಿ ಪರಿಣಮಿಸಿತು.

ಸಮಾಜದ ತಳ ಸಮುದಾಯಗಳು ಆಚರಿಸುವ, ಆಚರಣೆಗಳು ಹಾಗೂ ಪೂಜಿಸುವ ದೇವರುಗಳೆಲ್ಲರು ಉಗ್ರವಾಗಿರುವುದು, ಉಗ್ರದೇವರುಗಳೆಲ್ಲರು ಕೆಳವರ್ಗಗಳಿಂದ ಪೂಜಿಸಲ್ಪಡುವುದು ಸಾಮಾನ್ಯವಾಗಿದೆ. ಆದರೂ ಪ್ರಜ್ಞಾವಂತ ಗಸ್ತಿಯವರು ಜಾತ್ರೆ ಇದ್ದರೂ ಚಳುವಳಿಯನ್ನು ಮುಂದುವರೆಸುವ ಧೈರ್ಯ ತೋರುತ್ತಾರೆ. ಇದು ಅವರಲ್ಲಿನ ಬದ್ಧತೆಯನ್ನು ಸೂಚಿಸುತ್ತದೆ.

ಮುಂದೆ ಮುಷ್ಕರದಲ್ಲಿ ಜಯ ದೊರೆತು ಇನ್ನಷ್ಟು ಜನರನ್ನು ಸಂಘಟಿಸಲು ಸಮ್ಮೇಳನ ನಡೆಸಬೇಕೆಂಬ ಛಲ ಗಸ್ತಿಯವರಲ್ಲಿ ಹುಟ್ಟುತ್ತದೆ. ಸಾಮಾಜಿಕ ಸಮ್ಮೇಳನ ನಡೆಸುವಾಗಿನ ಧಾರ್ಮಿಕ ಕಾರ್ಯಕ್ರಮ ಬೀರಿದ ಪರಿಣಾಮ ಇನ್ನೊಂದು ಸನ್ನಿವೇಶದಲ್ಲೂ ಎದುರಾಗುತ್ತದೆ:

"ಸಮ್ಮೇಳನದ ಎಲ್ಲ ತಯಾರಿ ಪೂರ್ಣಗೊಂಡಿತು. ಆದರೆ ಈಗ ಹೊಸದೊಂದು ಸಮಸ್ಯೆ ಎದುರಾಯಿತು. ಸಮ್ಮೇಳನ ದಿನವೇ ಊರಿನ ಜನರು ಯಲ್ಲಮ್ಮನ ಗುಡ್ಡಕ್ಕೆ ಎಣ್ಣೆ ಹೊಯ್ಯಲು ಹೊಗುವವರಿದ್ದರು. ನಾನು ಊರಿನ ಜನರಿಗೆ, ನಮ್ಮ ವಸ್ತಿಯ ಜನರಿಗೆ ಎಷ್ಟೇ ವಿನಂತಿಸಿಕೊಂಡರೂ ಅವರು ಸವದತ್ತಿಗೆ ಹೋಗುವ ನಿರ್ಧಾರವನ್ನು ಬದಲಿಸಲಿಲ್ಲ. ನಾನು ಊರಿನ ಜನರ ಸಲುವಾಗಿ ಬೇಡರ ಸಲುವಾಗಿ ಈ ಸಮ್ಮೇಳನವನ್ನು ಹಮ್ಮಿಕೊಂಡಿದ್ದೆ. ಆದರೆ ಇವರಾರಿಗೂ ಇದರ ಮಹತ್ವ ಅರಿವಾಗಲಿಲ್ಲ. ಅವ್ವ-ಅಪ್ಪ ಹಾಗೂ ನಮ್ಮ ಮನೆಯ ಜನರೂ ಗುಡ್ಡಕ್ಕೆ ಹೊರಟು ನಿಂತರು. ಇವರಿಗೆ ಎಷ್ಟೇ ಹೇಳಿದರೂ ಕೇಳಲಿಲ್ಲ. ಜಾಗೃತಿಗಿಂತ ದೇವರು ದಿಂಡರೇ ಇವರಿಗೆ ಅಧಿಕ ಪ್ರಿಯರಾದರು"[೧೧]

ಧಾರ್ಮಿಕ ವಿಧಿ ವಿಧಾನಗಳ ಮುಂದೆ ಸಂಘಟನೆ ಮಾಡುವುದು ಎಷ್ಟು ಕಷ್ಟದ ಕೆಲಸ ಎಂಬುದು ಇದರಿಂದ ತಿಳಿಯುವುದು.

ದಮನಿತ ಸಮುದಾಯಗಳು ಜಾಗೃತಿಗೊಂಡು ಸಂಘಟನೆ ಶಕ್ತಿಯಾಗಿ ಮಾರ್ಪಟ್ಟು ತಮ್ಮ ಶೋಷಕರನ್ನು ಎದುರುಗೊಳ್ಳುತ್ತವೆ ನಜ. ಆದರೆ ಅವು ಹಿಂದಿನಂದ ಒಪ್ಪಿ ಆಚರಿಸಿಕೊಂಡು ಪೂಜಿಸಿಕೊಂಡು ಬಂದಿರುವ ಧಾರ್ಮಿಕ ಅಂಶಗಳ ಮುಂದೆ ಅವುಗಳ ಸಾಮಾಜಿಕ ಸಂಘಟನೆ ಕಾರ್ಯಕ್ರಮಗಳು ಕೆಲವೊಮ್ಮೆ ಮಂಕಾಗುತ್ತವೆ.

ಧರ್ಮ, ಧಾರ್ಮಿಕ ವಿಧಿವಿಧಾನಗಳೆಲ್ಲವೂ ಒಪ್ಪಿತ ಮೌಲ್ಯಗಳು ಇವುಗಳನ್ನು ಮುರಿಯಲು ಶಿಕ್ಷಿತ ಜಾಗೃತ ಮನಸ್ಸುಗಳು ಬೇಕಾಗುವುದು. ಅಂತಹ ಜಾಗೃತ ಶಿಕ್ಷಿತ ಹಾಗೂ ಮನಸ್ಸುಗಳಿಲ್ಲದ ಕಾರಣ ಗಸ್ತಿಯವರು ಹೇಳಿದರೂ ಒಪ್ಪದೆ ಅವರ ಸಮುದಾಯದ ಜನ ಯಲ್ಲಮ್ಮನ ಗುಡ್ಡಕ್ಕೆ ಹೊರಡುತ್ತಾರೆ. ಉತ್ತರ ಕರ್ನಾಟಕದ ಭಾಗದಲ್ಲಿ ಕೆಳಸಮುದಾಯಗಳು ಪೂಜಿಸುವ ಉಗ್ರ ದೇವತೆಗಳಲ್ಲಿ ಯಲ್ಲಮ್ಮ ದೇವತೆಯೂ ಒಂದಾಗಿದೆ.

ಆದರೆ ಗಸ್ತಿಯವರು ಸಮ್ಮೇಳನವನ್ನು ನಲ್ಲಿಸದೇ ಸಮುದಾಯದ ಜಾಗೃತಿಗಾಗಿ ಮುಂದಾಗಿದ್ದು ಒಪ್ಪಿತ ಮೌಲ್ಯಗಳೊಂದಿಗೆ ಸಂಘರ್ಷಕ್ಕಿಳಿಯುತ್ತಾರೆ. ಅವುಗಳನ್ನು ಮುರಿದು ಕಟ್ಟುವಂತಾಗಿ ಹೊಸ ಬಗೆಯ ಬದಲಾವಣೆಗೆ ನಾಂದಿ ಹಾಡುತ್ತಾರೆ. ಆದರೂ ಅವರಿಗೆ ಧಾರ್ಮಿಕ ನಾಯಕರ ಕೋಪವನ್ನು ಎದುರಿಸ ಬೇಕಾಗಿತ್ತದೆ.

“ಊರಿನ ಅಗಸಿಗೆ ಸ್ವಾಗತ ಕಮಾನನ್ನು ಕಟ್ಟುತ್ತಿದ್ದೆ. ಅಷ್ಟರಲ್ಲಿ ಬಸ್ ಬಂದು ನಿಂತಿತು. ಬಸ್ಸಿನಂದ ಬಳ್ಳಾರಿಯ ಸಿದ್ಧಾರ್ಥಾನಂದ ಸ್ವಾಮಿಜಿಯವರು ಇಳಿದರು. ನಾನು ಹೋಗಿ ಅವರಿಗೆ ನಮಸ್ಕರಿಸಿದೆ. ಅವರ ಮುಖ ಸಿಟ್ಟಿನಿಂದ ಸುಡುತ್ತಿತ್ತು. ಸ್ವಾಮಿಜಿಯವರು ಬೆಳಿಗ್ಗೆ ಐದುಗಂಟೆಗೆ ಬೆಳಗಾವಿಗೆ ಬಂದಿದ್ದರು. ಬಸ್‌ಸ್ಟ್ಯಾಂಡಿನಲ್ಲಿ ಅವರನ್ನು ಸ್ವಾಗತಿಸಲು ಯಾರು ಇದ್ದಿರಲಿಲ್ಲವೆಂದು ಅವರಿಗೆ ಸಿಟ್ಟು ಬಂದಿತು. ಬೆಳಗ್ಗೆ ಐದು ಗಂಟೆಯಿಂದ ಸ್ಟ್ಯಾಂಡಿನಲ್ಲಿ ನಮ್ಮದಾರಿ ಕಾಯುತ್ತ ನಿಂತಿದ್ದೆ, ಒಬ್ಬರೂ ವಿಚಾರಿಸಲಿಲ್ಲವೆಂದು ನನ್ನ ಮೇಲೆ ಹರಿಹಾಯ್ದರು. ಬೆಳಗಾವಿಯ ನನ್ನ ಶಿಷ್ಯರಿಗೆ ಹೇಳಿದ್ದರೆ ರಾತ್ರಿಯಿಂದಲೇ ಅವರು ನನ್ನ ಹಾದಿಕಾಯುತ್ತಿದ್ದರು ಎಂದು ಸ್ವಾಮೀಜಿಯವರು ಹೇಳಿದರು. ಅವರ ಮಾತಿಗೆ ನಾನು ಪ್ರತಿಯಾಡಲು ಹೋಗಲಿಲ್ಲ. ಅವರನ್ನು ಮನೆಗೆ ಕರೆದುಕೊಂಡು ಹೋದೆ”[೧೨] ಈ ಪ್ರಸಂಗವು ಧಾರ್ಮಿಕ ನಾಯಕರು ಧರ್ಮದ ಹೆಸರಿನಲ್ಲಿ ಮಾಡುವ ಉದ್ಧಟತನದ ವರ್ತನೆಯ ಜೊತೆಗೆ ಸಮಾಜದಲ್ಲಿ ಅವರಿಗಿರುವ ಸ್ವಯಂ ಶ್ರೇಷ್ಠತೆಯ ಕಲ್ಪನೆಯನ್ನು ತೋರಿಸುತ್ತದೆ. ಒಂದೆ ರಾಜರ ಕಾಲದಲ್ಲಿ ಈ ಧಾರ್ಮಿಕ ನಾಯಕರು ರಾಜರನ್ನು ನಿಯಂತ್ರಿಸುವ ಕುಲ ಗುರುಗಳಾಗಿ ಉನ್ನತ ಸ್ಥಾನಪಡೆದು ಆಸ್ಥಾನದಲ್ಲಿರುತ್ತಿದ್ದರು. ಈ ಪದ್ಧತಿ ಆಧುನಿಕ ಕಾಲದಲ್ಲಿ

ಬೆಳವಣಿಗೆ ಹೊಂದಿ ಜಾಗೃತಗೊಂಡ ಸಮುದಾಯದ ಹಿನ್ನೆಲೆಯಲ್ಲಿ ಬಂದ ವ್ಯಕ್ತಿಯೇ ಆ ಸಮುದಾಯದ ಸ್ವಾಮಿಯಾಗಿ ಮಠ-ಮಾನ್ಯಗಳ ಸ್ಥಾಪನೆಯಾದವು. ಇವು ಸಂಬಂಧಪಟ್ಟ ಸಮುದಾಯಗಳ ಜನರಲ್ಲಿ ಜಾಗೃತಿ ಮೂಡಿಸುತ್ತಾ ಆಯಾ ಸಮುದಾಯಗಳ ಪ್ರತಿನಿಧಿಗಳಾದವು. ಆದರೆ ಈ ಪ್ರಾತಿನಿಧ್ಯವು ಗಸ್ತಿಯವರಂತಹ ಸಾಮಾಜಿಕ ಹೋರಾಟಗಾರರನ್ನು ಅರ್ಥ ಮಾಡಿಕೊಳ್ಳದೆ ಹೋಗುವುದು ವಿಚಿತ್ರವಾಗಿದೆ.

ಸಾಮಾನ್ಯವಾಗಿ ಸಮಾಜದ ಜನರು ಧಾರ್ಮಿಕ ವಿಧಿ-ವಿಧಾನಗಳಿಗೆ ಹೆಚ್ಚು ಒತ್ತು ನೀಡುತ್ತಿರುವುದರಿಂದ ಮಠಗಳಿಗೆ ಮಾನ್ಯತೆ ದೊರೆಯಿತು. ಅಲ್ಲಿರುವ ಸ್ವಾಮಿ ಧಾರ್ಮಿಕವಾಗಿ ದೈವ ಸ್ವರೂಪಿಯಾಗಿ ಸಮಾಜವನ್ನು ಜಾಗೃತಿಯಲ್ಲಿಡುವ ಕೆಲಸಕಾರ್ಯದಲ್ಲಿ ತೊಡಗಿಸಿಕೊಳ್ಳುತ್ತಾನೆ. ಇಲ್ಲಿಯೂ ಸಹ ಗಸ್ತಿಯವರು ತಮ್ಮ ಬೇಡರ ಸಮ್ಮೇಳನಕ್ಕೆ ಬಳ್ಳಾರಿಯ ಸಿದ್ಧಾರ್ಥಾನಂದ ಸ್ವಾಮಿಯನ್ನು ಕರೆಸಿದ್ದರು. ಸಮುದಾಯ ಸಂಘಟನೆಗೊಳ್ಳಲು ಧರ್ಮವು ಪೂರಕವಾದ ಕೆಲಸಮಾಡಿದಾಗ ಮಾತ್ರ ಅದಕ್ಕೆ ಶಕ್ತಿ ದೊರೆಯುತ್ತದೆ. ಇಲ್ಲವಾದರೆ ಧರ್ಮ ಸಂಘಟನೆಯನ್ನು ನಿಯಂತ್ರಿಸುತ್ತದೆ. ಇವೆರಡು ಒಂದಕ್ಕೊಂದು ಪೂರಕವಾದಾಗ ಮಾತ್ರ ಸಮಾಜದ ಬೆಳವಣಿಗೆ ಸಾಧ್ಯ ಅನಿಸುತ್ತದೆ.

ದಮನಿತ ಸಮುದಾಯದ ಜನರ ಜಾಗೃತಿ, ಸಂಘಟನೆಯಾದರೆ ಸಂಘಟನೆಯನ್ನು ನಿಯಂತ್ರಿಸುವ ಮಾರ್ಗದರ್ಶಿಸುವ ಕಾರ್ಯ ಧರ್ಮದ್ದಾಗಿರುತ್ತದೆ. ಜನರೊಪ್ಪಿತ ಮೌಲ್ಯ ಧರ್ಮ ಧರ್ಮವನ್ನು ಮೀರುವ ಜಾಗೃತ ಮನಸ್ಸುಗಳು ಸೃಷ್ಟಿಯಾಗಬೇಕಾದರೆ ಶಿಕ್ಷಣ, ವೈಚಾರಿಕತೆ ಅವಶ್ಯಕ. ಎಷ್ಟೇ ವೈಚಾರಿಕ ಚಿಂತನೆ ಇದ್ದಾಗ್ಯೂ ಮನುಷ್ಯರು ತಮಗಿಂತ ಪ್ರಬಲ ಆಗೋಚರ ಶಕ್ತಿ ಇದೆಯೆಂದು. ಅದೇ ದೇವರು ಎಂದು ನಂಬುತ್ತಾರೆ. ಈ ನಂಬಿಕೆ ಧರ್ಮವಾಗಿ ಧಾರ್ಮಿಕ ವಿಧಿಗಳಾಗಿ ಮಠ-ಮಾನ್ಯಗಳ ಮೂಲಕ ಆಯಾ ಸಮುದಾಯಗಳು ಜಾಗೃತ ಸ್ಥಿತಿಯಲ್ಲಿರಲು ಇಲ್ಲವೆ ನಿಯಂತ್ರಣ ಮಾಡಲು ಯತ್ನಿಸುತ್ತದೆ.

ಆಧುನಿಕ ಯುಗದಲ್ಲಂತೂ ಮಾನವರು ಎಷ್ಟೇ ವೈಜ್ಞಾನಿಕವಾಗಿ ಮುಂದುವರೆದು ವೈಚಾರಿಕ ದೃಷ್ಟಿಕೋನ ಬೆಳೆಸಿಕೊಂಡರು ಕೂಡ, ಆಯಾ ಸಮುದಾಯಗಳಲ್ಲಿ ಮಠಗಳು ಸ್ಥಾಪನೆಯಾಗಿ ಅವು ತಮ್ಮ ಹಕ್ಕು ಸ್ಥಾಪನೆ ಮಂಡಿಸುತ್ತಿರುವುದು ಸಾಮಾನ್ಯವಾಗಿದೆ. ಆಳುವ ವರ್ಗ ಹಾಗೂ ಪ್ರಭುತ್ವಕ್ಕೆ ತಮ್ಮ ತಮ್ಮ ಪ್ರಬಲ ಸಂಘಟನಾ ಶಕ್ತಿಯನ್ನು ಧಾರ್ಮಿಕವಾಗಿ ಮಠದ ಸ್ವಾಮಿಗಳ ರೂಪದಲ್ಲಿ ಇಂದು ಸಮುದಾಯಗಳು ಕೊಡಮಾಡುತ್ತಿವೆ.

ಎಲ್ಲಿಯವರೆಗೆ ಜಾಗೃತ ಮನಸ್ಸುಗಳು ಮಠಗಳಿಗೆ ಸ್ವಾಮಿಗಳಿಗೆ ಪ್ರಾಮುಖ್ಯತೆಯನ್ನು ಕೊಡುತ್ತವೆಯೊ ಅಲ್ಲಿವರೆಗೂ ಈ ವಿಚಿತ್ರ ಸ್ಥಿತಿ ಹೀಗೆ ಮುಂದುವರಿಯುತ್ತದೆ. ಆದರೆ ಒಪ್ಪಿತ ಧಾರ್ಮಿಕ ಮಠಗಳ

ಸ್ವಾಮಿಗಳ ಮೌಲ್ಯಗಳನ್ನು ತಿರಸ್ಕರಿಸಲ್ಪಟ್ಟಾಗ ಹಾಗೂ ಅಕ್ಷರಸ್ಥ ಸಮುದಾಯವನ್ನು ಎಚ್ಚರಿಸಿದಾಗ ಬದಲಾವಣೆಗೊಂಡು ಹೊಸತನಕ್ಕೆ ಎಡೆಮಾಡಿಕೊಡುತ್ತದೆ.

೫. ೩. ಸಂಘಟನೆ ಮತ್ತು ಪತ್ರಿಕೆ :

ಆಧುನಿಕ ಪ್ರಚಾರ ಮಾಧ್ಯಮಗಳಲ್ಲಿ ಪತ್ರಿಕಾ ಮಾಧ್ಯಮವೂ ಒಂದು. ಭಾರತಕ್ಕೆ ಬ್ರಿಟಿಷರ ಆಗಮನದಿಂದಾಗಿ ಪತ್ರಿಕೋದ್ಯಮ ಅಭಿವೃದ್ಧಿಗೊಂಡು ಅದು ಸಮಾಜವನ್ನು ಜಾಗೃತಾವಸ್ಥೆಯಲ್ಲಿಡುವ ಕಾರ್ಯವನ್ನು ಮಾಡುತ್ತಿದೆ. ಇದು ಅಕ್ಷರಸ್ಥ ಸಮುದಾಯಕ್ಕೆ ಮಾತ್ರ ಸೀಮಿತವಾದುದಾಗಿದೆ. ಅನಕ್ಷರಸ್ಥ ಸಮುದಾಯದ ಜನರಿಗೆ ಅವಶ್ಯಕವಾದುದಾಗಿದೆ.

'ವಾಲ್ಮೀಕಿ' ಆತ್ಮಕಥೆಯಲ್ಲಿ ಬರುವ ಹಲವಾರು ಪ್ರಸಂಗಗಳು ಗಸ್ತಿಯವರ ಸಂಘಟನೆಗೆ ಪತ್ರಿಕೆಗಳು ಹೇಗೆ ಸಹಾಯಕವಾದವು. ಎಂಬುದನ್ನು ಸಾಬಿತು ಪಡಿಸುತ್ತವೆ: "ನಾನು ಬರೆದ ಲೇಖನ ತರುಣ ಭಾರತದಲ್ಲಿ ಪ್ರಕಟವಾಯಿತು. ಕಾರ್ಖಾನೆಯ ಅಧಿಕಾರಿಗಳ ಕಪಟ ಕಾರಸ್ಥಾನವನ್ನು ಅದರಲ್ಲಿ ವಿವರವಾಗಿ ಬರೆದಿದ್ದೆ. ಊರಿನಲ್ಲಿ ಮತ್ತು ಕಾರ್ಖಾನೆಯಲ್ಲಿ ಎಲ್ಲರೂ ಲೇಖನದ ಬಗ್ಗೆ ಮಾತನಾಡ ಹತ್ತಿದರು. ಅಧಿಕಾರಿಗಳು ನನ್ನ ಮೇಲೆ ಸಿಟ್ಟಾದರು. ಕೆಲವರು ನನ್ನೆಡೆಗೆ ಬಂದು ಕಾರ್ಖಾನೆಯವರು ನನ್ನನ್ನು ಕೋರ್ಟಿಗೆ ಜಗ್ಗುಗ್ತಾರೆಂಬ ಹಾವುಬಿಟ್ಟರು. ನಾನು ಹೆದರದೆ ಅವರು ಕೋರ್ಟಿಗೆ ಹೋದರೆ ಕೋರ್ಟಿನಲ್ಲಿಯೇ ಅವರು ಬೆತ್ತಲಾಗುತ್ತಾರೆ. ಇದರಿಂದಲಾದರೂ ಜಗತ್ತಿಗೆ ಸತ್ಯಸ್ಥಿತಿ ಗೊತ್ತಾಗುತ್ತದೆ"[೧೩] ಎಂದು ಹೇಳಿ ಗಸ್ತಿಯವರು ತಮ್ಮ ಸಮುದಾಯದ ಮೇಲಾಗುತ್ತಿರುವ ಶೋಷಣೆಯನ್ನು ಪತ್ರಿಕೆಯಲ್ಲಿ ಲೇಖನ ಬರೆಯುವುದರ ಮುಖಾಂತರ ಸಮುದಾಯವನ್ನು ಜಾಗೃತಗೊಳಿಸುವ ಕೆಲಸ ಮುಂದುವರೆಸುತ್ತಾರೆ.

ಆಧುನಿಕ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಪ್ರಜಾಪ್ರಭುತ್ವದ ನಾಲ್ಕನೆಯ ಅಂಗ ಪತ್ರಿಕಾರಂಗವೆಂದು ಕರೆಯಲಾಗುತ್ತಿದೆ. ಕಾರಣ ಇದರ ಕಾರ್ಯವೈಖರಿ ಹಾಗಿದೆ. ಬ್ರಿಟಿಷರಿಂದ ಭಾರತ ಸ್ವತಂತ್ರಗೊಂಡ ಮೇಲೆ ತನ್ನದೇ ಸಂವಿಧಾನ ರಚನೆ ಮಾಡಿಕೊಂಡಿತು. ನಂತರ ಆಧುನಿಕ ಶಿಕ್ಷಣ ನೀಡುವುದರ, ಮೂಲಕ ಸಮಾಜವನ್ನು ಶಿಕ್ಷಿತರನ್ನಾಗಿಸುತ್ತಾ ಬಂದಿತು. ಈ ಶಿಕ್ಷಿತರು ಬಹುಬೇಗ ಜಾಗೃತಗೊಳ್ಳಲು ಪತ್ರಿಕಾ ಮಾಧ್ಯಮವು ಒಂದು ಕಾರಣವಾಯಿತು. ಗಸ್ತಿಯವರು ಕಾರ್ಖಾನೆಯ ಅಧಿಕಾರಿಗಳಿಂದ ನ್ಯಾಯ ಸಿಗದಿದ್ದಾಗ ತಮ್ಮ ಸಮುದಾಯಕ್ಕಾದ ಶೋಷಣೆಯನ್ನು ಸವಿಸ್ತಾರವಾಗಿ ಲೇಖನದ ರೂಪದಲ್ಲಿ ಬರೆಯತೊಡಗುತ್ತಾರೆ. ಇದರಿಂದ ಅಕ್ಷರಸ್ಥ ಸಮಾಜ ಜಾಗೃತಗೊಳ್ಳುತ್ತದೆ. ಶೋಷಣೆ ಎಲ್ಲರಿಗೂ ತಿಳಿಯುವಂತಾಗಿ ಗಸ್ತಿಯವರ ಜನ ಸಂಘಟನೆಗೆ ಇನ್ನಷ್ಟು ಪ್ರೋತ್ಸಾಹ ಸಿಕ್ಕಂತಾಗುತ್ತದೆ.

ಆದರೂ ಇದೇ ಪತ್ರಿಕೆ ಮುಂದೆ, ಸಮ್ಮೇಳನ ನಡೆದ ಮೇಲೆ ಗಸ್ತಿಯವರು ನಡೆಸಿದ ಸಮ್ಮೇಳನದ ವಿರೋಧವಾಗಿ ಬರೆಯುತ್ತದೆ. ಆ ಪ್ರಸಂಗವನ್ನು ಸಹ ನಾವು ಈ ಮುಂದಿನಂತೆ

ನೋಡಬಹುದು. "ಸಮ್ಮೇಳನದ ಬಗ್ಗೆ ಎಲ್ಲ ಪತ್ರಿಕೆಗಳಲ್ಲೂ ವರದಿಬಂತು. ಆದರೆ ಬೆಳಗಾವಿಯಿಂದ ಹೊರಡುವ ಎರಡು ಕನ್ನಡ ಪತ್ರಿಕೆಗಳು ಸಮ್ಮೇಳನದಲ್ಲಿ ಜನರೇ ಇರಲಿಲ್ಲವೆಂದು ಬರೆದಿದ್ದವು. ಸಮ್ಮೇಳನದಲ್ಲಿ ಕನಿಷ್ಠ ಐದುನೂರು ಜನರಾದರೂ ಭಾಗವಹಿಸಿದ್ದಿರಬೇಕು. ಆದರೆ ಆ ಪತ್ರಿಕೆಗಳ ಕಣ್ಣಿಗೆ ಜನರೇ ಕಂಡಿರಲಿಲ್ಲ. ಬೇಡರನ್ನು ಜನರು ಎಂದು ಒಪ್ಪಿಕೊಳ್ಳುವುದು ಅವರಿಗೆ ಕಠಿಣವಾಗಿರಬೇಕೆಂದು ಭಾವಿಸಿದೆ."[೧೪] ಇಲ್ಲಿ ಗಸ್ತಿಯವರ ಮಾತುಗಳಲ್ಲಿ ನೋವಿದೆ, ವಿಷಾದವಿದೆ. ನೋಡಿದಾಗ ಪತ್ರಿಕೆಗಳು ತಮ್ಮ ಜವಾಬ್ದಾರಿತನದಿಂದ ಒಮ್ಮೊಮ್ಮೆ ವಿಮುಖವಾಗುತ್ತವೆ ಎಂಬುದನ್ನು ಈ ಪ್ರಸಂಗ ತೋರಿಸಿಕೊಡುತ್ತದೆ.

ಹಾಗೆಯೇ ಕೆಲವೊಮ್ಮೆ ಪ್ರಸಾರ ಮಾಧ್ಯಮಗಳು ಕೂಡ ಆಳುವ ವರ್ಗದ ಕೈಗೊಂಬೆಯಾಗಿ ಅವು ನಿರ್ಣಯಿಸಿದ ಅಂಶಗಳನ್ನೇ ಪ್ರಕಟಿಸಿ ಜನರು ಒಪ್ಪಿಕೊಳ್ಳುವಂತೆ ಮಾಡುತ್ತವೆ. ಅಲಕ್ಷಿತ ಸಮುದಾಯ ಒಂದರ ಸಮ್ಮೇಳನ ನಡೆದರೂ ಅದರ ಬಗ್ಗೆ ಚಕಾರ ಎತ್ತದ ಪತ್ರಿಕೆಗಳು ಒಮ್ಮೊಮ್ಮೆ ಜನ ವಿರೊಧಿಯಾಗಿ ಬಿಡುತ್ತವೆ. ಆಳುವ ವರ್ಗದ ಕಾವಲು 'ನಾಯಿ'ಗಳಾಗಿ ಮಾರ್ಪಟ್ಟು ಪ್ರಭುತ್ವ ನೀಡುವ ಆಹಾರಕ್ಕೆ ಬಾಯಿತೆರೆದು ಕೊಂಡಿರುತ್ತವೆ. ಜನರ ಪರವಾಗಿ ಧ್ವನಿ ಮಾಡುವುದೇ ಇಲ್ಲ. ಇದು ಪತ್ರಿಕಾ ರಂಗದ ವಿಪರ್ಯಾಸವೇ ಸರಿ. ಇದಕ್ಕೆ ನಿದರ್ಶನವಾಗುವಂತಹ ಮತ್ತೊಂದು ಪ್ರಕರಣವು 'ವಾಲ್ಮೀಕಿ'ಯಲ್ಲಿ ಬರುತ್ತದೆ: "ಮುಂಜಾನೆ ಧನಟ್ಟಿಗೆ ಹೋಗಬೇಕೆಂದು ನಿರ್ಧರಿಸಿದೆ. ಕಮಲಿಗೆ ರಾತ್ರಿಯೇ ವಿಷಯ ತಿಳಿಸಿ ನಾನು ಧನಟ್ಟಿಗೆ ಹೊರಟಿರುವುದಾಗಿ ಹೇಳಿದೆ. ಹೊರಗೆ ಮಳೆ ಸುರಿಯುತ್ತಿತ್ತು, ನಾನು ಸೈಕಲ್ ಹೊರತೆಗೆದೆ ಇಂತಹ ಮಳೆಯಲ್ಲಿ ಅದ್ಹೇಗೆ ಹೋಗುವಿರಿ? ಎಂದು ಆಕೆ ಕೇಳಲಿಲ್ಲ. ಧನಟ್ಟಿಯ ವಿಷಯ ಕೇಳಿ ಆಕೆ ದಿಗ್ಮೂಢಳಾಗಿದ್ದಳು. ಸೈಕಲನ್ನು ಬೆಳಗಾವಿ ಕಡೆಗೆ ಹೊರಳಿಸಿದೆ. ಬಸ್‌ಸ್ಟ್ಯಾಂಡಿನಲ್ಲಿ ಸೈಕಲ್ಲು ಬಿಟ್ಟು ಹುದಲಿಗೆ ಹೋಗುವ ಬಸ್ಸಿನ ಹಾದಿ ಕಾಯಲಾರಂಭಿಸಿದೆ. ಬಸ್ಸು ಏಳುಕಾಲಿಗೆ ಹೊರಡುವುದಿತ್ತು. ಬುಕ್‌ಸ್ಟಾಲಿನಲ್ಲಿ 'ತರುಣಭಾರತ' ಪತ್ರಿಕೆ ತೆಗೆದುಕೊಂಡೆ. ಅದರ ಮೊದಲ ಪುಟದಲ್ಲಿಯೇ ಧನಟ್ಟಿಯ ಗೋಲಿಬಾರಿನ ವಿಷಯ ಪ್ರಕಟವಾಗಿತ್ತು ಆದರೆ ಗೋಲಿಬಾರಿಗೆ ಕಾರಣವಾದ ಘಟನೆ ಪ್ರಿಂಟಾಗಿರಲಿಲ್ಲ. ಅಷ್ಟರಲ್ಲಿ ಬಸ್ಸು ಬಂತು. ಹತ್ತಿದೆ. ಅದು ಸಾವಕಾಶವಾಗಿ ಹೊರಟಿತು. ನನ್ನ ಮನಸ್ಸು ಮಾತ್ರ ಸಾವಿರ ಕಿಲೋಮೀಟರ್ ವೇಗದಿಂದ ಧನಟ್ಟಿಯ ಕಡೆಗೆ ಓಡುತ್ತಿತ್ತು."[೧೫] ಈ ಪ್ರಸಂಗ ಪತ್ರಿಕಾ ಮಾಧ್ಯಮದ ಇನ್ನೊಂದು ಮುಖವನ್ನು ಅನಾವರಣಗೊಳಿಸುತ್ತದೆ. ಘಟನೆಯ ಹಿನ್ನೆಲೆಯಲ್ಲಿರುವ ಜನರಿಗೆ ಕಾರಣಗಳನ್ನು ಜನಕ್ಕೆ ಹೇಳದಿರುವುದು ಅಕ್ಷರಸ್ಥ ಸಮುದಾಯಕ್ಕೆ ಪತ್ರಿಕಾರಂಗ ಮಾಡಿದ ಮೋಸವೇ ಸರಿ. ಆದರೆ ಮುಂದೆ ಅದೇ ಘಟನೆಗೆ ಸಂಬಂಧಿಸಿದಂತೆ ಗಸ್ತಿಯವರ ಲೇಖನವನ್ನು ಪ್ರಕಟಿಸಿ ತಾನು ಹಿಂದೆ ಮಾಡಿದ ತಪ್ಪಿಗೆ ಪ್ರಾಯಶ್ಚಿತ್ತ ಅನುಭವಿಸುವ ಕೆಲಸವನ್ನು ಅದೇ ಪತ್ರಿಕೆ ಮಾಡುತ್ತದೆ. ಅದರ ಈ ಪಶ್ಚಾತ್ತಾಪದ ಕಾರ್ಯವೈಖರಿ ಬಗ್ಗೆ ಈ ಮುಂದಿನ ಪ್ರಸಂಗ ಸೂಚಿಸುತ್ತದೆ:

“ಫೆಬ್ರವರಿ ೧೫, ೧೯೮೭ರ ತರುಣ ಭಾರತದಲ್ಲಿ ‘ವಕ್ರತುಂಡ’ ಎಂಬುವರ ಒಂದು ಲೇಖನ ಪ್ರಕಟವಾಯಿತು. ಹುಲಿಯೂರು ಗ್ರಾಮಕ್ಕೆ ಭೇಟಿ ನೀಡಿ ಹೋದ ನಿಯೋಗವನ್ನು ಅವರು ಕಟುವಾಗಿ ಟೀಕಿಸಿದ್ದರು. ಈ ಶಾಸಕರು, ಹುಲಿಯೂರಿನ ಪ್ರಕರಣದ ವಿಚಾರಣೆಗಾಗಿ ಬಂದಿದ್ದರೋ ಅಥವಾ ಅವರಿಂದ ಸನ್ಮಾನ ಸ್ವೀಕರಿಸಲೋ? ಎಂದು ವಕ್ರತುಂಡ ತಮ್ಮ ಲೇಖನದಲ್ಲಿ ಪ್ರಶ್ನೆಯನ್ನು ಮುಂದಿಟ್ಟಿದ್ದರು. ಎರಡು ತಿಂಗಳ ಹಿಂದೆ ಹುಲಿಯೂರಿನ ಬೇಡರನ್ನು ಪೊಲೀಸರು ಬಂಧಿಸಿದ್ದರು. ಅವರಿಗೆ ನಾನಾ ರೀತಿಯ ತೊಂದರೆಗಳನ್ನು ನೀಡಲಾಗಿತ್ತು. ಆಗ ಈ ನಾಯಕರುಗಳು ಬರಲಿಲ್ಲ. ರಾಜ್ಯದಲ್ಲಿ ಈ ನಾಯಕರುಗಳ ಪಕ್ಷದ್ದೇ ಸರ್ಕಾರವಿದೆ. ಆದರೂ ಪ್ರಕರಣದ ಬಗ್ಗೆ ಚೂರು ಆಸಕ್ತಿಯನ್ನು ಅವರು ತೋರಿಸಲಿಲ್ಲ. ಬೇಡರು ಬಿಡುಗಡೆಗೊಂಡ ನಂತರ ಇಲ್ಲಿ ಬಂದು ಸನ್ಮಾನ ಸ್ವೀಕರಿಸಿದ್ದು ಲಜ್ಜೆಗೆಡಿತನ ಎಂದು ಅವರು ಬರೆದಿದ್ದರು. ಇದನ್ನು ಓದಿ ನಾನು ಒಂದು ಲೇಖನ ಬರೆದೆ. ಬೇಡರ ಮುಗ್ಧತೆಯನ್ನು ದಲಾಲರು ಹೇಗೆ ದುರುಪಯೋಗ ಪಡಿಸಿಕೊಂಡರೆಂಬದನ್ನು ನಾನು ನನ್ನ ಲೇಖನದಲ್ಲಿ ಒತ್ತುಕೊಟ್ಟು ಹೇಳಿದ್ದೆ, ಈ ಲೇಖನವೂ ತರುಣ ಭಾರತದಲ್ಲಿ ಪ್ರಕಟವಾಯಿತು”[೧೬] ಹೀಗೆ ಒಮ್ಮೆ ತಪ್ಪು ಮಾಡಿದ್ದ ಪತ್ರಿಕೆ ಈಗ ಕರ್ತವ್ಯ ವಿಮುಖವಾಗದೆ ಗಸ್ತಿಯವರ ಲೇಖನ ಪ್ರಕಟಿಸಿ ಬೇಡರ ಜಾಗೃತಿಗೆ ಸಹಾಯಕವಾಗುತ್ತವೆ.

ಇದರಿಂದಾಗಿ ಪತ್ರಿಕೆ ಆಳುವ ವರ್ಗದ ವಿರುದ್ಧ ಸಮಾಜದ ಜನರಲ್ಲಿ ಜಾಗೃತಿ ಮೂಡಿಸುವಂತಾಗಿ ಪ್ರಭುತ್ವ ಎಚ್ಚತ್ತುಕೊಂಡು ತನ್ನ ಅಧಿಕಾರವನ್ನು ಸೂಕ್ತವಾಗಿ ಬಳಸತೊಡಗುತ್ತದೆ. ಆಗ ಬೇಡ ಜನರ ಸಮುದಾಯದ ಶೋಷಣೆಯ ಪ್ರಮಾಣ ಕಡಿಮೆಯಾಗುತ್ತದೆ.

ಹೀಗೆ ಪ್ರಭುತ್ವದ ಕಾರ್ಯಗಳನ್ನು ಎಚ್ಚರಿಕೆಯಿಂದ ಟೀಕಿಸಿ ನಾಗರಿಕ ಸಮಾಜವನ್ನು ಎತ್ತರಿಸುವ ಕಡೆ ಶೋಷಣೆ ಮುಕ್ತ ಸಮಾಜ ನಿರ್ಮಾಣಕ್ಕೆ ಪತ್ರಿಕೋದ್ಯಮ ಸಹಾಯಕವಾಗುತ್ತದೆ. ದುರ್ಬಲರು, ಹಿಂದುಳಿದವರು ಸಂಘಟನೆಗೊಂಡು ಬೆಳವಣಿಗೆ ಹೊಂದಿ ಪ್ರಬಲ ರಾಜಕೀಯ ಶಕ್ತಿಯಾಗಿ ಬೆಳೆಯಲು ಸಹಕಾರಿಯಾಗುತ್ತದೆ.

ಆಧುನಿಕ ಜಗತ್ತಿನಲ್ಲಿ ಸಮಾಜದ ತಳಸಮುದಾಯಗಳು ತಮ್ಮನ್ನು ಎಚ್ಚರಗೊಳಿಸಿಕೊಂಡು ತಮ್ಮ ಸ್ಥಿತ್ಯಂತರಗಳನ್ನು ತವಕ, ತಲ್ಲಣಗಳನ್ನು ಅಭಿವ್ಯಕ್ತಿಸುವ ಮೂಲಕ ಅಕ್ಷರಸ್ಥ ನಾಗರಿಕ ಸಮಾಜವನ್ನು ಎಚ್ಚರಿಸುವ ಕಾರ್ಯಮಾಡುತ್ತಿವೆ. ಒಮ್ಮೊಮ್ಮೆ ತಳಸಮುದಾಯದ ಅನಕ್ಷರಸ್ಥರ ವಿರುದ್ಧ ಪತ್ರಿಕೆಗಳು ನಿಂತರು ಅದು ಆಳುವ ಪ್ರಭುತ್ವದ ಕುತಂತ್ರ ರಾಜಕಾರಣದಿಂದ ಮಾತ್ರ ಕೊನೆಗೂ ಸಮುದಾಯ ಸಂಘಟನೆ, ಸಾಮಾಜಿಕ, ಆರ್ಥಿಕ, ರಾಜಕೀಯ, ಆಂದೋಲನಗಳ ವಿಷಯಗಳ ಕುರಿತು ಇಂದು ಅಕ್ಷರಸ್ಥ ಸಮುದಾಯಕ್ಕೆ ತಿಳುವಳಿಕೆಯನ್ನು ನೀಡುವುದರ ಮೂಲಕ ಪತ್ರಿಕಾ ಮಾಧ್ಯಮವು ಸಹಕಾರಿಯಾಗಿದೆ. ಇವು ಕೆಲವೊಮ್ಮೆ ಆಳುವ ವರ್ಗದ ಮೌಲ್ಯಗಳನ್ನು

ಆಳಿಸಿಕೊಳ್ಳುವವರ ಮೇಲೆ ಹೇರುವ ಕೆಲಸವನ್ನೆ ಮಾಡುವುದು ವಿಪರ್ಯಾಸಗಳಿಗೆ ಎಡೆಮಾಡಿಕೊಡುತ್ತದೆ. ಆದರೂ ಮಾಧ್ಯಮಗಳು ಸಮಾಜವನ್ನು ತಿದ್ದುವ ಕೆಲಸ ಮಾಡುವ ದಿಸೆಯಲ್ಲಿ ಗಸ್ತಿಯಂತಹ ಸಮಾಜ ಸುಧಾರಕರ ಜತೆ ಕೈ ಜೋಡಿಸುವುದನ್ನು ಇಲ್ಲಿ ಗಮನಿಸಬಹುದು.

ಟಿಪ್ಪಣಿಗಳು

೧. ಡಾ. ಭೀಮರಾವ್ ಗಸ್ತಿ, 'ವಾಲ್ಮೀಕಿ', ಪು. ೫೭,೫೮
೨. ಅದೇ „ ಪು. ೫೯
೩. ಅದೇ „ ಪು. ೭೩
೪. ಅದೇ „ ಪು. ೭೯
೫. ಅದೇ „ ಪು. ೮೦
೬. ಅದೇ „ ಪು. ೮೨
೭. ಅದೇ „ ಪು. ೧೨೬
೮. ಅದೇ „ ಪು. ೭೦,೭೧
೯. ಅದೇ „ ಪು. ೯೭,೯೮
೧೦. ಅದೇ „ ಪು. ೬೨
೧೧. ಅದೇ „ ಪು. ೮೩,೮೪
೧೨. ಅದೇ „ ಪು. ೮೪
೧೩. ಅದೇ „ ಪು. ೬೫
೧೪. ಅದೇ „ ಪು. ೭೯
೧೫. ಅದೇ „ ಪು. ೧೦೭
೧೬. ಅದೇ „ ಪು. ೧೧೯

ಅಧ್ಯಾಯ – ಆರು

‘ವಾಲ್ಮೀಕಿ’ ಆತ್ಮಕಥೆಯ ಕಥನ ಕ್ರಮ

ಅಧ್ಯಾಯ – ೬
'ವಾಲ್ಮೀಕಿ' ಆತ್ಮಕಥೆಯ ಕಥನ ಕ್ರಮ

ಸಾಹಿತ್ಯ ಕೃತಿಯೊಂದು ಎಷ್ಟೇ ಸಾಮಾಜಿಕ ವಿಶ್ಲೇಷಣೆಗೆ ಒಳಗಾದರೂ ಅಂತಿಮವಾಗಿ ಅದು ಕಲೆಯಾಗಿರುವ ಕಾರಣ ಕಲೆಯ ನೆಲೆಯಿಂದಲೂ ಪರಿಶೀಲನೆಗೆ ಒಳಗಾಗಬೇಕು. ಹಾಗಾಗಿ 'ವಾಲ್ಮೀಕಿ' ಆತ್ಮಕಥನದಲ್ಲಿ ರೂಪಕ ಮತ್ತು ಉಪಮೆ, ವಿಷಾದದ ವಾಕ್ಯರಚನೆ, ವಿಡಂಬನೆ ಮತ್ತು ವ್ಯಂಗ್ಯ, ಹಾಸ್ಯ ಪ್ರಸಂಗಗಳು, ಚರಿತ್ರೆಯ ಕಥನಕ್ರಮ, ಸಂಭಾಷಣೆ ಮತ್ತು ನಾಟಕೀಯತೆ, ಆತ್ಮಕಥನದ ಆರಂಭ ಮತ್ತು ಮುಕ್ತಾಯದ ರೀತಿ ಕುರಿತು ಈ ಅಧ್ಯಾಯದಲ್ಲಿ ಚರ್ಚಿಸಲಾಗುವುದು.

೬.೧. ರೂಪಕ ಮತ್ತು ಉಪಮೆ :

'ವಾಲ್ಮೀಕಿ' ಆತ್ಮಕಥೆ ಆರಂಭಗೊಳ್ಳುವುದೇ ರೂಪಕ ಮತ್ತು ಉಪಮೆಗಳ ಮೂಲಕ ಅಂತಹ "ಕಾಲಿಗೆ ಆಳವಾಗಿ ಚುಚ್ಚಿರುವ ಜಾಲಿಮುಳ್ಳು ನೋಯುತ್ತಿರುತ್ತದೆ. ಅದನ್ನು ತೆಗೆದಾಗ ಮಾತ್ರ ಆ ನೋವು ಕಡಿಮೆಯಾಗುತ್ತದೆ. ಮನಸ್ಸಿನಲ್ಲಿ ಹೆಪ್ಪುಗಟ್ಟಿರುವ ನೆನಪುಗಳು ಆಳವಾಗಿ ಬೇರೂರಿದ ವೇದನೆಗಳು. ಗೆಳೆಯರೇ, ಕೀವು ಹಿಡಿದ ಮುಳ್ಳು ನೀಡುವ ಈ ವೇದನೆಗಳ ಬಾಯಿಗೆ ಸೂಜಿ ಚುಚ್ಚಬೇಕು. ನೋವಿನ ಬಾಯಿ ತೆರೆದು ಕೀವು ಮತ್ತು ರಕ್ತ ಹರಿದರೂ ಈ ವೇದನೆಗೆ ಬಾಯಿ ನೀಡಬೇಕಾಗಿದೆ."[೧]

ಇಲ್ಲಿ ಗಮನಿಸಬೇಕಾದ್ದು ದಾರಿ, ಕಾಲು, ಮುಳ್ಳು, ಗಾಯಗಳ ರೂಪಕ. ಸಾಮಾನ್ಯವಾಗಿ ನಡೆದಾಡುವ ಮನುಷ್ಯ ಮುಳ್ಳನ್ನು ತುಳಿಯಲು ಸಾಧ್ಯ. ಹಾಗೆಯೇ ಎಡರು ತೊಡರುಗಳನ್ನು ಅನುಭವಿಸಲು ಸಾಧ್ಯ. ಇಲ್ಲಿ ಜೀವನವನ್ನು ಕ್ರಮಿಸುವ ದಾರಿಗೆ ಹೋಲಿಸಿ ಆತ್ಮಕಥೆ ಆರಂಭಗೊಳ್ಳುತ್ತದೆ. ಆ ಕ್ರಮಿಸುವ ದಾರಿ ಮುಳ್ಳು, ಕಲ್ಲುಗಳಿಂದ ಕೂಡಿದ್ದಾಗಿದೆ. ಅಲ್ಲದೆ ಬಾಲ್ಯ ಯೌವ್ವನ ತಂಗುದಾಣಗಳ

ಮುಖಾಂತರ ಆದ ಅಪಮಾನ, ಉಂಡನೋವು, ನಲಿವುಗಳನ್ನು ಕಥಿಸುತ್ತಾ ಲೇಖಕರು ಬದುಕಿನ ಘಟನೆಗಳನ್ನು ದಾಖಲಿಸಿದ್ದಾರೆ. ಹೀಗೆ ದಾಖಲಿಸುವಾಗ ತಮ್ಮದೇ ಆದ ಭಾಷೆಯಲ್ಲಿ ರೂಪಕ-ಉಪಮೆಗಳನ್ನು ಬಳಸಿದ್ದಾರೆ.

ಗಸ್ತಿಯವರು ಬಾಲ್ಯದಲ್ಲಿ ಶಿಕ್ಷಣ ಪಡೆಯುವಾಗ ಆದ ಅನುಭವವನ್ನು ಕಟ್ಟಿಕೊಡುವ ಪ್ರಸಂಗ ಹೀಗಿದೆ: "ಪ್ರತಿದಿನ ಶಾಲೆಗೆ ಹೋಗ ಹತ್ತಿದೆ. ಎಂದಾದರೂ ಒಂದು ದಿನ ಶಾಲೆ ತಪ್ಪಿಸಿದರೆ, ಉಳಿದ ಹುಡುಗರು ಮನೆಗೆ ಬರುತ್ತಿದ್ದರು. ನನ್ನನ್ನು 'ದರಾದರಾ' ಎಳೆದುಕೊಂಡು ಶಾಲೆಗೆ ಬಿಡುತ್ತಿದ್ದರು. ಒಂದೊಂದು ಸಲವಂತೂ ಎತ್ತಿಕೊಂಡು ಬಂದು ಶೆಗಣಿ ಬುಟ್ಟಿ ಒಗೆಯುವಂತೆ ಮಾಸ್ತರ್‌ನ ಎದುರು ಒಗೆಯುತ್ತಿದ್ದರು. ಆಗ ಮಾಸ್ತರ್ ಪರಶ್ಯಾನಿಗೆ ನನಗೆ ನಾಲ್ಕಾರು ಒದೆಯಲು ಹೇಳುತ್ತಿದ್ದ. ನನ್ನ ಜಾತಿಯವನೇ ಆಗಿರುವ ಪರಿಶ್ಯಾ ನನಗೆ ಚಟ್ನಿ ಕುಟ್ಟಿದಂತೆ ಕುಟ್ಟುತ್ತಿದ್ದ"[೨] ಇಲ್ಲಿ ಬಳಕೆಯಾಗಿರುವ 'ಶೆಗಣಿಬುಟ್ಟಿ' ಮತ್ತು ಚಟ್ನಿಗಳ ಉಪಮೆಗಳನ್ನು ಗಮನಿಸಬೇಕು. ಶಾಲೆಗೆ ಕರೆತಂದು ಮಾಸ್ತರ್‌ನ ಎದುರಿಗೆ ನಿಲ್ಲಿಸುವಾಗಿನ ಅರ್ಥವನ್ನು ಸಗಣಿ ಬುಟ್ಟಿ ಒಗೆಯುವಂತೆ ಒಗೆಯುವುದು ಮತ್ತು ಚಟ್ನಿಕುಟ್ಟಿದಂತೆ ಕುಟ್ಟುತ್ತಿದ್ದ ಹೊಡೆತಗಳ ಬಗ್ಗೆ ಲೇಖಕರು ಉಪಮೆ-ರೂಪಕಗಳನ್ನು ಬಳಸಿ ಅದರ ನೋವನ್ನು ಹಿಡಿದಿಡುವ ಕೆಲಸ ಮಾಡಿದ್ದಾರೆ. ಇಲ್ಲಿ ಗ್ರಾಮೀಣ ಭಾಷೆಯ ಸೊಗಡನ್ನು ಗುರುತಿಸಬಹುದಾಗಿದೆ. ಅಲ್ಲದೆ ಆತ್ಮಕಥೆಯ ತುಂಬ ಹಲವಾರು ರೂಪಕ-ಉಪಮೆ ಬಳಕೆಯಾಗಿವೆ. ಇದಕ್ಕೆ ಇಂಬು ನೀಡಿದಂತಿರುವ ಮುಂದಿನ ಸಾಲನ್ನು ಗಮನಿಸಬಹುದು. "ಈಗ ಬೇಸಿಗೆ ಆರಂಭವಾಗಿತ್ತು. ಸೂರ್ಯ ಬೆಂಕಿ ಉಗುಳುತ್ತಿದ್ದ. ಮದುವೆಯ ಸೀಜನ್ನು ಆರಂಭವಾಗಿತ್ತು"[೩] ಇಲ್ಲಿ ಬೇಸಿಗೆ ಕಾಲದ ಸೂರ್ಯನ ಬೆಳಕಿನ ಶಾಖವನ್ನು ಹೇಳಲು ಸೂರ್ಯಬೆಂಕಿ ಉಗುಳುತ್ತಿದ್ದಾನೆಂಬ ರೂಪಕವನ್ನು ಬಳಸಲಾಗಿದೆ. ಇಲ್ಲಿ ಗಸ್ತಿಯವರ ಯೌವ್ವನದಲ್ಲಿ ಬರುವ ಪ್ರಸಂಗವೊಂದರ ವರ್ಣನೆ ಹೀಗಿದೆ. "ಆ ಹುಡುಗಿ ಮತ್ತೆ ನನ್ನೆದುರು ಬಂದುನಿಂತಳು. ನನ್ನ ಲಕ್ಷ್ಯ ಅವಳ ಕಾಲಿನೆಡೆಗೆ ಹೋಯ್ತು ಗೋಧಿಬಣ್ಣದ ಕಾಲಿನಬೆರಳುಗಳು. ಅರೆ ಇವಳು ಕಮಲಿಯೇ! ನನ್ನ ಮುಖ ಸಂತಸದಿಂದ ಅರಳಿತು"[೪] ಇಲ್ಲಿನ ಉಲ್ಲಾಸದಲ್ಲಿ ಸಹಜವಾಗಿ ಹೆಣ್ಣಿನ ಸೌಂದರ್ಯ ಮತ್ತು ಮೈಬಣ್ಣ ಹೇಳಲು ರೈತಾಪಿ ಮತ್ತು ಧಾನ್ಯದ ಕೋಕದ ಉಪಮೆ ಬಳಕೆಯಾಗಿದೆ. ಈ ಆತ್ಮಕತೆಯಲ್ಲಿ ಬರುವ ಉಪಮರ-ರೂಪಕಗಳ ಜಗತ್ತಿಗೂ ದಿನನಿತ್ಯದ ಬದುಕಿಗೂ ನೇರ ಸಂಬಂಧವಿದೆ. ಹಾಲು, ಸಗಣಿ, ಚಟ್ನಿ, ಗೋಧಿ, ಬೆಂಕಿ ಇಲ್ಲವೆ ಈ ನಿತ್ಯ ಬದುಕಿನ ಲೋಕವದು.

ಗಸ್ತಿಯವರು ತಮ್ಮ ಹೆಂಡತಿ ಕಮಲಿಯವರ ಜತೆಗಿನ ಏಕಾಂತದ ಕ್ಷಣಗಳನ್ನು ರೂಪಕ ಉಪಮೆಗಳ ಮೂಲಕ ಹಂಚಿಕೊಂಡಿರುವ ರೀತಿ ಹೀಗಿದೆ. "ಆಕೆ ನನ್ನನ್ನು ಮತ್ತು ನಾನು ಆಕೆಯನ್ನು ಸುಮ್ಮನೇ ನೋಡುತ್ತ ಕುಳಿತುಕೊಳ್ಳುತ್ತಿದ್ದೆವು. ಕಣ್ಣುಗಳೇ ನಮ್ಮ ಭಾಷೆಯಾಗಿತ್ತು.

ಕಮಲಿಯ ಮೈಬಣ್ಣ ಹಾಲಿನಂತೆ ಬಿಳಿ. ಈಗ ಮೈಕೈ ತುಂಬಿಕೊಂಡು ಮತ್ತಷ್ಟು ಸುಂದರಿಯಾಗಿ ಕಾಣಿಸುತ್ತಿದ್ದಳು."[೫] ಈ ವರ್ಣನೆ ಮುಂದುವರೆದು "ಬೇಕಾದ ಬಳ್ಳಿ ಕಾಲಿಗೆ ಅಡರಿದಂತಾಯಿತು."[೬] ಎಂದು ಮುಗಿಯುತ್ತದೆ. ಇಂತಹ ಸಾಲುಗಳು ಆತ್ಮಕಥೆಯ ತುಂಬ ಸಾಕಷ್ಟು ಸಿಗುತ್ತವೆ. ಇವು ಚಿತ್ರಣವನ್ನು ಕಣ್ಣಿಗೆ ಕಟ್ಟಿದಂತೆ ಮಾಡಿ ಓದು ಮುಂದುವರೆಸಲು ಅನುವುಮಾಡಿಕೊಡುತ್ತವೆ. ಗಸ್ತಿಯವರು ವ್ಯವಸ್ಥೆಯನ್ನು ಕುರಿತು ಬಳಸಿರುವ ರೂಪಕಗಳು ಕೂಡ ಧಾರ್ಮಿಕವಾಗಿವೆ. "ಪೋಲಿಸ್ ಸ್ಟೇಷನ್ ಯಮನ ಊರು ಇದ್ದಂತೆ"[೭] ಎಂಬುದು ಇವುಗಳಲ್ಲಿ ಒಂದು. ರಾತ್ರಿಮಳೆ ಬರುವಿಕೆಯನ್ನು ತಮ್ಮದೇ ಮಾತುಗಳಲ್ಲಿ ಲೇಖಕರು ಹೀಗೆ ಹೇಳಿದ್ದಾರೆ. "ರಾತ್ರಿಯ ಹೊತ್ತು ಮಳೆಯ ರಭಸ ಹೆಚ್ಚಾಯಿತು. ಆಕಾಶಕ್ಕೆ ತೂತುಬಿದ್ದಂತೆ ಮಳೆ ಹೊಡೆಯ ಹತ್ತಿತ್ತು"[೮] ಹೀಗೆ ರೂಪಕ ಮತ್ತು ಉಪಮೆಗಳು ಬಳಕೆಗೊಂಡಿವೆ.

'ವಾಲ್ಮೀಕಿ' ಆತ್ಮಕಥೆಯು ಹೇಗೆ ಬೇರೆ ಬೇರೆ ರೂಪಕ–ಉಪಮೆಗಳ ಮೂಲಕ ತನ್ನ ಕಥನ ಕ್ರಮವನ್ನು ಬೆಳೆಸುತ್ತಾ ಹೋಗಿದೆ. ಅಲ್ಲಲ್ಲಿ ಅನುಕರಣೆ ಪದಗಳು ಬಳಕೆಗೊಂಡು ಕಥೆಗೆ ಸೊಬಗನ್ನು ತಂದಿವೆ. ಅಲ್ಲದೆ ತೀವ್ರತರವಾದ ನೋವುನಲಿವುಗಳನ್ನು ವ್ಯಕ್ತಪಡಿಸಲು ಈ ರೂಪಕ–ಉಪಮೆಗಳನ್ನು ಗಸ್ತಿಯವರು ಸಮರ್ಥವಾಗಿ ಬಳಸುತ್ತಾರೆ. ಅವರದು ಚಿತ್ರಕವಾದ ಭಾಷೆ.

೬.೨. ವಿಷಾದದ ವಾಕ್ಯ ರಚನೆ :

'ವಾಲ್ಮೀಕಿ' ಆತ್ಮಕಥೆಯಲ್ಲಿ ಲೇಖಕರು ತಮ್ಮ ಅಸಹಾಯಕತೆಗಳನ್ನು ಹೇಳಿಕೊಳ್ಳಲು ಆಡುವ ಮಾತುಗಳು ಆಳವಾದ ವಿಷಾಧದಿಂದ ಕೂಡಿವೆ. ಗಸ್ತಿಯವರು ಪ್ರಾಥಮಿಕ ಶಿಕ್ಷಣಮುಗಿಸಿ ಹೆಚ್ಚಿನ ಓದಿಗಾಗಿ ಬೆಳಗಾವಿಗೆ ಹೋದಾಗ ಅಲ್ಲಿನ ಮಾಸ್ತರ್ ವಿದ್ಯಾರ್ಥಿಗಳನ್ನು ಕುರಿತು ಒಬ್ಬಬ್ಬರಾಗಿ ಹೇಳಲು ಕೇಳುವ ಪ್ರಸಂಗವಿದೆ: "ನನ್ನ ಸರದಿ ಬಂದಾಗ ನಾನು ಎದ್ದುನಿಂತೆ ಈಗ ಏನಾದರೂ ಮಾತನಾಡಬೇಕೆನ್ನುವಷ್ಟರಲ್ಲಿ ಉಳಿದ ಹುಡುಗರು 'ಗಸ್ತಿಗಳ್ಳನಾಗುತ್ತಾನೆ' ಗಸ್ತಿ ದರೋಡೆಕೋರನಾಗುತ್ತಾನೆ ಎಂದು ಹೇಳಹತ್ತಿದ್ದರು. ಹಲವರು ನಗಲಾರಂಭಿಸಿದರು. ಮಾಸ್ತರ್‌ರು ಎಷ್ಟೇ ಗದರಿಸಿದರೂ ಹುಡುಗರು ಗಲಾಟೆ ಮಾಡುವುದನ್ನು ನಿಲ್ಲಿಸಲಿಲ್ಲ. ಇವರೆಲ್ಲರ ಗಲಾಟೆಯಿಂದ ನನ್ನ ಬಾಯಿಯೇ ಬಂದಾಯಿತು. ಮಾತುಗಳೇ ಹೊರಡಲಿಲ್ಲ ಕಣ್ಣಿಂದ ಧಾರಾಕಾರ ನೀರುಬಂತು. ಮುಖ ಕೆಳಗೆ ಹಾಕಿ ಅಳುತ್ತ ಕೂತುಕೊಂಡೆ"[೯] ಇಲ್ಲಿನ ಭಾಷೆಯಲ್ಲಿ ನಿರೂಪಕ ಅನುಭವಿಸಿದ ಅಸಹಾಯಕತೆ, ಅಪಮಾನ, ನೋವುಗಳ ಆಳವನ್ನು ಊಹಿಸಬಹುದಾಗಿದೆ. ಆತ್ಮಕಥೆ ಮುಂದುವರೆದಂತೆಲ್ಲಾ ವಾಲ್ಮೀಕಿ ಸಮುದಾಯದ ಆಚರಣೆಗಳಲ್ಲೊಂದಾದ ದೇವದಾಸಿ ಪದ್ಧತಿಯ ಪ್ರಸಂಗ ಬಂದಾಗ ಆಡುವ ವಿಷಾದ ಮಾತುಗಳಿವು:

“ಸತ್ಯವ್ವಾಳು ದೇವದಾಸಿಯಾದ ಮೇಲೆ ಶೆರೆ ಮಾರುತ್ತಿರುವಾಗ, ಊರಿನ ಪುರುಷನೊಬ್ಬ ಕುಡಿಯಲು ಬಂದಾತ ಅವಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಲು ಹೋದಾಗ ಅದಕ್ಕೊಪ್ಪದ ಸತ್ಯವ್ವಳ ಕುಡುಗೋಲಿಡಿದು ಪ್ರತಿಭಟಿಸಿ, ಕೈಯಲ್ಲಿದ್ದ ಕುಡುಗೋಲನ್ನು ಪಕ್ಕಕ್ಕೆ ಒಗೆದು ಸತ್ಯವ್ವ ನನ್ನನ್ನು ಹತ್ತಿರಕ್ಕೆ ಕರೆದು ಅಪ್ಪಿಕೊಂಡು ಅಳಹತ್ತಿದ್ದಳು. ಇಲ್ಲಿ ನೋಡಿದ್ದನ್ನು ಯಾರಿಗೂ ಹೇಳಬೇಡ ಎಂದು ಆಣೆಮಾಡಿಸಿಕೊಂಡಳು. ಅವಳ ಕಣ್ಣುಗಳಿಂದ ಹರಿದನೀರು ಗಲ್ಲವನ್ನು ತೋಯಿಸಿತ್ತು. ಅವಳ ಕೈಗಳ ಕಡೆನೋಡಿದೆ. ಅಲ್ಲಿ ಯಲ್ಲವ್ವಳ ಮಣಿಗಳು ಹೊಳೆಯುತ್ತಿದ್ದವು. ಅವಳನ್ನು ಅಪ್ಪಿ ನಾನು ಅಳಹತ್ತಿದೆ”[೧೦] ಈ ಮಾತುಗಳಲ್ಲಿ ಸತ್ಯವ್ವಳ ಅಸಹಾಯಕತೆ ವ್ಯಕ್ತವಾಗಿರುವುದು ಅರಿವಿಗೆ ಬರುತ್ತದೆ, ಯಲ್ಲಮ್ಮ ದೇವತೆಯ ಹೆಸರಿನಲ್ಲಿ ದೇವದಾಸಿಯಾಗಿರುವ ಅವಳ ಮೇಲಾದ ದೌರ್ಜನ್ಯ ಹಾಗೂ ಅದಕ್ಕೆ ಗಸ್ತಿಯವರ ಪ್ರಕ್ರಿಯೆ ಎರಡೂ ಇಲ್ಲಿ ಸರಳವಾಗಿ ಆದರೆ ಮನಕಲಕುವಂತೆ ನಿರೂಪಿತವಾಗಿವೆ.

ಗಸ್ತಿಯವರು ಶಿಕ್ಷಣ ಪಡೆಯುವಾಗ ಗೆಳೆಯರು ಮಾಡುತ್ತಿದ್ದ ಕೆಲಸಗಳ ಬಗ್ಗೆ ಹೇಗೆ ವಿಷಾದ ದಿಂದ ಹೀಗೆ ಚಿತ್ರಿಸುತ್ತಾರೆ. “ನನ್ನ ಜೊತೆಗೆ ಗೌಂಡವಾಡದ ನಾಲ್ಕಾರು ಹುಡುಗರೂ ಇದ್ದರೂ ಅವರು ಭಾರೀ ತುಂಟರಾಗಿದ್ದರು. ರಸ್ತೆ ಪಕ್ಕದ ಗಿಡಗಳನ್ನು ಮಂಗನ ಹಾಗೆ ಅವರು ಸಹಜವಾಗಿ ಏರುತ್ತಿದ್ದರು. ಗಿಡದ ಹಣ್ಣುಗಳನ್ನು ತಿನ್ನುತ್ತಿದ್ದರು. ಗಿಡದ ಪೊಟರೆಯಲ್ಲಿದ್ದ ಹಕ್ಕಿಗಳ ಗೂಡುಗಳನ್ನು ಕಿತ್ತು ರಸ್ತೆಗೆ ಒಗೆಯುತ್ತಿದ್ದರು. ಪೊಟರೆಯಲ್ಲಿದ್ದ ಮರಿಹಕ್ಕಿಗಳನ್ನು ರಸ್ತೆಯ ಮೇಲಿಟ್ಟು ಅವುಗಳ ಮೇಲೆ ವಾಹನ ಹಾಯ್ದು ಹೋದಾಗ ಗಟ್ಟಿಯಾಗಿ ಕೇಕೆ ಹಾಕುತ್ತಿದ್ದರು. ಅವರ ಈ ಕೃತ್ಯದಿಂದ ನನಗೆ ಅಸಹನೀಯ ಸಿಟ್ಟು ಬರುತ್ತಿತ್ತು. ಅವರಿಗೆ ಪಾಠಕಲಿಸಬೇಕೆಂದರೆ ನನ್ನ ಜೊತೆಗೆ ಯಾರೂ ಇರುತ್ತಿರಲಿಲ್ಲ. ಅವರ ಈ ಅಮಾನವೀಯ ಕೃತ್ಯವನ್ನು ನಾನು ಅಸಾಯಕನಾಗಿ ನೋಡುವಂತಾಯಿತು.”[೧೧]

ಮಾಮಾ ಸತ್ತ ಮೇಲೆ ಮಾಮಿ ಊರಿಗೆ ಬಂದಾಗ ಗಸ್ತಿಯವರ ತಾಯಿಯೊಂದಿಗೆ ನಡೆಯುವ ಮಾತುಕಥೆಯಲ್ಲಿಯೂ ಇದೇ ಬಗೆಯ ಅಸಹಾಯಕತೆ ವ್ಯಕ್ತವಾಗುತ್ತದೆ: “ನಿಮ್ಮ ಅಣ್ಣ ಸತ್ತನಂತರ ಹದ್ದಿನಂತೆ ಎಲ್ಲರೂ ನನ್ನ ಮೇಲೆ ಎರಗಿದರು ಸಾಲದ ಹಣ ವಾಪಸ್ಸು ಕೊಡಲು ಪೀಡಿಸಿದರು. ನಾನು ಒಬ್ಬಳೇ ಹೆಂಗಸೆಂಬುದನ್ನೂ ಅವರು ಗಮನಿಸಲಿಲ್ಲ. ಸಾಲ ಬಗೆಹರಿಸಲು ಹಗಲು ರಾತ್ರಿ ಪೀಡಿಸಿದರು. ನಾನು ಇದ್ದುದೆಲ್ಲವನ್ನು ಅವರಿಗೆ ಕೊಟ್ಟು ಸಾಲದಿಂದ ಮುಕ್ತಳಾದೆ. ಇದ್ದಾಗ ಎಲ್ಲರೂ ಭೇಟಿಯಾಗಲು ಬರುತ್ತಿದ್ದರು. ಈಗ ನನ್ನ ಹತ್ತಿರ ಏನೂ ಇಲ್ಲ. ಯಾರೂ ಭೇಟಿಯಾಗಲು ಬರುವುದಿಲ್ಲ. ಬೆಲ್ಲ ಇರುವವರೆಗೆ ಇರುವೆಗಳು ಎಂದು ಹೇಳಿ ಅಳಹತ್ತಿದಳು. ಅವ್ವ ಪರಿಪರಿಯಾಗಿ ಅವಳನ್ನು ಸಂತೈಸಿದಳು”[೧೨] ಮಾಮಿಯು ನೋವನ್ನು ಗಸ್ತಿಯವರ ತಾಯಿ ಒಬ್ಬ ಹೆಣ್ಣಾಗಿ ಅನುಭವಿಸಿ ಆಕೆಯನ್ನು ಸಂತೈಸುತ್ತಿರುವ ಈ ಚಿತ್ರದಲ್ಲಿ ಒಂದು ಬಗೆಯ ಸಹಜತೆ

ಇದೆ. ಬೆಲ್ಲ ಮತ್ತು ಇರುವೆಗಳ ರೂಪಕವು ಹೆಣ್ಣಿನ ಶೋಷಣೆಯ ಚಿತ್ರವನ್ನು ವಿಶಿಷ್ಟವಾಗಿ ಕಾಣಿಸುತ್ತದೆ. ಲಗಮಣ್ಣನ ಸಾವು ನಿರೂಪಕರ ಕುಟುಂಬದ ಮೇಲೆ ಬೀರಿದ ಪರಿಣಾಮವನ್ನು ಗಸ್ತಿಯವರ ತಂದೆ ಆಡುವ ವಿಷಾದದ ಮಾತುಗಳನ್ನು ನೋಡಬಹುದು ಆ ಪ್ರಸಂಗ ಹೀಗಿದೆ.

"ಲಸಮಾಕ ಅಪ್ಪಾ ಅವನೆಡೆಗೆ ಹೋಗಿ ಹೀಗೆ ಅಳುತ್ತ ನಿಂತರ ಲಗುಮಣ್ಣನೇನು ವಾಪಸ್ಸು ಬರ್ತಾನಾ? ನಡೆಮನೆಗೆ ಇನ್ನೂ ಕೆಲಸಗಳು ಬಾಕಿ ಇವೆ ಎಂದು ಹೇಳಿ ಅಪ್ಪನ ಕೈಹಿಡಿದುಕೊಂಡಳು ಅಪ್ಪನ ಕಣ್ಣು ನೀರಿನಿಂದ ತೋಯ್ದಿತ್ತು. ಲಗಮಣ್ಣ ಎಲ್ಲರಿಗೂ ಪ್ರಿಯನಾಗಿದ್ದವ, ನೋಡು ನಾವೇ ಅವನನ್ನು ಸುಡುಗಾಡಿಗೆ ಕಳಿಸುವಂತಾಯಿತು, ಎಂದು ಹೇಳಿ ಅಪ್ಪ ದುಃಖಿಸ ಹತ್ತಿದ"[೧೩] ಸರಳವಾದ ಈ ವಾಕ್ಯಗಳು ಸನ್ನಿವೇಷವನ್ನು ಮನಸ್ಸಿಗೆ ಕಟ್ಟಿಕೊಡುತ್ತವೆ. ವ್ಯವಸ್ಥೆಯ ವಾಲ್ಮೀಕಿ ಸಮುದಾಯದ ಮೇಲೆ ಎಸಗುತ್ತಿರುವ ದೌರ್ಜನ್ಯ ಕುರಿತಾದ ವಿಷಾದದ ಚಿತ್ರವನ್ನು ಆತ್ಮಕಥೆ ಹೀಗೆ ನೀಡುತ್ತದೆ. "ಪೊಲೀಸರ ಈ ದೌರ್ಜನ್ಯ ಬರೀ ಬೇಡರಿಗೆ ಮಾತ್ರ ಇತ್ತು ಹೀಗೇಕೆ? ಹೀಗೇಕೆ? ಎಂದು ಪ್ರಶ್ನಿಸಿಕೊಂಡೆ. ನಮ್ಮ ಊರಿನ ಪಕ್ಕದಲ್ಲಿಯೇ ಗುಡ್ಡ ಇತ್ತು. ಅಲ್ಲಿಯ ಬೇಡರನ್ನು ಪೊಲೀಸರು ಹಿಂಸಿಸುತ್ತಿದ್ದರು. ಅಲ್ಲಿಯ ಯಾವ ಬೇಡರವನೂ ನಲ್ವತ್ತು ಐವತ್ತು ವರ್ಷ ಬದುಕಿರಲಿಲ್ಲ. ಯಾರು ನೈಸರ್ಗಿಕವಾಗಿ ಸತ್ತಿಲ್ಲ. ಅಲ್ಲಿದ್ದ ಎಲ್ಲ ಗಂಡಸರು ಪೊಲೀಸರ ಲಾಠಿಗಳಿಂದಲೇ ಸತ್ತಿದ್ದರು."[೧೪] ಏನುಮಾಡಲಾಗದ ದುರ್ಬಲತೆ, ಅಕ್ರೋಶಗಳು ಇಲ್ಲಿ ವ್ಯಕ್ತಗೊಂಡು ಇಡೀ ವ್ಯವಸ್ಥೆಯ ಕ್ರೌರ್ಯವನ್ನು ಕಾಣಿಸುತ್ತವೆ.

ಗಣೇಶ ಹಬ್ಬದಲ್ಲಿ ಗಣೇಶನನ್ನು ಕೂಡಿಸಿ ಪೂಜಿಸುವ ಒಂದು ಸನ್ನಿವೇಷ ಆತ್ಮಕಥೆಯಲ್ಲಿ ಬರುತ್ತದೆ: "ಒಂದು ವೇಳೆ ಕಳವು ಮಾಡದಿದ್ದರೂ ನಿಮಗೆ ಕಳ್ಳತನದ ಆರೋಪ ಬರಲಿ" ಎಂದೂ ಶಾಪ ವಿಸ್ತರಿಸಿದ. ಹೀಗಾಗಿ ನಾವು ಯಾರೂ ಅವನನ್ನು ಪೂಜಿಸುವುದಿಲ್ಲ ಎಂದು ಅಜ್ಜಿ ಹೇಳಿದ್ದಳು. ಅಂದು ರಾತ್ರಿ ಆಕಾಶದ ಚಂದ್ರನನ್ನು ನೋಡಬಾರದೆಂದೂ ಅಜ್ಜಿ ಹೇಳುತ್ತಿದ್ದಳು. ಅಕಸ್ಮಾತ್ ನೋಡಿದರೆ ಬೇರೆಯವರ ಮನೆಯ ಮೇಲೆ ಕಲ್ಲು ತೂರಲು ಹೇಳುತ್ತಿದ್ದಳು. ಹಬ್ಬದ ರಾತ್ರಿ ಬೇಡರ ವಸ್ತಿಯ ಮನೆಗಳ ಮೇಲೆ ಕಲ್ಲುಗಳ ಸುರಿಮಳೆಯಾಗುತ್ತಿತ್ತು. ಆದರೆ ಯಾರು ಆ ಬಗ್ಗೆ ತಕರಾರು ಮಾತನಾಡುತ್ತಿರಲಿಲ್ಲ."[೧೫] ಬೇಡರು ಸಮಾಜದ ತಳಸಮುದಾಯದವರಾದ್ದರಿಂದ ಗಣೇಶನ ಹಬ್ಬವನ್ನು ಮಾಡಲಾರರು. ಆದರೆ ಉಳಿದವರ ಪಾಲಿನ ಹಬ್ಬ ಇವರ ಪಾಲಿಗೆ ನರಕವಾಗುತ್ತದೆ. ಇಲ್ಲಿರುವ ವಿಷಾದನೀಯ ವಾಕ್ಯಗಳು ಓದುಗರ ಮನಸ್ಸನ್ನು ವಿಮರ್ಶೆಗೊಳಗಾಗುವಂತೆ ಮಾಡುತ್ತವೆ.

ದೇವದಾಸಿ ಪದ್ಧತಿಯ ಬಗೆಗಿನ ನಿರೂಪಕರ ಪ್ರತಿಕ್ರಿಯೆ ಕೂಡ ಇದೇ ರೀತಿಯಲ್ಲಿದೆ: "ಇದೆಲ್ಲವನ್ನೂ ಕೇಳಿ ನಾನು ದಿಗ್ಮೂಢನಾದೆ ದೇವರಿಗೆ ಅರ್ಪಿಸಿದ ಇಂತಹ ಹುಡುಗಿಯರ ಬಗ್ಗೆ ಸಮಾಜದಲ್ಲಿ ತಿರಸ್ಕಾರದ ಭಾವನೆ ಇತ್ತು. ಪರಶುರಾಮನ ಜೊತೆಗೆ ಸತ್ಯೆವ್ವಳ ಮದುವೆಯಾಗಿತ್ತು.

ಆತನೇಕೆ ಅವಳನ್ನು ರಕ್ಷಿಸಲಿಲ್ಲ? ತನ್ನ ಪ್ರಾಣವನ್ನು ನೀಡಿ ಸತ್ಯವ್ವ ಎಲ್ಲಾ ಕಷ್ಟಗಳಿಂದ ಮುಕ್ತಳಾಗಿದ್ದಳು. ನನ್ನ ತಂಗಿ ಮಲ್ಲವ್ವಳನ್ನೂ ದೇವದಾಸಿಯನ್ನಾಗಿ ಮಾಡಲಾಗಿತ್ತು. ಅವಳೂ ಇದೇ ರೀತಿ ಜೀವ ಮಾಡುವಳೇ ಎಂದು ತಲೆ ಗರಗರಾಂತ ತಿರುಗಲಾರಂಭಿಸಿತು"[೧೬] "ಯಾರೂ ಜಮೀನನ್ನು ಮಾರುತ್ತಾರೋ ಅಂತಹವರ ಮಕ್ಕಳಿಗೆ ಕಾರ್ಖಾನೆಯಲ್ಲಿ ನೌಕರಿ ನೀಡಲಾಗುವುದೆಂದೂ ಆರಂಭದಲ್ಲಿ ಹೇಳಿದ್ದರು. ನಮ್ಮ ಜನರು ಮೊದಲೇ ಹೆಬ್ಬೆಟ್ಟು ವೀರರು. ಅಜ್ಞಾನಿಗಳು, ಮುಗ್ಧರು. ಇವರ ಬಣ್ಣದ ಆಶ್ವಾಸನೆಗಳಿಗೆ ಮರುಳಾಗಿ ಜನರು ತಮ್ಮ ಜಮೀನುಗಳನ್ನು ಕಾರ್ಖಾನೆಗೆ ವರ್ಗಾಯಿಸಿದ್ದರು"[೧೭]

ಗಸ್ತಿಯವರು ಸಮುದಾಯದ ಸಂಘಟನೆಯಲ್ಲಿ ತೊಡಗಿರುವಾಗ ಚಿತ್ರದುರ್ಗದ ನಾಯಕರೊಬ್ಬರಿಗೆ ಆಹ್ವಾನ ನೀಡಿದಾಗ ಆತ ತನ್ನ ಅಹಂ ವ್ಯಕ್ತಪಡಿಸುತ್ತಾನೆ. ಆಗ ಗಸ್ತಿಯವರು "ನಿಮ್ಮಂಥವರು ಸಮ್ಮೇಳನಕ್ಕೆ ಬರದಿದ್ದರೆ ಹಂಡೆ ಹಾಲುಕುಡಿದಷ್ಟು ಸಂತೋಷವಾಗುತ್ತದೆಂದು ಮನಸ್ಸಿನಲ್ಲಿಯೇ ಅಂದುಕೊಂಡೆ"[೧೮] ಎಂದು ಬರೆದುಕೊಳ್ಳುತ್ತಾರೆ. ಇದೇ ರೀತಿಯಾಗಿ ನಾನಾ ರೀತಿಯ ವಿಷಾದಭರಿತ ವಾಕ್ಯಗಳು ಈ ಆತ್ಮಕಥೆಯ ತುಂಬ ತುಂಬಿವೆ. "ಕೋಣೆ ತುಂಬಕತ್ತಲೆ ಆವರಿಸಿತ್ತು. ಮಲಗಲು ಯತ್ನಿಸಿದೆ, ಆದರೆ ನಿದ್ರೆ ಹತ್ತಲಿಲ್ಲ. ಎದುರಿಗೆ ಧನಟ್ಟಿ ಬೇಡರ ಅಸಹಾಯಕ ಮುಖಗಳು ಕಾಣಿಸ ಹತ್ತಿದವು."[೧೯] ಇದು ಧನಟ್ಟಿ ಜನರ ಮೇಲೆ ಆದ ದೌರ್ಜನ್ಯ ಕುರಿತಾಗಿನ ಲೇಖಕನ ಪ್ರಕ್ರಿಯೆಯಾಗಿದೆ. ಇಲ್ಲಿನ ಸರಳವಾದ ಮಾತುಗಳು ವ್ಯವಸ್ಥೆಯ ಮೇಲೆ ಓದುಗರೂ ಆಕ್ರೋಶಗೊಳ್ಳುವ ರೀತಿಯಲ್ಲಿ ಸಶಕ್ತವಾಗಿವೆ.

೬.೩. ವಿಡಂಬನೆ ಮತ್ತು ವ್ಯಂಗ್ಯ :

'ವಾಲ್ಮೀಕಿ' ಆತ್ಮಕಥನದಲ್ಲಿ ರೂಪಕ ಮತ್ತು ಉಪಮೆ ವಿಷಾದದ ವಾಕ್ಯಗಳ ಜೊತೆಯಲ್ಲಿಯೇ ವಿಡಂಬನೆ ಮತ್ತು ವ್ಯಂಗ್ಯದ ವಾಕ್ಯಗಳು ಇವೆ. ಆದರೆ ಇವು ವಿಷಾದದ ವಾಕ್ಯಗಳಷ್ಟು ಹೆಚ್ಚು ಪ್ರಮಾಣದಲ್ಲಿ ಅಭಿವ್ಯಕ್ತಿಗೊಂಡಿಲ್ಲ. ಕೆಲವು ಕಡೆ ಕೆಲ ಸಂದರ್ಭಗಳಲ್ಲಿ ವಿಡಂಬನೆ ಮತ್ತು ವ್ಯಂಗ್ಯ ವ್ಯಕ್ತಗೊಂಡಿರುವುದನ್ನು ನಾವು ನೋಡಬಹುದಾಗಿದೆ.

ಕಾಮಣ್ಣನ ಹಬ್ಬದ ಕುರಿತ ಸಂದರ್ಭದಲ್ಲಿ ಆತ್ಮಕಥೆಯಲ್ಲಿ ಬಳಕೆಗೊಂಡಿರುವ ವಿಡಂಬನೆ ಮತ್ತು ವ್ಯಂಗ್ಯಗಳು ಹೀಗಿವೆ: "ಎರಡನೆಯ ದಿನ ಬೇಡರ ವಸ್ತಿಯ ಜನರು ಕಾಮಣ್ಣನ ಕರಿಯೆಂದು ಒಂದು ದನವನ್ನು ಕಡಿದರು. ದನವನ್ನು ತುಂಡು ಮಾಡುವಾಗ, ನಾವೋ ಬೇಡರು. ಒಂದು ತುಂಡು ಮಾಂಸ ನಮಗೆಲ್ಲಿ ಹತ್ತಬೇಕು? ದನದ ಮಾಂಸದಿಂದಲೇ ನಮ್ಮ ಹೊಟ್ಟೆ ತುಂಬುತ್ತದೆಂದು ಅವರು ನಗಾಡುತ್ತಿದ್ದರು."[೨೦] ಇದು ಸವರ್ಣೀಯರು ಕೆಳಜಾತಿಗಳ ಆಹಾರ ಮತ್ತು ಹಸಿವನ್ನು ಕುರಿತಂತೆ ಹೊಂದಿರುವ ತಿರಸ್ಕಾರ ದೃಷ್ಟಿಕೋನವಾಗಿದೆ.

ಗಸ್ತಿಯವರು ಶಿಕ್ಷಣ ಪಡೆಯುವಾಗ ಸಹಪಾಠಿಗಳು ಅವರನ್ನು ಛೇಡಿಸುವ ಸಂದರ್ಭದಲ್ಲಿ ಇವರು ಅಪಮಾನಕ್ಕೊಳಗಾಗುತ್ತಾರೆ. ಈ ಕುರಿತು ಲೇಖಕರ ಅನುಭವವು ವ್ಯಕ್ತಗೊಂಡಿರುವ ಬಗೆ ಹೀಗಿದೆ: "ಎರಡನೆಯ ವಾರ ಗಣಿತದ ಪರೀಕ್ಷೆ ಅದರಲ್ಲೂ ನಾನೇ ಮೊದಲನೆಯ ರ್‍ಯಾಂಕ್ ಪಡೆದೆ. ಷಾಣ್ಮಾಸಿಕ ಪರೀಕ್ಷೆಯಲ್ಲಿ ಇಡೀ ಶಾಲೆಗೆ ಮೊದಲಿಗನಾಗಿ ಉತ್ತೀರ್ಣನಾದೆ. ಪಾಟೀಲ ಶಿಕ್ಷಕರು ಸಂತೋಷಪಟ್ಟರು. ನನಗೆ ಮುಷ್ಟಿಯಲ್ಲಿರುವ ಮಾಣಿಕ್ಯ ಎಂದು ಕರೆಯಲಾರಂಭಿಸಿದರು. ಹುಡುಗರು ನನ್ನನ್ನು ಹೇಲು ಯಲ್ಲ್ಯಾ ಎಂದು ಕಾಡಿಸುತ್ತಿದ್ದವರು ಅವರ ಮುಖ ಈಗ ನೋಡುವಂತಾಗಿತ್ತು."[೨೧] ಈ ಮಾತುಗಳಲ್ಲಿ ಗೆದ್ದ ಆತ್ಮವಿಶ್ವಾಸ ವ್ಯಕ್ತಗೊಂಡಿದೆ. ಮೇಲ್ಜಾತಿಪರ ವ್ಯವಸ್ಥೆಯ ಬಗೆಗೆ ಗಸ್ತಿ ಆಕ್ರೋಶದ ರೀತಿಯಲ್ಲಿ ಬರೆಯುತ್ತಾರೆ.

'ವಾಲ್ಮೀಕಿ' ಆತ್ಮಕಥನದಲ್ಲಿ ವ್ಯಂಗ್ಯ ಮತ್ತು ವಿಡಂಬನೆ ಅಷ್ಟಾಗಿ ಬಳಕೆಗೊಳ್ಳದಿದ್ದರೂ ಅದು ಮಾತಿನ ರೂಪದಲ್ಲಿ, ಪ್ರಶ್ನೆಯ ರೂಪದಲ್ಲಿ. ಅಸಹಾಯಕತೆಯ ರೂಪದಲ್ಲಿ ವ್ಯಕ್ತಗೊಂಡು ಓದುಗನನ್ನು ಚಕಿತಗೊಳಿಸುತ್ತದೆ. ಅಲ್ಲದೆ ಅಲ್ಲಲ್ಲಿ ಹಾಸ್ಯ ಪ್ರಸಂಗಗಳು ಮೂಡಿಬಂದಿವೆಯಾದರೂ ಅವು ನಗೆಬರಿಸುವುದಿಲ್ಲ. ಹೆಚ್ಚಾಗಿ ವಿಷಾದ ವಾಕ್ಯರಚನೆಯಿಂದಾಗಿ ಓದುಗನ ಮನಸ್ಸನ್ನು ಹಿಡಿದಿಟ್ಟುಕೊಂಡು ವ್ಯವಸ್ಥೆಯ ಬಗ್ಗೆ ಸಮುದಾಯದ ನಿಕೃಷ್ಟ ಸ್ಥಿತಿಯ ಬಗ್ಗೆ ತಮ್ಮ ಭಾವನೆಯನ್ನು ಗಸ್ತಿಯವರು ಅದ್ಭುತವಾಗಿ ದಾಟಿಸುತ್ತಾರೆ.

೬.೪. ಚರಿತ್ರೆಯ ಕಥನ ಕ್ರಮ :

'ವಾಲ್ಮೀಕಿ' ಆತ್ಮಕಥನ ನಿರೂಪಣೆಗೊಂಡ ಬಗೆಯನ್ನು ಅವಲೋಕಿಸಿದಾಗ ಅಲ್ಲಿ ಬರುವ ಇಸವಿಗಳು ಹಾಗೂ ಕೆಲವು ಸಂದರ್ಭಗಳ ಬಗೆಗಿನ ಪ್ರಸ್ತಾಪಗಳು ಇತಿಹಾಸದ ಗ್ರಹಿಕೆಗೆ ಕಾರಣವಾಗುತ್ತವೆ. ಹಾಗಾಗಿ 'ವಾಲ್ಮೀಕಿ' ಆತ್ಮಕಥನದಲ್ಲಿ ಗಸ್ತಿಯವರು ಕಥಿಸಿರುವ ಕ್ರಮವನ್ನು ನಾವು ಆತ್ಮಕಥೆಯ ಮೂಲಕ ಕಟ್ಟಲ್ಪಟ್ಟ ಸಮುದಾಯದ ಇತಿಹಾಸವೆನ್ನಬಹುದು. "೧೯೬೫ರಲ್ಲಿ ಇಲ್ಲಿಯ ಜನರಿಗೆ ಅನೇಕ ಆಶ್ವಾಸನೆಗಳನ್ನು ನೀಡಿ ಕಾರ್ಖಾನೆಯ ಸಂಚಾಲಕರು ಸರ್ಕಾರಿದರದಲ್ಲಿ ಜಮೀನುಗಳನ್ನು ಖರೀದಿಸಿದ್ದರು. ಈ ಕಾರ್ಖಾನೆಯನ್ನು ಸರ್ಕಾರವೇ ಆರಂಭಿಸುತ್ತದೆಂದೂ ಒಂದು ವೇಳೆ ತಮ್ಮ ಜಮೀನುಗಳನ್ನು ಕಾರ್ಖಾನೆಗೆ ನೀಡದಿದ್ದರೆ ಅಂತಹವರ ಜಮೀನನ್ನು ಸರ್ಕಾರವು ವಶಪಡಿಸಿಕೊಳ್ಳುತ್ತದೆಂದು ಊರಲ್ಲಿ ವ್ಯಾಪಕವಾಗಿ ಪ್ರಚಾರ ಮಾಡಲಾಗಿದ್ದಿತು."[೨೪] ಭಾರತ ಸ್ವಾತಂತ್ರ್ಯಗೊಂಡು ದಶಕಗಳು ಕಳೆದಿವೆ ಕರ್ನಾಟಕವು ಏಕೀಕರಣಗೊಂಡು ತನ್ನ ಅಭಿವೃದ್ಧಿಗಾಗಿ ಪಂಚವಾರ್ಷಿಕ ಯೋಜನೆಗಳನ್ನು ಹಮ್ಮಿಕೊಂಡು ಕೈಗಾರಿಕೆಗಳ ಸ್ಥಾಪನೆಗೆ ಪ್ರಾಧಾನ್ಯತೆ ಕೊಟ್ಟಿದೆ. ಆದರೆ ಕೈಗಾರಿಕೆಗಳನ್ನು ಅಸಹಾಯಕ ರೈತಾಪಿ ಜನರ ಭೂಮಿಯನ್ನು ಕಿತ್ತುಕೊಂಡು ಸ್ಥಾಪನೆ ಮಾಡಲಾಯಿತು ಎಂಬ ಸತ್ಯವನ್ನು ಈ ಪ್ರಸಂಗ ಸೂಚಿಸುತ್ತದೆ. "ಭಾರತ ಪ್ರಧಾನಿಯಾದ ಇಂದಿರಾ

ಗಾಂಧಿಯವರು ದೇಶದಲ್ಲಿ ತುರ್ತು ಪರಿಸ್ಥಿತಿಯನ್ನು ಹೇರಿದರು. ತುರ್ತುಪರಿಸ್ಥಿತಿ ಎಂದರೇನೆಂಬುದು ಯಾರಿಗೂ ಸರಿಯಾಗಿ ಗೊತ್ತಿರಲಿಲ್ಲ. ಸರ್ಕಾರಿ ಅಧಿಕಾರಿಗಳು ಅದನ್ನು ತಮಗೆ ಅನುಕೂಲವಾಗುವಂತೆ ಅರ್ಥೈಸುತ್ತಿದ್ದರು."[೨೫] ಎಂದು ಗಸ್ತಿಯವರು ಬರೆಯುತ್ತಾರೆ. ಈ ಮಾತುಗಳನ್ನು ಗಮನಿಸಿದಾಗ ದಿವಂಗತ ಶ್ರೀಮತಿ ಇಂದಿರಾ ಗಾಂಧಿಯವರ ಅಂದಿನ ಸರ್ವಾಧಿಕಾರದ ಆಡಳಿತ ವೈಖರಿಯ ನೆನಪಾಗುತ್ತದೆ. ಈ ಮೂಲಕ ಅದರಿಂದಾದ ನೋವು–ನಲಿವುಗಳ ಚಿತ್ರಣವನ್ನು ನೀಡಿ ಚರಿತ್ರೆಯ–ಪುನರ್ ನಿರ್ಮಾಣದ ಕಡೆಗೆ ಆತ್ಮಕಥನದ ಓದು ಕೊಂಡೊಯ್ಯುತ್ತದೆ. ಅಲ್ಲದೆ ಸಮುದಾಯದ ಸಮ್ಮೇಳನ ನಡೆಯುವಾಗಿನ ಸಂದರ್ಭದಲ್ಲಿ ಗಸ್ತಿಯವರು ಊರೂರು ಅಲೆಯುವ ಸಂದರ್ಭದಲ್ಲಿಯೂ ಖಚಿತವಾದ ಚಾರಿತ್ರಿಕ ಮಾಹಿತಿಯನ್ನು ನೀಡುತ್ತಾರೆ. "ರಾಯಚೂರಿಗೆ ಹೋದಾಗ ಅಲ್ಲಿ ಪರಶುರಾಮ ನಾಯಕ ಸಿಕ್ಕರು. ಅವರು ಕುಷ್ಟಗಿಲ್ಲಿದ್ದು ಸಾಮಾಜಿಕ ಕಾರ್ಯಕ್ಕೆ ತಮ್ಮನ್ನು ತಾವು ಅರ್ಪಿಸಿಕೊಂಡಿದ್ದರು. ಅವರು ನನಗೆ ೧೯೭೦ರಿಂದಲೂ ಪರಿಚಿತವಾಗಿದ್ದರು. ನಾನಾ ಕಾಲೇಜಿನಲ್ಲಿದ್ದಾಗ ನನ್ನ ಫೋಟೋ ಪತ್ರಿಕೆಗಳಲ್ಲಿ ನಾಲ್ಕಾರು ಸಲ ಪ್ರಕಟವಾಗಿತ್ತು. ಒಂದು ಸಲ ಆಕಾಶವಾಣಿಯಿಂದ ನನ್ನ ಸಂದರ್ಶನವೂ ಬಿತ್ತರಗೊಂಡಿದ್ದಿತು. ನನ್ನ ಹೆಸರು ಫೋಟೋ ನೋಡಿದ ಪರಶುರಾಮ ನಾಯಕರು ಕುಷ್ಟಗಿಯಿಂದ ನಮ್ಮೂರಿಗೆ ಬಂದು ಅಭಿನಂದಿಸಿದರು."[೨೬] ಇಲ್ಲಿರುವ ಇಸವಿ–ಅಂಕೆಸಂಖ್ಯೆಗಳು ಗಮನಾರ್ಹ.

ಸಾಮಾನ್ಯವಾಗಿ ಆತ್ಮಕಥನದಲ್ಲಿ ಇಸವಿ ಹಾಗೂ ಅಂಕಿ ಸಂಖ್ಯೆಗಳು ಕಂಡುಬರುತ್ತವೆ. ಅವು ಅಕ್ಷರಸ್ಥ ಸಮುದಾಯದ ದಿನಚರಿ ಬರೆಯುವ ಹವ್ಯಾಸವುಳ್ಳವರ ಅನುಭವದ ಸ್ವರೂಪವನ್ನು ಸೂಚಿಸುತ್ತವೆ ಆದರೆ ಅನಕ್ಷರಸ್ಥ ಸಮುದಾಯದವರ ಕಥನ ಕ್ರಮದಲ್ಲಿ ಈ ಬಗೆಯ ಅಂಕಿ ಸಂಖ್ಯೆಗಳು ದಿನಾಂಕಗಳು ಅಷ್ಟಾಗಿ ಇರುವುದಿಲ್ಲ. ಇದರಿಂದ ನಿಖರವಾದ ಚರಿತ್ರೆಯ ರಚನೆಯು ಆಗುವುದಿಲ್ಲ. ವಿಶೇಷವೆಂದರೆ ಗಸ್ತಿಯವರಲ್ಲಿ ಹೆಚ್ಚಾಗಿ ಈ ದಿನಾಂಕ ಮತ್ತು ಅಂಕಿ ಸಂಖ್ಯೆ ಆಧಾರಿತ ಕಥನದ ನಿರೂಪಣೆ ಕಾಣುತ್ತದೆ. ಅದಕ್ಕೆ ಇಂಬುಕೊಡುವ ಒಂದು ಪ್ರಸಂಗವನ್ನು ನೋಡೋಣ:

"ಮುಂಜಾನೆ ಎಂಟು ಹೊಡೆದಿತ್ತು. ದಿನಪತ್ರಿಕೆ ಹಾಕುವ ಹುಡುಗ ತರುಣ ಭಾರತ ಒಗೆದು ಹೋದ ಪತ್ರಿಕೆಯನ್ನು ಓದಲೆಂದು ಎತ್ತಿಕೊಂಡೆ ಒಂಬತ್ತು ಡಿಸೆಂಬರ್ ಹತ್ತೊಂಬತ್ತನೂರ ಎಂಬತ್ತೊಂದರ ಪತ್ರಿಕೆ ಅದಾಗಿತ್ತು. (೯.೧೨.೧೯೮೧) ಮುಖಪುಟದಲ್ಲಿಯೇ ಫೋಟೋ ಸಹಿತವಾಗಿ ದರೋಡೆಯ ಸುದ್ದಿ ಪ್ರಮುಖವಾಗಿ ಪ್ರಕಟವಾಗಿತ್ತು."[೨೭] ಇಲ್ಲಿ ದಿನ, ತಿಂಗಳು, ವರ್ಷಗಳನ್ನು ನಮೂದಿಸಿ ಘಟನೆಗಳನ್ನು ಹೇಳುತ್ತಾ ಕಥಿಸುವ ಕ್ರಮವು ಸ್ಪಷ್ಟವಾಗಿದೆ. ಈ ದಿನ, ತಿಂಗಳು ವರ್ಷವನ್ನು ಓದಿದಾಗ ಓದುಗರ ಮನಸ್ಸು ಆಗಿನ ಸಂದರ್ಭವನ್ನು ಕಲ್ಪಿಸಿಕೊಳ್ಳುತ್ತದೆ. ಆಗಾಗಲೇ ಪತ್ರಿಕೆಗಳು ಬೆಳವಣಿಗೆ ಹೊಂದಿ ತಮ್ಮ ಸಾಮಾಜಿಕ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದವೆಂಬುದು ಸಹ ತಿಳಿಯುತ್ತದೆ. ಇವು ಒಂದು ಬಗೆಯಲ್ಲಿ ಚರಿತ್ರೆಯ ರಚನೆಗೆ ಸಹಾಯಕವಾಗುತ್ತವೆ.

ಹುಲಿಯೂರಿನ ಘಟನೆಯ ಬಗ್ಗೆಯು ಗಸ್ತಿಯವರು ಹೀಗೆ ಖಚಿತವಾಗಿ ದಾಖಲಿಸುತ್ತಾರೆ. "ಫೆಬ್ರವರಿ ೧೫, ೧೯೮೨ರ ತರುಣ ಭಾರತದಲ್ಲಿ ವಕ್ರತುಂಡ ಎಂಬುವವರ ಒಂದು ಲೇಖನ ಪ್ರಕಟವಾಯಿತು. ಹುಲಿಯೂರು ಗ್ರಾಮಕ್ಕೆ ಭೇಟಿನೀಡಿ ಹೋದ ನಿಯೋಗವನ್ನು ಅವರು ಕಟುವಾಗಿ ಟೀಕಿಸಿದ್ದರು"[೨೮] "೧೯೮೩ ಸೆಪ್ಟೆಂಬರ್ ೧೭ರಂದು ಕೋರ್ಟಿನ ಮುದ್ದತ್ತು ಇತ್ತು. ಪಂಚರು ಮನೆಯವರೆಗೆ ಬಂದು ನನ್ನನ್ನು ಕೋರ್ಟಿಗೆ ಕರೆದುಕೊಂಡು ಹೋದರು ಭಗವದ್ಗೀತೆಯ ಮೇಲಕ್ಕೆ ಕೈಇಟ್ಟು ಸತ್ಯ ಹೇಳುವ ಪ್ರತಿಜ್ಞೆಯನ್ನು ತೆಗೆದುಕೊಳ್ಳಲು ಕೋರ್ಟಿನವರು ಹೇಳಿದರು."[೨೯] ಈ ರೀತಿಯ ಅಂಕಿ-ಸಂಖ್ಯೆಯಾಧಾರಿತ ನಿಖರವಾದ ಸಂದರ್ಭ ಘಟನೆಗಳಿಂದ ಕಥನ ಕಟ್ಟುವಿಕೆಗೆ ಒಂದು ಬಗೆಯ ಅಧಿಕೃತ ನಿಖರತೆ ಬಂದಿದೆ. ತಮ್ಮ ವೈಯಕ್ತಿಕ ಜೀವನ ಚರಿತ್ರೆಯ ಜೊತೆ ಜೊತೆಗೆ ತಮ್ಮ ಸಮುದಾಯದ ಚರಿತ್ರೆಯನ್ನು ನಿರ್ಮಿಸುತ್ತಾ, ಅದನ್ನು ಒಟ್ಟಾರೆ ಸಮಾಜದ ಚರಿತ್ರೆಯಾಗಿಸುವಿಕೆಯ ಕ್ರಮ ಇದರಲ್ಲಿ ಅಡಗಿದೆ. ಜನರು ಚರಿತ್ರೆ ನಿರ್ಮಾಣಕಾರರು ತಾವೇ ಎಂಬುದು ಅರಿಯದವರಾಗಿರುತ್ತಾರೆ. ಹೀಗಾಗಿ ಕೆಳಜಾತಿಯವರ ದಲಿತರ ಮಹಿಳೆಯರ ಆತ್ಮಕಥೆಗಳು ಊಹಾಪೋಹದ ಕಥೆಗಳಲ್ಲ: ಅವು ಸಮಾಜದ ಅನುಕಂಪ ಗಿಟ್ಟಿಸಲು ರಚನೆಯಾದುವಲ್ಲ ಎಂಬುದನ್ನು ಸಾಬೀತುಪಡಿಸುತ್ತವೆ. ಹೊಸ ಚರಿತ್ರೆಯ ನಿರ್ಮಾಣದ ಕಡೆಗೆ ಓದುಗನನ್ನು ಹಾಗೂ ಸಮಾಜವನ್ನು ಈ ಆತ್ಮಕಥೆಗಳು ಕೊಂಡೊಯ್ಯುತ್ತವೆ.

೬.೫. ಸಂಭಾಷಣೆ ಮತ್ತು ನಾಟಕೀಯತೆ :

'ವಾಲ್ಮೀಕಿ' ಆತ್ಮಕಥೆ ರೂಪಕ ಉಪಮೆ, ವ್ಯಂಗ್ಯ-ವಿಡಂಬನೆ- ವಿಷಾದ ವಾಕ್ಯಗಳ ಜೊತೆಗೆ ಸಂಭಾಷಣೆ ಮತ್ತು ನಾಟಕೀಯತೆಯಿಂದಲೂ ಕೂಡಿದುದಾಗಿದೆ. ಅದನ್ನು ಗಸ್ತಿಯವರು ಕಥಿಸಿರುವ ರೀತಿಯಲ್ಲೇ ನೋಡುವುದಾದರೆ ಆತ್ಮಕಥೆಯ ಆರಂಭದಲ್ಲಿಯೇ ಬರುವ ಪ್ರಸಂಗ ಹೀಗಿದೆ.

"ಒಂದು ದಿನ ಮುಂಜಾನೆಯ ಹೊತ್ತು ನಮ್ಮ ಬೇಡರ ವಸ್ತಿಗೆ ಮಾಸ್ತರ್ ಬಂದ ನನ್ನನ್ನು ನೋಡಿದವನೇ ಅಲ್ಲಿಯೇ ನಿಂತಿದ್ದ ಒಬ್ಬನಿಗೆ ಕೇಳಿದ.

'ಯಾರ ಹುಡುಗ ಈತ?'

'ಬಶಾಣಿ ಮಗ'

'ಯಾವ ಬಶಾಣಿ'

'ಅಲ್ಲ ಮೇಲೆ ಇರ್‍ತಾನಲ್ಲ. ಧಾನಶಿ ಬಶಾಣಿ'

'ಬಶಾಣಿ ನಿನ್ನ ಮಗ ದೊಡ್ಡವನಾಗಿದ್ದಾನೆ, ಅವನನ್ನು ಶಾಲೆಗೆ ಕಳಿಸು' ಮಾಸ್ತರ್ ಹೇಳಿದ.

'ಇನ್ನೂ ಸಣ್ಣವ ಇದ್ದಾನಾ' ಅಪ್ಪ ಉತ್ತರಿಸಿದ.

'ಅದೆಂಥಾ ಸಣ್ಣವ? ಏಳು ತುಂಬಿರ ಬೇಕಲ್ಲ,?

'ಇರಬಹುದು ಇರಬಹುದು'

'ಮತ್ತೆ ಅವನಿಗೆ ಶಾಲೆಗೆ ಕಳಿಸಬೇಕಲ್ಲ ಕಳಿಸದಿದ್ದರೆ ಸರ್ಕಾರ ದಂಡ ಹಾಕುತ್ತದೆ' ಮಾಸ್ತರ್ ಹೇಳಿದ. ದಂಡ ಶಬ್ದವನ್ನು ಕೇಳಿ ಅಪ್ಪನ ಮುಖ ವಿವರ್ಣವಾಯಿತು"[೩೦] ಇದು ಗಸ್ತಿಯವರು ಶಾಲೆಗೆ ಸೇರುವಾಗಿನ ಸಂದರ್ಭದಲ್ಲಿ ಶಾಲೆಯ ಮಾಸ್ತರ್ ಮತ್ತು ಗಸ್ತಿಯವರ ತಂದೆಯ ಮಧ್ಯೆ ನಡೆಯುವ ಸಂಭಾಷಣೆಯಾಗಿದೆ. ಈ ಸಂಭಾಷಣೆ ನಾಟಕದಲ್ಲಿ ಪಾತ್ರಗಳು ಎದುರು ಬದುರು ನಿಂತು ಮಾತಾಡುವ ರೂಪ ಪಡೆದುಕೊಂಡಿದೆ. ಆದರೆ ಇದು ನಾಟಕವಲ್ಲ. ನಿರೂಪಕ ತಾನೇ ಆ ಪಾತ್ರಗಳಲ್ಲಿ ನಿಂತು ಆ ಪಾತ್ರಗಳಂತೆ ಮಾತಾಡಿ ತನ್ನ ನಿರೂಪಣೆಗೊಂದು ನಾಟಕೀಯತೆಯನ್ನು ತಂದು ಓದುಗನನ್ನು ಹಿಡಿದಿಟ್ಟಿರುವ ರೀತಿ.

ಬೇಡರ ವಸ್ತಿಯಲ್ಲಿ ಕಾಮನ ಹಬ್ಬದ ಸಂಭ್ರಮ ಮೂಡಿದಾಗ ಅಲ್ಲಿಯ ಸಂಭಾಷಣೆಯನ್ನು ಹೀಗೆ ಬರುತ್ತದೆ: "ಊರಲ್ಲಿ ಹೋಳಿಹಬ್ಬದ ಸಂಭ್ರಮ ಆರಂಭವಾಯಿತು. ಬೇಡರ ವಸ್ತಿಯ ಗಂಡಸರು ಕಾಮಣ್ಣನ ಬಗ್ಗೆ ಮಾತನಾಡಲಾರಂಭಿಸಿದರು. 'ಮಲ್ಲಾ ಹೇಳಿದ ತುರ್ಕಮೆಟ್ಟಿ ಗ್ರಾಮದಲ್ಲಿ ನಾನೊಂದು ಭಾರಿಗಿಡವನ್ನು ನೋಡಿಬಂದಿದ್ದೇನೆ. ಅದರಿಂದ ಕಾಮಣ್ಣನನ್ನು ತಯಾರಿಸಬಹುದು.'

'ಹೌದೇ' ಎಲ್ಲರೂ ಕೇಳಿದರು

'ಹೌದು ಹೌದು ಅದಕ್ಕೆ ಉದ್ದುದ್ದ ಟೊಂಗೆಗಳಿವೆ' ಎಂದ ಮಲ್ಲಾ

'ಅದಕ್ಕೆ ಏನಾದರೂ ಗುರುತು ಹಾಕಬೇಕಿತ್ತು'

'ಅದನ್ನು ತಮ್ಮದೆಂದು ಸಾಧಿಸುತ್ತಾರೆ'. ಎಂದ ಕಲ್ಲಾ

'ನನಗೆ ತಿಳಿಯುವುದಿಲ್ಲವೇನು? ಅದಕ್ಕೊಂದು ಗುರುತು ಮಾಡಿಬಂದಿದ್ದೇನೆ' ಎಂದ ಮಲ್ಲಾ, ತುರ್ಕಮೆಟ್ಟಿ ಗ್ರಾಮದ ಅಕ್ಕಪಕ್ಕ ಬಹಳಷ್ಟು ಗಿಡಗಳಿದ್ದವು. ಗಿಡಗಳನ್ನೇ ಕಡಿದುಕೊಂಡು ಬಂದು ಅದನ್ನು ಕಾಮಣ್ಣಾ' ಎಂದು ಊರವರು ಪೂಜಿಸುತ್ತಿದ್ದರು'[೩೧] ಇಲ್ಲಿ ಊರವರ ಚರ್ಚೆಯು ಸಂಭಾಷಣೆಯ ರೂಪ ಪಡೆದಿರುವುದು ಕಂಡುಬರುತ್ತದೆ. ವಾಲ್ಮೀಕಿ ಸಮುದಾಯದ ಪ್ರಾದೇಶಿಕ ಭಾಗದ ಸಾಂಸ್ಕೃತಿಕ ಚಿತ್ರಣವನ್ನು ನೀಡುವುದರ ಜೊತೆಗೆ ನಿರೂಪಣಕಾರನ ತಂತ್ರದಿಂದ ಆತ್ಮಕಥೆಯು ಅದ್ಭುತವಾದ ಸಂಭಾಷಣೆಯಾಗಿ ನಾಟಕೀಯತೆಯನ್ನು ಪಡೆದುಕೊಂಡಿದೆ. ಕನ್ನಡ ಆತ್ಮಕಥನಗಳಲ್ಲಿ ಕಥನ ರೂಪಿಸುವಾಗಿನ ತಂತ್ರಗಳಲ್ಲಿ ಇದು ಒಂದಾಗಿದೆ. ಗಸ್ತಿಯವರ ಮದುವೆಯ ಮಾತುಕಥೆಯ ಪ್ರಸಂಗವನ್ನು ನೋಡೋಣ:

"ನಿನ್ನ ಮಗನಿಗೆ ನಮ್ಮ ಕಮಲಿಯನ್ನು ಕೊಡುವೆ"

'ನಿನ್ನ ಬಿಟ್ಟು ನಾವು ಇದ್ದೇವೇನಣ್ಣ? ಇಷ್ಟುದಿನ ನಾವು ದೂರ ದೂರ ಇದ್ದೆವು. ಈ ಕಾರಣದಿಂದಾದರೂ ಸಮೀಪ ಬರೋಣ' ಎಂದಳು ಅವ್ವ.

ಅವರಿಬ್ಬರೂ ನನ್ನ ಮತ್ತು ಕಮಲಿಯ ಹೆಸರನ್ನು ಅದೇಕೆ ತೆಗೆದುಕೊಳ್ಳುತ್ತಿದ್ದಾರೆಂದು ನನಗೆ ಆಗ ಗೊತ್ತಾಗಿರಲಿಲ್ಲ. ಈ ನನ್ನ ಮುಖ ನೋಡಿದೊಡನೆಯೇ ಮಾಮನ ಮುಖವರಳಿದಂತಾಯಿತು. ನನ್ನ ಕಡೆ ನೋಡುತ್ತ 'ಈಗ ಯಾವ ಕ್ಲಾಸಿನಲ್ಲಿ ಓದುತ್ತಿರುವೆ' ಎಂದು ಕೇಳಿದ.

ಅಂದ್ರೆ ಆದಷ್ಟು ಬೇಗ ಮಾಸ್ತರ್ ಆಗುವವ ಅನ್ನು, ಅಂದ ಮಾಮಾ ನಾನೂ 'ಹೂಂ' ಅಂದೆ. ಮಾಮನಿಗೆ ಗಂಡು ಮಕ್ಕಳು ಇರಲಿಲ್ಲ. ಮನೆಕಡೆ ಅವನ ಲಕ್ಷವೇ ಇರುತ್ತಿರಲಿಲ್ಲ."[೩೨] ಹೀಗೆ ಮೂಡಿಬಂದಿರುವ ಸಂಭಾಷಣೆಗಳು ಆತ್ಮಕಥೆ ಬೇರೊಂದು ರೂಪ ಪಡೆದುಕೊಳ್ಳುವಲ್ಲಿ ಮತ್ತು ಬೇರೊಂದು ಅರ್ಥಗಳ ಕಲ್ಪಿಸಿಕೊಳ್ಳುವಲ್ಲಿ ಸಹಾಯಕವಾಗಿವೆ. ಸಂಭಾಷಣೆಗಳು ನಾಟಕೀಯತೆ ಪಡೆದು 'ವಾಲ್ಮೀಕಿ' ಆತ್ಮಕಥೆ ಉಳಿದ ಆತ್ಮಕಥೆಗಳಿಗಿಂತ ಭಿನ್ನನೆಲೆಯಲ್ಲಿ ನಿಲ್ಲುವಂತೆ ಮಾಡಿವೆ.

೬.೬. 'ವಾಲ್ಮೀಕಿ'ಯ ಆರಂಭ ಮತ್ತು ಮುಕ್ತಾಯ :

'ವಾಲ್ಮೀಕಿ' ಆತ್ಮಕಥನದ ಆರಂಭ ಹೀಗಿದೆ : "ಕಾಲಿಗೆ ಆಳವಾಗಿ ಚುಚ್ಚಿರುವ ಜಾಲಿಮುಳ್ಳು ನೋಯುತ್ತಿರುತ್ತದೆ. ಅದನ್ನು ತೆಗೆದಾಗ ಮಾತ್ರ ಆ ನೋವು ಕಡಿಮೆಯಾಗುತ್ತದೆ. ಮನಸ್ಸಿನಲ್ಲಿ ಹೆಪ್ಪುಗಟ್ಟಿರುವ ನೆನಪುಗಳು ಅನುಭವಿಸಿದ ದುಃಖಗಳ ಪರಿಸ್ಥಿತಿಯೂ ಇದೇ ರೀತಿಯದ್ದು. ಸಾವು ನೆನಪಿಸುವಂತಹ ಈ ನೆನಪುಗಳು ಆಳವಾಗಿ ಬೇರೂರಿದ ವೇದನೆಗಳು. ಗೆಳೆಯರೇ ಕೀವು ಹಿಡಿದ ಮುಳ್ಳ ನೀಡುವ ಈ ವೇದನೆಗಳ ಬಾಯಿಗೆ ಸೂಜಿಚುಚ್ಚಬೇಕು. ನೋವಿನ ಬಾಯಿ ತೆರೆದು ಕೀವು ಮತ್ತು ರಕ್ತಹರಿದರೂ ಈ ವೇದನೆಗೆ ಬಾಯಿ ನೀಡಲೇಬೇಕಾಗಿದೆ."[೩೩]

'ವಾಲ್ಮೀಕಿ' ಆತ್ಮಕಥನದ ಮುಕ್ತಾಯ ಹೀಗಿದೆ : "ಯಾವ ದಾರಿಯಲ್ಲಿ ನಾನು ನಡೆಯುತ್ತಿದ್ದೆನೋ ಆ ದಾರಿಗೆ ಅಂತ್ಯವೇ ಇರಲಿಲ್ಲ. ಎಷ್ಟು ನಡೆದರೂ ದಾರಿಯೇ ಕಾಣಿಸುತ್ತಿತ್ತು. ಅಂತ್ಯವಿಲ್ಲದ ಆ ದಾರಿಯನ್ನು ನಾನು ಆರಿಸಿದ್ದೆ ನಾನು ನಡೆಯಲೇ ಬೇಕಿತ್ತು. ನಾನು ದಾರಿ ಕತ್ತರಿಸಲಾರಂಭಿಸಿದೆ."[೩೪]

ಆತ್ಮಕಥೆಯ ಈ ಆರಂಭ ಮತ್ತು ಮುಕ್ತಾಯಗಳೇ ವಿಶಿಷ್ಟವಾಗಿವೆ. ದಾರಿಹೋಕ ಮುಳ್ಳು ಮತ್ತು ಕಾಲುಗಳ ರೂಪಕ ಮತ್ತು ಉಪಮೆಗಳ ಮೂಲಕ ಕಥೆ ಆರಂಭಗೊಂಡಿದೆ. ದಾರಿಯಲ್ಲಿ ನಡೆಯುವಾಗಿನ ಅಡೆ ತಡೆಗಳು ಇಲ್ಲಿ ಕಲ್ಲುಮುಳ್ಳು ಆಗಿವೆ. ಲೇಖಕ ಅನುಭವಿಸುವ ಸಂಘರ್ಷ–ಹೋರಾಟಗಳ ಬಗ್ಗೆ ಇಲ್ಲಿ ಕೆಲವೇ ಸಾಲುಗಳಲ್ಲಿ ಕಟ್ಟಿಕೊಡಲಾಗಿದೆ. ಆ ದಾರಿಹೋಕನು ಅನುಭವಿಸಿದ ಅನುಭವ ಮತ್ತು ನೆನಪುಗಳನ್ನೇ ದಾಖಲಿಸುತ್ತಾ ಆತ್ಮಕಥೆ ರೂಪುತಳೆಯುತ್ತದೆ. ಗಸ್ತಿಯವರು ಇಲ್ಲಿ ಜೀವನವನ್ನು ದಾರಿಗೆ ಹೋಲಿಸಿಕೊಂಡಿದ್ದಾರೆ. ಇಲ್ಲಿ ದಾರಿಯೇ ಜೀವನವಾಗಿ, ಜೀವನವೇ ದಾರಿಯಾಗಿ ಮೂಡಿಬಂದಿದೆ. ದಾರಿಹೋಕನಿಗಾಗುವ ಅನುಭವವು ಕೊನೆಯ ಮೂರು ಸಾಲಿನಲ್ಲಿ ಚಿತ್ರಣಗೊಂಡಿದೆ.

ಮತ್ತದೇ ದಾರಿ, ದಾರಿಗೆ ಅಂತ್ಯವಿಲ್ಲ. ಅಂದರೆ ಈ ವಿಷಾದನೀಯ ವಾಕ್ಯವು ಸಾಮಾಜಿಕ ಬದಲಾವಣೆ ಶೋಷಣೆಯ ಬಗೆಗಿನ ತುಡಿತ ವ್ಯವಸ್ಥೆಯ ಬಗೆಗಿನ ತಣ್ಣನೆಯ ಆಕ್ರೋಶ ಯಾವುದಾದರೂ ಆಗಿರಬಹುದು ಎಂಬತೆ ಮಾರ್ಮಿಕವಾಗಿದೆ. ಆತ್ಮಕಥೆಯ ಕೊನೆವಾಕ್ಯ 'ನಾನು ದಾರಿಕತ್ತರಿಸಲಾರಂಭಿಸಿದೆ.' ಎಂಬುದು ಓದುಗನನ್ನು ಅನೇಕ ನಿಟ್ಟಿನಲ್ಲಿ ಯೋಚಿಸುವಂತೆ ಮಾಡುವಷ್ಟು ಅರ್ಥಗರ್ಭಿತವಾಗಿದೆ.

ಬಾಳಿನ ಪಯಣದ ದಾರಿ ಇನ್ನೂ ಇದೆ. ಅದು ಪೂರ್ಣಗೊಂಡಿಲ್ಲ ಎಂಬ ಅರ್ಥ ಒಂದಾದರೆ ಮತ್ತೊಂದು, ಸಮಾಜದ ತಳಸಮುದಾಯಗಳು ಒಗ್ಗೂಡುವಿಕೆಯ ಕೆಲಸ ಆಗಬೇಕಿದೆ ಎಂಬುದಾಗಿದೆ.

'ವಾಲ್ಮೀಕಿ' ಆತ್ಮಕಥನದಲ್ಲಿ ರೂಪಕ ಮತ್ತು ಉಪಮೆಗಳು, ವ್ಯಂಗ್ಯ-ವಿಡಂಬನೆ ವಿಷಾದದ ವಾಕ್ಯಗಳು, ಹಾಸ್ಯ ಸಂಭಾಷಣೆ ಮತ್ತು ನಾಟಕೀಯತೆ, ಆರಂಭ ಮತ್ತು ಮುಕ್ತಾಯದ ವಾಕ್ಯಗಳು ಇದನ್ನು ಇತರ ಆತ್ಮಕಥೆಗಳಿಗಿಂತ ಭಿನ್ನವಾಗಿಸಿವೆ. ಅಲ್ಲದೆ ಒಬ್ಬ ವ್ಯಕ್ತಿಯ ಜೀವನ, ಅವನ ದೃಷ್ಟಿಕೋನ, ಅನುಭವಗಳು ಇಡೀ ವಾಲ್ಮೀಕಿ ಸಮುದಾಯದ ಅನುಭವದಂತೆ ಮೂಡಿ ಬರಲು ಕಾರಣಗಳಿವೆ. ಹೀಗಾಗಿ ಈ ಕೃತಿ ಇಡೀ ಸಮುದಾಯದ ಆತ್ಮಕಥೆಯೂ, ಚರಿತ್ರೆಯೂ ಆಗಿದೆ.

ಟಿಪ್ಪಣಿಗಳು

೧. ಡಾ. ಭೀಮರಾವ್ ಗಸ್ತಿ,	ವಾಲ್ಮೀಕಿ,	ಪು.೧
೨. ಅದೇ	"	ಪು.೩
೩. ಅದೇ	"	ಪು.೨೫
೪. ಅದೇ	"	ಪು.೪೮
೫. ಅದೇ	"	ಪು.೫೪
೬. ಅದೇ	"	ಪು.೫೪
೭. ಅದೇ	"	ಪು.೧೦೫
೮. ಅದೇ	"	ಪು.೧೪೭
೯. ಅದೇ	"	ಪು.೧೩
೧೦. ಅದೇ	"	ಪು.೧೪

೧೧. ಅದೇ	"	ಪು೧೫
೧೨. ಅದೇ	"	ಪು೨೬
೧೩. ಅದೇ	"	ಪು.೩೧
೧೪. ಅದೇ	"	ಪು.೩೧,೩೨
೧೫. ಅದೇ	"	ಪು.೩೭
೧೬. ಅದೇ	"	ಪು.೪೯
೧೭. ಅದೇ	"	ಪು.೫೮
೧೮. ಅದೇ	"	ಪು.೮೨
೧೯. ಅದೇ	"	ಪು.೧೦೭
೨೦. ಅದೇ	"	ಪು.೦೭
೨೧. ಅದೇ	"	ಪು.೧೯
೨೨. ಅದೇ	"	ಪು.೧೧೫
೨೩. ಅದೇ	"	ಪು.೧೧೮
೨೪. ಅದೇ	"	ಪು.೫೮
೨೫. ಅದೇ	"	ಪು.೭೦
೨೬. ಅದೇ	"	ಪು.೯೩
೨೭. ಅದೇ	"	ಪು.೧೧೩
೨೮. ಅದೇ	"	ಪು.೧೧೯
೨೯. ಅದೇ	"	ಪು.೧೨೫
೩೦. ಅದೇ	"	ಪು.೦೨
೩೧. ಅದೇ	"	ಪು.೦೫
೩೨. ಅದೇ	"	ಪು.೧೨
೩೩. ಅದೇ	"	ಪು.೦೧
೩೪. ಅದೇ	"	ಪು.೧೪೯

ಅಧ್ಯಾಯ – ಏಳು

ಸಮಾರೋಪ

ಅಧ್ಯಾಯ - ೭

ಸಮಾರೋಪ

ಡಾ. ಭೀಮರಾವ್ ಗಸ್ತಿಯವರ 'ವಾಲ್ಮೀಕಿ' ಆತ್ಮಕಥನದ ವಿಶ್ಲೇಷಣೆ ಎಂಬ ಈ ಅಧ್ಯಯನದ ಪ್ರಮುಖ ಫಲಿತಗಳನ್ನು ಹಾಗೂ ಹೆಚ್ಚಿನ ಅಧ್ಯಯನದ ಸಾಧ್ಯತೆಗಳನ್ನು ಈ ಭಾಗದಲ್ಲಿ ನಿರೂಪಿಸಲಾಗಿದೆ.

ಅ. ಅಧ್ಯಯನದ ಫಲಿತಗಳು :

ಪ್ರಸ್ತುತ ಅಧ್ಯಯನವು ಉಪೇಕ್ಷಿತ ಸಮುದಾಯದ ಹಿನ್ನೆಲೆಯಿಂದ ಬಂದ ವ್ಯಕ್ತಿಯ ಆತ್ಮಕಥೆ ಕುರಿತು ಮೂಡಿರುವ ವಿಶ್ಲೇಷಣೆಯ ಸಾರ ಇದಾದರೂ, ಪರೋಕ್ಷವಾಗಿ ಇದು ಕರ್ನಾಟಕದ ತಳಸಮುದಾಯಗಳು ಎದುರಿಸುತ್ತಿರುವ ಸಮಸ್ಯೆ ಸವಾಲುಗಳನ್ನು ಸೂಚಿಸುತ್ತದೆ.

ಸಮಾಜದ ತಳಸಮುದಾಯದಿಂದ ಬಂದ ವ್ಯಕ್ತಿಗಳು ತಮ್ಮ ಬಾಳಿನ ನೋವು-ನಲಿವು, ವಿಷಾದ-ಆಕ್ರೋಶ, ಹೋರಾಟ-ಸಂಘಟನೆಗಳನ್ನು ಹೇಳಿಕೊಂಡಿದ್ದಾರೆ. ಜೊತೆ ಜೊತೆಗೆ ಸಮುದಾಯವು ಕಂಡುಂಡು ಪಡೆದ ಅನುಭವಗಳನ್ನು ನಿರೂಪಿಸಿದ್ದಾರೆ. ಆದ್ದರಿಂದಾಗಿ ವಾಲ್ಮೀಕಿ ಆತ್ಮಕಥೆ ಬರೀ ಗಸ್ತಿಯವರ ಆತ್ಮಕಥೆಯಾಗಿ ಉಳಿಯದೆ, ಅದು ಸ್ಥಿತ್ಯಂತರದಲ್ಲಿರುವ ಇಡೀ ವಾಲ್ಮೀಕಿ ಸಮುದಾಯದ ಚರಿತ್ರೆಯೂ ಆಗಿದೆ.

ಬಹುತೇಕ ಕನ್ನಡದ ಆತ್ಮಕಥೆಗಳು ಸಮಾಜದ ಉನ್ನತ ವ್ಯಕ್ತಿತ್ವದ ಸ್ಥಾನದಲ್ಲಿ ನಿಂತಾಗ ರಚಿಸಿದವುಗಳೇ ಆಗಿವೆ. ಆದರೆ ಅವರು ತಮ್ಮ ಬಾಳಿನಲ್ಲಿ ಬರುವ ಅನೇಕ ಶ್ರೀ ಸಾಮಾನ್ಯರ

ಜನಜೀವನವನ್ನು ಕಟ್ಟಿಕೊಡುತ್ತಾರೆ. ಬೇರೆ ಬೇರೆ ಸಮುದಾಯದ ವ್ಯಕ್ತಿ, ಸಂಸ್ಥೆಗಳ ಜೊತೆಗೆ ತಮಗಿದ್ದ ಸಂಬಂಧಗಳನ್ನು ಕಥಿಸುತ್ತಾರೆ. ಹೀಗಾಗಿ ಈ ಆತ್ಮಕಥೆಗಳು ವ್ಯಕ್ತಿಗಳ ಕಥೆಗಳಾಗಿರುವಂತೆ ಪರಿಸರದ ಕಥೆಗಳೂ, ಚರಿತ್ರೆಗಳೂ ಆಗಿವೆ.

ಸಮಾಜದ ಉಪೇಕ್ಷಿತ ಸಮುದಾಯದಿಂದ ಬಂದ ವ್ಯಕ್ತಿಯ ಆತ್ಮಕಥೆಯು ನಿರ್ದಿಷ್ಟ ವ್ಯಕ್ತಿ ಪಟ್ಟ ನೋವು, ಪಟ್ಟಪಾಡು ಹಾಗೂ ಕಷ್ಟಗಳನ್ನು ಮಾತ್ರ ಹೇಳದೇ ಅದನ್ನು ಎದುರಿಸಿ ಬದುಕಿದ ಆ ವ್ಯಕ್ತಿಯ ಅದಮ್ಯ ಚೈತನ್ಯ, ಸಾಹಸ, ದಿಟ್ಟತನಗಳ ಕಥನವನ್ನೂ ನಿರೂಪಿಸುತ್ತವೆ. ಕೆಲವೊಮ್ಮೆ ಅವರ ಬದುಕಿನ ಸಂಘರ್ಷಗಳೇ ಅವನ್ನು ಎದುರಿಸುವ ಶಕ್ತಿ ಕೇಂದ್ರಗಳನ್ನು ಜಾಗೃತಗೊಳಿಸುತ್ತಿರುತ್ತವೆ.

ಕೆಳಜಾತಿಯ ದಮನಿತ ಸಮುದಾಯದಿಂದ ಬಂದ ವ್ಯಕ್ತಿಯ ವೈಯಕ್ತಿಕ ಅನುಭವಗಳ ಆತ್ಮಕಥೆಗಳೆಲ್ಲವೂ ಸಮುದಾಯದ ಕಥೆಗಳಾಗಲಾರವು. ಏಕೆಂದರೆ ಕೆಳಜಾತಿಯ ಅಥವಾ ದಮನಿತ ಸಮುದಾಯದ ವ್ಯಕ್ತಿಗಳಿಗೆ ಸಮುದಾಯದ ಪ್ರಜ್ಞೆ, ಸಮಾಜದ ಎಚ್ಚರ ಇದ್ದಾಗ ಮಾತ್ರ ಅವರ ಅನುಭವಗಳು ಸಮುದಾಯದ ಚರಿತ್ರೆಯಾಗಿ ರೂಪಾಂತರ ಪಡೆಯಲು ಸಾಧ್ಯ.

ಸಮುದಾಯದ ಬಿಡುಗಡೆಯ ಹೋರಾಟಗಳು ಬಹಳ ಕಠಿಣ ಹಾಗೂ ಸವಾಲಿನವಾಗಿರುತ್ತವೆ. ಏಕೆಂದರೆ ಸಮುದಾಯದ ಬಿಡುಗಡೆಗೆ ಹೋರಾಟದ ಹಾಗೂ ನಾಯಕತ್ವದ ಅಗತ್ಯ ಬೇಕಾಗುತ್ತದೆ. ಆದರೆ ಸಮುದಾಯದಲ್ಲಿ ನಾಯಕತ್ವ ಮತ್ತು ಒಗಟ್ಟುಗಳಿರುವುದಿಲ್ಲ. ಇವುಗಳನ್ನು ನಿಭಾಯಿಸಲು ಹೊರಟ ವ್ಯಕ್ತಿ ಆ ಸಮುದಾಯದ ವೈರಿಯಾಗಿಯೂ ಶತ್ರುವಾಗಿಯೂ ಕಾಣುವನು.

ವಾಲ್ಮೀಕಿಗಳು ಅಸ್ಪೃಶ್ಯರಲ್ಲ. ಕನ್ನಡದಲ್ಲಿ ಅಸ್ಪೃಶ್ಯರು ಬರೆಯುವ ಆತ್ಮಕತೆಗೆ ಅನೇಕ ಚಾರಿತ್ರಿಕ ಕಾರಣಗಳಿಂದ ಸಾಹಿತ್ಯದಲ್ಲಿ ಹೆಚ್ಚಿನ ಪ್ರಾಮುಖ್ಯತೆ ಇದೆ. ಆದರೆ ಕ್ರಿಮಿನಲ್ ಅಪರಾಧಿ ಸಮುದಾಯವೆಂದು ಸರ್ಕಾರದ ಹಣೆಪಟ್ಟಿ ಪಡೆದುಕೊಂಡು ಬದುಕುತ್ತಿರುವ ಕೆಲವು ಸಮುದಾಯಗಳ ಜೀವನ ಹಿಂಸಾಮಯವಾಗಿದೆ. ಅಸ್ಪೃಶ್ಯರಷ್ಟೇ ತೀವ್ರವಾದ ನೋವು ಇವರದಾಗಿದೆ.

ಸಂಘಟನೆ ಹೋರಾಟ ಮುಂತಾದವುಗಳಿಂದ ಕೂಡಿರುವ ಸಾಮಾಜಿಕ ಕಾರ್ಯಕರ್ತ ವೈಯಕ್ತಿಕ ಜೀವನವು ಸಂಕಷ್ಟಕ್ಕೀಡಾಗುತ್ತದೆ.

ಸಮಾಜದ ತಳಸಮುದಾಯದ ಜನರು ಸಾಂಪ್ರದಾಯಿಕ ಹಳ್ಳಿಯ ಮಡಿವಂತಿಕೆ ಭೇದ ಭಾವದ ಪರಿಸರದಿಂದ ನಗರದಲ್ಲಿನ ಶಿಕ್ಷಣ, ಉದ್ಯೋಗ, ವ್ಯಾಪಾರಕ್ಕಾಗಿ ಬಂದಾಗ ಅವರಿಗೆ ಬಿಡುಗಡೆಯ ಭಾವ ಮೂಡಬಹುದು. ಆದರೆ ಅದು ಪೂರ್ಣ ಪ್ರಮಾಣದ ಬಿಡುಗಡೆ ನೀಡಲಾರದು. ಏಕೆಂದರೆ ಸಾರಿಗೆ ಹೋಟೆಲ್ ಮುಂತಾದ ಕೆಲ ಸಾರ್ವಜನಿಕ ಸ್ಥಳಗಳಲ್ಲಿ ಮಾತ್ರ ಅವರು ಸ್ವಾತಂತ್ರ್ಯ ಅನುಭವಿಸಬಹುದೇ ಹೊರತು ಅವರಿಗೆ ಪೂರ್ಣಬಿಡುಗಡೆ ಸಿಗಲಾರದು.

'ವಾಲ್ಮೀಕಿ' ಆತ್ಮಕಥೆಯಲ್ಲಿ ತಮ್ಮ ಧರ್ಮವಲ್ಲದ ಇತರ ಧರ್ಮದ ಧಾರ್ಮಿಕ ಆಚರಣೆಗಳಲ್ಲಿ ಬೇಡ ಸಮುದಾಯದವರ ಪಾಲ್ಗೊಳ್ಳುವಿಕೆ ಇದೆ. ಇದು ಎಲ್ಲ ಕೆಳವರ್ಗದ, ಕೆಳಜಾತಿಯ ಸಮುದಾಯಗಳಲ್ಲಿ ಸಾಮಾನ್ಯವಾಗಿರುವ ಧಾರ್ಮಿಕ ಉದಾರತ್ವದ ಸಂಕೇತವಾಗಿದೆ.

ಸಾಮಾಜಿಕ ಕಾರ್ಯಕರ್ತನೊಬ್ಬನ ಬದುಕು ಎಷ್ಟೇ ಕಷ್ಟಗಳಿಂದ ಕೂಡಿದಾಗ್ಯೂ ಅದನ್ನು ಎದುರಿಸುವ ಕೆಚ್ಚೆದೆ, ಸ್ವಾಭಿಮಾನ, ಧೈರ್ಯ ಬದುಕಿನ ಉತ್ಸಾಹವನ್ನು ಕುಗ್ಗಿಸಿಕೊಳ್ಳದೆ ಸಮುದಾಯದ ಜನರ ಬಾಳು ಹಸನಾಗಬೇಕೆಂಬ ಹಂಬಲ, ವಿವೇಕ, ಸಂಕಲ್ಪಗಳು ಅಲ್ಲಿ ನಾಶವಾಗುವುದಿಲ್ಲ. ಸಾರ್ಥಕ ಬದುಕು ಯಾವುದು ಎಂಬುದರ ಕಡೆಗೆ ಹೊಸ ನೋಟ ಬೀರುವಂತೆ ಅಲ್ಲಿ ಅವರ ಪಯಣ ಇರುತ್ತದೆ ಎಂಬುದನ್ನು ಈ ಆತ್ಮಕಥೆ ಹೇಳುತ್ತದೆ.

ವ್ಯಕ್ತಿಯೊಬ್ಬ ಸಾರ್ವಜನಿಕ ಬದುಕಿನಲ್ಲಿ ಅಧಿಕಾರಿಯಾಗಿಯೋ, ಸಾಮಾನ್ಯ ಮನುಷ್ಯನಾಗಿಯೋ ಪಡೆದ ಅನುಭವಕ್ಕಿಂತ ಭಿನ್ನವಾದ ಅನುಭವಗಳನ್ನು, ಸಾಮಾಜಿಕ ಕಾರ್ಯಕರ್ತನ ಬದುಕಿನಲ್ಲಿ ಪಡೆಯುವುದನ್ನು ಕಾಣಬಹುದಾಗಿದೆ. ಯಾಕೆಂದರೆ ಆತ ಇಲ್ಲಿ ಅನೇಕ ಸಾಮಾಜಿಕ, ರಾಜಕೀಯ, ಧಾರ್ಮಿಕ, ಆರ್ಥಿಕ, ಸವಾಲುಗಳನ್ನು ಎದುರಿಸಬೇಕಾಗಿರುತ್ತದೆ. ತಳಸಮುದಾಯದಿಂದ ಬಂದಂತಹ ಸಾಮಾಜಿಕ ಕಾರ್ಯಕರ್ತನ ಬಗ್ಗೆ ಸಾಂಪ್ರದಾಯಿಕ ಸಮಾಜವು ಇಂತಹ ಸವಾಲುಗಳನ್ನು ನಿರ್ಮಿಸುತ್ತದೆ. ಹೀಗೆ ಸವಾಲನ್ನು ನಿರ್ಮಿಸುವುದರ ಮುಖಾಂತರ ಅವನ ವೈಯಕ್ತಿಕ ಮತ್ತು ಸಾರ್ವಜನಿಕ ವ್ಯಕ್ತಿತ್ವದ ಬಗೆಗಿನ ಸಮಾಜದ ದೃಷ್ಟಿಕೋನಗಳು ಬಹಿರಂಗಗೊಳಿಸುತ್ತದೆ.

ಗಸ್ತಿಯವರು ತಮ್ಮ ಸಾರ್ವಜನಿಕ ಹಾಗೂ ವೈಯಕ್ತಿಕ ಬದುಕಿನ ಅನುಭವವನ್ನು ಆತ್ಮಕಥೆಯಲ್ಲಿ ಹಂಚಿಕೊಂಡಿದ್ದಾರೆ. ತಾವು ಅನುಭವಿಸಿದ ನೋವು, ಅಪಮಾನ, ಹತಾಷೆ, ವಿಷಾದಗಳನ್ನು ರೂಪಕ ಉಪಮೆಗಳ ಭಾಷೆ ಬಳಸಿ ಅಭಿವ್ಯಕ್ತಿಸಿದ್ದಾರೆ. ಇವರು ತಮ್ಮ ಬದುಕಿನ ವಿಶಿಷ್ಟ ಅನುಭವ ಹಂಚಿಕೊಳ್ಳುವ ಕಾರಣದಿಂದ ಲೇಖಕರಾದವರೇ ಹೊರತು ಸಾಹಿತ್ಯ ಅಭಿವ್ಯಕ್ತಿಯಲ್ಲಿ ಸಾಧನೆ ಮಾಡುವುದಕ್ಕಾಗಿ ಲೇಖಕರಾದವರಲ್ಲ.

ಆ. ಹೆಚ್ಚಿನ ಅಧ್ಯಯನದ ಸಾಧ್ಯತೆಗಳು :

ಸಮಾಜದ ತಳಸಮುದಾಯದ ಹಿನ್ನೆಲೆಯಲ್ಲಿ ಬಂದ ಸಾಮಾಜಿಕ ಕಾರ್ಯಕರ್ತನೊಬ್ಬನ ಆತ್ಮಕಥೆಯನ್ನು ಮಾತ್ರ ಇಟ್ಟುಕೊಂಡು ಸೀಮಿತ ನೆಲೆಯ ಅಧ್ಯಯನವನ್ನು ಇಲ್ಲಿ ಮಾಡಲಾಗಿದೆ. ಆದರೆ ಕನ್ನಡದಲ್ಲಿ ಬಂದಿರುವ ಸಮಾಜದ ತಳಸಮುದಾಯದ ಹಿನ್ನೆಲೆಯ ಲೇಖಕರು ಬರೆದ ಎಲ್ಲ ಆತ್ಮಕಥೆಗಳನ್ನು ಇಟ್ಟುಕೊಂಡು ವ್ಯಾಪಕವಾದ ಅಧ್ಯಯನ ಮಾಡುವ ಸಾಧ್ಯತೆ ಇದೆ.

ಸಾಮಾಜಿಕ ಕಾರ್ಯಕರ್ತರ ಹಾಗೂ ರಾಜಕೀಯ ವ್ಯಕ್ತಿಗಳ ಆತ್ಮಕಥೆಗಳನ್ನು ಪರಸ್ಪರ ತೌಲನಿಕವಾಗಿ ಅಧ್ಯಯನ ಮಾಡಿದರೆ ಕೆಲವು ಕುತೂಹಲಕರವಾದ ಸಂಗತಿಗಳು ತಿಳಿಯುತ್ತವೆ.

ಇದಕ್ಕಿಂತಲೂ ಸಾಹಿತ್ಯ, ವೈದ್ಯಕೀಯ, ಪತ್ರಿಕೋದ್ಯಮ, ಸಾರ್ವಜನಿಕ ಉನ್ನತ ಹುದ್ದೆಯಲ್ಲಿ ಕೆಲಸ ಮಾಡಿದವರ ಆತ್ಮಕಥೆಗಳ ಜೊತೆ ಜೊತೆಗೆ ಸಾಮಾಜಿಕ ಕಾರ್ಯಕರ್ತರ ಹಾಗೂ ರಾಜಕೀಯ ವ್ಯಕ್ತಿಗಳ ಆತ್ಮಕಥೆಗಳನ್ನು ಇಟ್ಟು ನೋಡುವುದರಿಂದ ಹೊಸ ಒಳನೋಟಗಳು ಸಿಗಬಹುದು.

ಸಾಮಾಜಿಕ ಕಾರ್ಯಕರ್ತನ ಆತ್ಮಕಥೆಯನ್ನು ಸಾಮಾಜಿಕ ಕಾರ್ಯಕರ್ತೆಯ ಆತ್ಮಕತೆಯೊಂದಿಗೆ ತೌಲನಿಕವಾಗಿ ಅಧ್ಯಯನ ಮಾಡುವ ಸಾಧ್ಯತೆ ಇದೆ. ಆಗ ಒಂದೇ ಕ್ಷೇತ್ರದಲ್ಲಿ ಕೆಲಸಮಾಡಿದ ಗಂಡು-ಹೆಣ್ಣಿನ ಅನುಭವಗಳ ಸ್ವರೂಪದಲ್ಲಿನ ಭಿನ್ನತೆಯು ಗೋಚರವಾಗಬಹುದು.

ಗಸ್ತಿಯವರ 'ವಾಲ್ಮೀಕಿ' ಆತ್ಮಕಥೆ ಅನೇಕ ದೃಷ್ಟಿಯಿಂದ ಮಹತ್ವಪೂರ್ಣ ಕೃತಿಯಾಗಿದೆ. ಇದನ್ನು ನೋಡುವ ಅಧ್ಯಯನದ ವಿಧಾನಗಳು ಬದಲಾಯಿಸಿದಂತೆಲ್ಲಾ ಹೊಸ ನೋಟಗಳನ್ನು ಇದು ಬಿಟ್ಟುಕೊಡುತ್ತದೆ. ಹೀಗಾಗಿ ಈ ಆತ್ಮಕತೆಯನ್ನು ಸಾಹಿತ್ಯಿಕವಾಗಿ ಮಾತ್ರ ನೋಡದೆ, ಸಾಮಾಜಿಕವಾಗಿ, ಚಾರಿತ್ರಿಕವಾಗಿ, ಸಾಂಸ್ಕೃತಿಕವಾಗಿ ಮುಂತಾದ ವಿಧಾನಗಳಿಂದಲೂ ಅಭ್ಯಸಿಸಿದಾಗ ಹೊಸ ನೋಟಗಳನ್ನು ಪಡೆಯಲು ಸಾಧ್ಯವಾಗಬಹುದು.

ಕನ್ನಡದ ಆತ್ಮಕಥೆಗಳು ಮತ್ತು ಅನ್ಯ ಭಾಷೆಯಿಂದ ಅನುವಾದಗೊಂಡ ಆತ್ಮಕಥೆಗಳ ನಡುವೆ ಇರುವ ಭಿನ್ನತೆ ಕೊಡುಕೊಳ್ಳುವಿಕೆ ಪ್ರೇರಣೆ ಹಾಗೂ ನಿರಾಕರಣೆಗಳನ್ನು ಅರಿಯುವ ದೃಷ್ಟಿಯಿಂದ ಅಧ್ಯಯನ ಮಾಡುವ ಸಾಧ್ಯತೆಗಳಿವೆ.

ಕನ್ನಡಕ್ಕೆ ಅನುವಾದಗೊಂಡ ಆತ್ಮಕಥೆಗಳು ಮತ್ತು ಕನ್ನಡದ ಆತ್ಮಕಥೆಗಳ ನಡುವಿನ ಭಾಷಿಕ ಸ್ವರೂಪ ಅರಿಯುವ ಅಧ್ಯಯನದ ಸಾಧ್ಯತೆ ಇದೆ. ಬೇಡರ ಸಮುದಾಯದ ವಿವಿಧ ಪ್ರಕಾರಗಳಲ್ಲಿ ಮೂಡಿಬಂದಿರುವ ಆತ್ಮಕತೆಗಳೊಂದಿಗೆ ವಾಲ್ಮೀಕಿ ಆತ್ಮಕಥೆಯನ್ನು ತೌಲನಿಕವಾಗಿ ಅಧ್ಯಯನ ಮಾಡುವ ಸಾಧ್ಯತೆ ಇದೆ.

ಕನ್ನಡ ಸಾಹಿತ್ಯದಲ್ಲಿ ತಮ್ಮ ವಿಶಿಷ್ಟ ಅನುಭವ ಹಾಗೂ ನಿರೂಪಣ ಕ್ರಮಗಳಿಂದ ಮಹತ್ವ ಪಡೆದಿರುವ ಆತ್ಮಕಥೆಗಳ ಸಂಖ್ಯೆ ಬಹಳ ಇಲ್ಲ. ಹಾಗೆ ಅನನ್ಯತೆ ಪಡೆದಿರುವ ಆತ್ಮಕಥೆಗಳಲ್ಲಿ ಭೀಮರಾವ್ ಗಸ್ತಿಯವರ 'ವಾಲ್ಮೀಕಿ'ಯೂ ಒಂದು. ವಿಶೇಷವೆಂದರೆ ಈ ಆತ್ಮಕಥೆ ಬರೆದ ವ್ಯಕ್ತಿ ಕರ್ನಾಟಕದವರಾಗಿದ್ದರೂ ಇದು ಮೊದಲು ಹುಟ್ಟಿದ್ದು ಮರಾಠಿ ಭಾಷೆಯಲ್ಲಿ. ಆದರೆ ಇದು ತನ್ನ ಕನ್ನಡ ಅನುವಾದದಲ್ಲಿ ಕನ್ನಡದಲ್ಲೇ ಬರೆಯಲಾದ ಆತ್ಮಕಥೆಗಳಷ್ಟೇ ಗಮನ ಸೆಳೆದುಕೊಂಡಿದೆ.

ಆತ್ಮಕಥೆಗಳ ಅಧ್ಯಯನವು ಸಾಂಸ್ಕೃತಿಕ ಅಧ್ಯಯನವೆನಿಸಿಕೊಳ್ಳಲು ಕೇವಲ ವಿಧಾನಗಳು ಸಾಲುವುದಿಲ್ಲ. ಅದಕ್ಕೆ ತಕ್ಕ ಆಕರಗಳೂ ಬೇಕಾಗುತ್ತವೆ. 'ವಾಲ್ಮೀಕಿ' ಇಂಥ ಒಂದು ಆಕರವಾಗಿದೆ.

ಅನುಬಂಧ

ಅಭ್ಯಾಸ ಸೂಚಿ

ಅ. ಪರಾಮರ್ಶನ ಗ್ರಂಥಗಳು

೧. ಅರವಿಂದ ಮಾಲಗತ್ತಿ, ೧೯೯೪, ಗೌರ್ಮೆಂಟ್ ಬ್ರಾಹ್ಮಣ, ಅಭಿರುಚಿ ಪ್ರಕಾಶನ, ಮೈಸೂರು

೨. ಅರ್ಜುನ ಗೊಳಸಂಗಿ, ೨೦೦೩, ಕನ್ನಡ ದಲಿತ ಸಾಹಿತ್ಯ ಸಮಾಲೋಕನ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೩. ಜಾಣಗೆರೆ ವೆಂಕಟರಾಮಯ್ಯ, ೨೦೦೫, ಪತ್ರಿಕೋದ್ಯಮ ಮತ್ತು ಚಳುವಳಿ, ಪ್ರೆಸ್‌ಕ್ಲಬ್ ಆಫ್ ಬೆಂಗಳೂರು

೪. ತುಂಬಾಡಿ ರಾಮಯ್ಯ, ೨೦೦೬, ಮಣೆಗಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು

೫. ನಾಗರತ್ನ ಡಿ., ರಂಗಭೂಮಿ ಕಲಾವಿದರ ಆತ್ಮ ಚರಿತ್ರೆಗಳ ವಿಶ್ಲೇಷಣೆ (ಅಪ್ರಕಟಿತ, ಎಂ.ಫಿಲ್ ಪ್ರಬಂಧ–೨೦೧೦)

೬. ಪುಟ್ಟಯ್ಯ. ಬಿ.ಎಂ., ೧೯೯೯, ಆತ್ಮಕಥೆಗಳಲ್ಲಿ ಕರ್ನಾಟಕ ಕಥೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

೭. ಪ್ರಭಾಕರ ಎ.ಎಸ್. ೨೦೦೬, ಆದಿವಾಸಿ ವಾಖ್ಯಾನ: ಸಮುದಾಯಗಳ ಅಧ್ಯಯನಕ್ಕೊಂದು ಆಕರ, ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ

೮. ಪ್ರಭಾಕರ ಎ.ಎಸ್. ೨೦೦೪, ಬುಡಕಟ್ಟು ಅಭಿವೃದ್ಧಿ ವಿಮಾಂಸೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

೯. ಭೀಮರಾವ್ ಗಸ್ತಿ, ೨೦೦೮, ವಾಲ್ಮೀಕಿ ಆತ್ಮಕಥೆ(ಅನು.) ಡಾ. ಸರಜೂ ಕಾಟ್ಕರ್, ಸೃಷ್ಟಿ ಪಬ್ಲಿಕೇಷನ್ಸ್, ಬೆಂಗಳೂರು

೧೦. ಮೋಕ್ಷ ಬೇವಿನಹಾಳ, ೧೯೯೧, ಆಳುವ ವರ್ಗ ಮತ್ತು ಶಿಕ್ಷಣ, ವಿಶ್ಲೇಷಣ ಪ್ರಕಾಶನ, ಬೇವಿನಹಾಳ

೧೧. ವಿರೂಪಾಕ್ಷಿ ಪೂಜಾರಹಳ್ಳಿ, ೨೦೦೭, ಬೇಟೆ ಮತ್ತು ಬೇಡರು, ಚಿನ್ನಹಗರಿ ಪ್ರಕಾಶನ, ಕೆ.ಬಿ. ಹಟ್ಟಿ.

೧೨. ಲಕ್ಷ್ಮಣ ಗಾಯಕವಾಡ, ೧೯೯೪, ಉಚಲ್ಯಾ, ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು

೧೩. ವಿರೂಪಾಕ್ಷಿ ಪೂಜಾರಹಳ್ಳಿ, ೨೦೦೮, ಬೇಡ ಬುಡಕಟ್ಟಿನ ಚರಿತ್ರೆ ಮತ್ತು ಸಂಸ್ಕೃತಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

೧೪. ವಿರೂಪಾಕ್ಷಿ ಪೂಜಾರಹಳ್ಳಿ, ೨೦೦೬, ವಾಲ್ಮೀಕಿ ಸಿರಿ, ಚಿನ್ನಹಗರಿ ಪ್ರಕಾಶನ, ಕೆ.ಬಿ. ಹಟ್ಟಿ

೧೫. ಶರಣಮ್ಮ ಅ. ಗೋರಬಾಳ, ೨೦೦೨, ಕನ್ನಡ ಸಾಹಿತ್ಯದಲ್ಲಿ ಆತ್ಮಚರಿತ್ರೆ, ದಲಿತ ಸಾಹಿತ್ಯ ಪರಿಷತ್, ಗದಗ

ಆ. ಲೇಖನ

೧. ರಹಮತ್ ತರೀಕೆರೆ, 'ಆತ್ಮಕಥೆ: ಕನ್ನಡ ಗದ್ಯದ ಅಧೋಲೋಕ' ದೇಶಕಾಲ ಸಂಚಿಕೆ–೧೪, ಜುಲೈ–ಸೆಪ್ಟಂಬರ್, ೨೦೦೮.

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ